# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೨೧ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೬ ಸಂಚಿಕೆ: ೧೨

ಚಂದಾ ರೂ. ೨೦೦/- (ಅಕ್ಟೋಬರ್‌ನಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ಸಂಚಿಕೆ ತಲುಪಿದ ಕೂಡಲೇ ತುಮಕೂರಿನ ನನ್ನ ಓದುಗ ಗೆಳೆಯರೊಬ್ಬರು ಕರೆ ಮಾಡಿ ಆ ಸಂಚಿಕೆಯಲ್ಲಿನ ಸಂಪಾದಕೀಯವನ್ನು ಪ್ರಸ್ತಾಪಿಸುತ್ತಾ, 'ನೀವೆಲ್ಲ ಕಾಂಗ್ರೆಸ್ ಮತ್ತೆ ತಲೆ ಎತ್ತದಂತೆ ಮಾಡುತ್ತಿದ್ದೀರೀ! ಏನ್ಸಾರ್, ನೀವು ಅದರ ಕುತ್ತಿಗೆಗೇ ಕೈಹಾಕಿ ಬರೆಯುತ್ತೀರಿ! ಪ್ರಜಾಪ್ರಭುತ್ವಕ್ಕೆ ಇದು ಒಳ್ಳೆದಲ್ಲ!' ಎಂದು ತೀವ್ರವಾಗಿಯೇ ಆಕ್ಷೇಪಿಸಿದರು. ಜೊತೆಗೆ ಕಾಂಗ್ರೆಸ್ ಕುರಿತ ತಮ್ಮ ಸಹಾನುಭೂತಿಯನ್ನು, 'ಕುಟುಂಬ ರಾಜಕಾರಣವೇನು ಬಿಜೆಪಿಯಲ್ಲಿ ಇಲ್ವಾ ಸಾರ್?' ಎಂಬ ಪ್ರಶ್ನೆಯನ್ನೂ ಹಾಕಿದರು. ನನಗೆ ಸ್ವಲ್ಪ ಗೊಂದಲವಾದಂತಾಗಿ ಸದರಿ ಸಂಚಿಕೆಯನ್ನು ತೆಗೆದು ಸಂಪಾದಕೀಯದ ಮೇಲೆ ಕಣ್ಣಾಡಿಸಿದೆ. ಅದು ನೋಡಿದರೆ ಸಾರಾಸಗಟಾಗಿ ಬಿಜೆಪಿಯನ್ನು ಅದರ ಅಪ್ರಜಾಸತ್ತಾತ್ಮಕ ನಡೆಗಳಿಗಾಗಿ ಉದಾಹರಣೆ ಸಹಿತ ತರಾಟೆಗೆ ತೆಗೆದುಕೊಂಡುದದಾಗಿತ್ತು. ಕೊನೆಯಲ್ಲಿ ಬಿಜೆಪಿಯ ಈ ಆಟಾಟೋಪಗಳಿಗೆ ಕಾಂಗ್ರೆಸ್‌ನ ರಾಜಕೀಯ ದುರ್ವರ್ತನೆಗಳೇ ದಾರಿ ಮಾಡಿಕೊಟ್ಟಿರುವುದೆಂದು ಸೂಚಿಸುತ್ತಾ ಇದಕ್ಕೆ ಕಾಂಗ್ರೆಸ್ ತನ್ನ ಉಜ್ವಲ ಚರಿತ್ರೆಯನ್ನು ಮರೆತಿರುವುದೇ ಕಾರಣವೆಂದು ವಿವರಿಸಲಾಗಿತ್ತು. ಜೊತೆಗೆ ಪಕ್ಷ ಹೇಗೆ ತನ್ನನ್ನು ತಾನು ಪುನರುಜ್ಜೀವನಗೊಳಿಸಿಕೊಳ್ಳಬಹುದೆಂದೂ, ಕಾಂಗ್ರೆಸ್‌ನ ಪುನರುಜ್ಜೀವನವಿಲ್ಲದೆ ರಾಷ್ಟ್ರದ ಪ್ರಜಾಪ್ರಭುತ್ವ ಉಳಿಯಲಾರದು ಎಂದು ಹೇಳಿದ್ದೆ.

ತುಮಕೂರಿನ ನನ್ನ ಗೆಳೆಯರಿಗೆ ನನ್ನ ಈ ಸಂಪಾದಕೀಯ ಅರ್ಥವಾದಂತಿರಲಿಲ್ಲ. ಕಾಂಗ್ರೆಸ್ ಅಭಿಮಾನಿಯಾದ ಅವರ ಆ ಅಭಿಮಾನ ಬಿಜೆಪಿ ವಿರೋಧಿ ಭಾವನೆಯಿಂದ ಹುಟ್ಟಿದಂತಿತ್ತೇ ಹೊರತು ಕಾಂಗ್ರೆಸ್ ಕುರಿತ ಕಾಳಜಿಯಿಂದಲ್ಲ. ಈ ಬಿಜೆಪಿ ವಿರೋಧಿ ಭಾವನೆ ಹುಟ್ಟಿರುವುದೂ ಆರೆಸ್ಸೆಸ್ ಕುರಿತ ವಿರೋಧದಿಂದ. ಆರೆಸ್ಸೆಸ್ ವಿರೋಧ ಏಕೆಂದರೆ ಅದು ಕೋಮುವಾದಿ ಸಂಘಟನೆಯೆಂದಲ್ಲ; ಮೇಲ್ಜಾತಿಗಳ ಸಂಘಟನೆ ಎಂದು! ನಮ್ಮ ಸಿದ್ಧರಾಮಯ್ಯನವರೂ ಸೇರಿದಂತೆ ಕಾಂಗ್ರೆಸ್ಸಿಗರಾರಿಗೂ, ಬಿಜೆಪಿ ರಾಜಕಾರಣ ಅರ್ಥವಾದಂತಿಲ್ಲ. ಅವರು ಇತ್ತೀಚೆಗೆ ಗೋಹತ್ಯಾ ನಿಷೇಧ ಕಾಯ್ದೆಯನ್ನು ಟೀಕಿಸುತ್ತಾ, ಅದು ಆರೆಸ್ಸೆಸ್ ಕಾರ್ಯಕ್ರಮ ಎಂದರು, ತಾವು ಹೊಸ ವಿಷಯವೊಂದನ್ನು ಹೇಳುತ್ತಿರುವಂತೆ ಮತ್ತು ಜನ ಆರೆಸ್ಸೆಸ್ ಎಂದಾಕ್ಷಣ ಆತಂಕಿತರಾಗುವರು ಎಂಬಂತೆ! ಯಾವ ಕಾಲದಲ್ಲಿದ್ದಾರೆ ಇವರೆಲ್ಲ? ಇವರ ರಾಜಕೀಯ ಜ್ಞಾನವಾದರೂ ಎಷ್ಟು ಆಳವಾದದ್ದು? ಇವರಿಗೆಲ್ಲ ಕಾಂಗ್ರೆಸ್ ಸೋಲು ಎಂದರೆ ತಮಗಾದ ಅಧಿಕಾರ ವಂಚನೆ ಎಂಬಷ್ಟರ ಮಟ್ಟಿಗೆ ಅರ್ಥವಾಗಿದೆಯೇ ಹೊರತು ಈ ಅಧಿಕಾರ ವಂಚನೆಗೆ ಕಾರಣವಾದ ಸೋಲು ಏಕಾಯಿತು ಎಂಬ ಪ್ರಶ್ನೆಯ ಬಳಿಯೇ ಇವರು ಸುಳಿಯಲಾರರು. ಅಧಿಕಾರ ವಂಚನೆ ಅವರನ್ನು ಅಷ್ಟು ವಿಚಲಿತಗೊಳಿಸಿದೆ. ಅದಕ್ಕೆ ಕಾರಣ, ಅವರು ಅಧಿಕಾರವನ್ನು ಒಂದು ಸುಖ ಸವಲತ್ತಾಗಿ ಅನುಭವಿಸಿದ್ದು. ಸಿದ್ಧರಾಮಯ್ಯನವರ ಇತ್ತೀಚಿನ ಹೇಳಿಕೆ ನೋಡಿ: 'ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅವರ ಸೋಲಿಗೆ ತಮ್ಮ ಪಕ್ಷದೊಳಗಿನವರೂ ಸೇರಿದಂತೆ ತಮ್ಮೆಲ್ಲ ಶತ್ರುಗಳೂ ಒಟ್ಟಾಗಿದ್ದು ಕಾರಣವಂತೆ! ಆದರೆ ಅವರು ತಮ್ಮ ವರುಣಾ ಕ್ಷೇತ್ರವನ್ನು ತಮ್ಮ ಮಗನಿಗೆ ಬಿಟ್ಟುಕೊಟ್ಟು ಅವರನ್ನು ಗೆಲ್ಲಿಸಿಕೊಂಡ ರಾಜಕಾರಣದ ಬಗ್ಗೆ ಹೇಳುವುದಿಲ್ಲ. ಹಾಗೇ ತಮ್ಮ ಪಕ್ಷದೊಳಗೆ ತಮ್ಮ ಶತ್ರುಗಳು ಏಕೆ ಸೃಷ್ಟಿಯಾದರು ಎಂದು ಯೋಚಿಸುವುದಿಲ್ಲ. ಒಕ್ಕಲಿಗರೇ ಹೆಚ್ಚಾಗಿದ್ದ ಚಾಮುಂಡೇಶ್ವರಿ ಕ್ಷೇತ್ರ ತಮ್ಮನ್ನು ಹಲವು ಬಾರಿ ಗೆಲ್ಲಿಸಿದುದು ಏಕೆ ಈಗ ತಮ್ಮ ವಿರುದ್ಧ ತಿರುಗಿ ಬಿದ್ದು, ತಾವು ಎಲ್ಲಬಿಟ್ಟು ಬಾದಾಮಿ ಕ್ಷೇತ್ರದೆಡೆಗೆ ರಾಜಕೀಯ ಉಳಿವಿಗಾಗಿ ಓಡಬೇಕಾಯಿತು ಎಂದು ಯೋಚಿಸುವುದಿಲ್ಲ. ಕಾಂಗ್ರೆಸ್ ಸೋಲಿಗೆ ಈ ಪ್ರಶ್ನೆಗಳಲ್ಲೇ ಉತ್ತರವಿದೆ. ಚುನಾವಣೆಯಲ್ಲಿನ ಸೋಲಿಗೆ ತಮ್ಮ ಶತ್ರುಗಳೆಲ್ಲ ಒಟ್ಟಾಗಿದ್ದೇ ಕಾರಣವೆಂಬ ನಗೆಪಾಟಲಿನ ಉತ್ತರ ಕಂಡುಕೊಳ್ಳುವ ಪೆದ್ದುತನ ತೋರದೆ ಕಾಂಗ್ರೆಸ್ಸಿಗರು ವೈಯಕ್ತಿಕ ನೆಲೆಯ ಕಾರಣಗಳನ್ನು ಹುಡುಕಿಕೊಳ್ಳುವ ಬದಲು ಒಂದಿಷ್ಟು ತಾತ್ವಿಕ ನೆಲೆಯ ಆತ್ಮಾವಲೋಕನ ಮಾಡಿಕೊಳ್ಳುವ ಕಾಲವೀಗ ಬಂದಿದೆ. ಚುನಾವಣೆ ಎಂದರೆ ಶತ್ರುಗಳು ಒಂದಾಗದೆ ಇವರಿಗೆ ಬೆಂಬಲವಾಗಿ ನಿಲ್ಲಬೇಕೆಂದು ಸಿದ್ಧರಾಮಯ್ಯ ನಿರೀಕ್ಷಿಸುವರೇ?

ತಾತ್ವಿಕ ನೆಲೆಯ ಆತ್ಮಾವಲೋಕನ ಎಂದೆ. ಇದಕ್ಕೆ ಕಾರಣ, ನಾವು ಅದನ್ನು ಒಪ್ಪಬಹುದು, ಬಿಡಬಹುದು, ಬಿಜೆಪಿ ಮಾಡುತ್ತಿರುವುದು ತಾತ್ವಿಕ ರಾಜಕಾರಣವನ್ನು. ಆ ತಾತ್ವಿಕ ರಾಜಕಾರಣವನ್ನು ಮಾಡುವಾಗ ಅದು ನನ್ನ ಗೆಳೆಯರು ಕೇಳುವ 'ಅದರಲ್ಲಿಯೂ ಕುಟುಂಬ ರಾಜಕಾರಣವಿಲ್ಲವೆ?' ಎಂಬ ಪ್ರಶ್ನೆಗೆ ಮತ್ತು ಬಿಜೆಪಿ ರಾಜಕಾರಣವನ್ನು ತಾತ್ವಿಕವಾಗಿಯೇ ವಿರೋಧಿಸುವ ರಾಜಕೀಯ ವಿಶ್ಲೇಷಕರು ಕೇಳುವ ಕರ್ನಾಟಕ, ಗೋವಾ, ಮಧ್ಯಪ್ರದೇಶ ಮುಂತಾದೆಡೆಗಳಲ್ಲಿ ನಡೆಸಿದ 'ಆಪರೇಷನ್ ಕಮಲ' ನೈತಿಕವೇ ಎಂಬ ಪ್ರಶ್ನೆಗಳಿಗೆ ಅವಕಾಶವಿರುವಂತಹ ಅನೈತಿಕ ರಾಜಕಾರಣ ಮಾಡುತ್ತಿರಬಹುದು. ಆದರೆ ಬಿಜೆಪಿಗೆ ಇಂತಹ ಚಿಲ್ಲರೆ ನೈತಿಕ ಪ್ರಶ್ನೆಗಳನ್ನು ಮೀರಿದ ಒಂದು ದೊಡ್ಡ ಗುರಿ ಇದೆ. ಅದೇನು ಗುರಿಯಷ್ಟೇ ಮಾರ್ಗವೂ ನೈತಿಕವಾಗಿರಬೇಕೆಂಬ ಗಾಂಧಿ ನಂಬಿಕೆಯನ್ನು ಒಪ್ಪಿದ ಪಕ್ಷವೆ? ಬದಲಿಗೆ ಅವರ ಇಂತಹ ವಿಚಾರಗಳನ್ನು ವಿರೋಧಿಸಿ ರಾಜಕಾರಣ ಮಾಡಿದವರ ವಾರಸುದಾರಿಕೆ ಇರುವ ಪಕ್ಷವಿದು. . ಹಾಗಾಗಿ ತನ್ನ ಮಹಾಗುರಿಯತ್ತ ಸಾಗಲು ಅದು ಏನು ಮಾಡಲೂ ತಯಾರಾಗಿದೆ. ಅದು ಆ ಗುರಿ ಮುಟ್ಟಿದ ದಿನ ಅದು ಈಗ ಚಲಾವಣೆಗೆ ತಂದಿರುವ 'ಕಾಂಗ್ರೆಸ್‌ಮುಕ್ತ ಭಾರತ' ಯಶಸ್ವಿಯಾದಾಗ ಭಾರತದ ರಾಜಕಾರಣ ಮಾತ್ರವಲ್ಲ, ಇತಿಹಾಸದ ಹೊಸ ಶಕೆ ಆರಂಭವಾಗುತ್ತದೆ ಮತ್ತು ಆ ಹೊಸ ಶಕೆ ಎಂಥಹುದಾಗಿರುತ್ತದೆ ಎಂಬುದನ್ನು ಅರಿಯದ ಹೊರತು ಅದನ್ನು ಯಾರೂ ಎದುರಿಸಲಾಗದು. ಇದು ಹಾಲುಹಸುಳೆಯ ಬುದ್ಧಿಮಟ್ಟದಿಂದ ಮೇಲೇಳಲು ನಿರಾಕರಿಸುತ್ತಿರುವ ರಾಹುಲ್ ಗಾಂಧಿಯವರಿಗಾದರೂ ಹೇಗೆ ಅರ್ಥವಾಗುವುದು? ಅವರನ್ನು ಬಿಟ್ಟು ಅನ್ಯ ದೇವರಿಲ್ಲ ಎಂದು ನಂಬಿ ಸಾಗಿರುವ ಕಾಂಗ್ರೆಸ್ ನಾಯಕರಿಗಾದರೂ ಹೇಗೆ ಅರ್ಥವಾಗಬೇಕು? ರಾಹುಲರಿಗೆ ಅರ್ಥವಾಗಿದ್ದರೆ ಅವರೆಂದೋ ತಾವು ಕಾಂಗ್ರೆಸ್ ನಾಯಕತ್ವ ವಹಿಸಲಾರೆ ಎಂದು ಘೋಷಿಸಿ ಪರ್ಯಾಯ ನಾಯಕತ್ವದ ಸಾಧ್ಯತೆಗೆ ಅವಕಾಶ ಮಾಡಿಕೊಡುತ್ತಿದ್ದರು. ಇವರಿಂದು ಪ್ರತಿನಿಧಿಸುವ ಕುಟುಂಬ ರಾಜಕಾರಣ, ಬಿಜೆಪಿ ನಿರ್ಣಾಯಕವಾಗಿ ಬೆಳೆಯಲು ಕಾರಣವಾದು ಹಲವು ಅಪ್ರಬುದ್ಧ ನಿರ್ಧಾರಗಳನ್ನು ತೆಗೆದುಕೊಂಡ ಇವರ ತಂದೆ ರಾಜೀವ್ ಗಾಂಧಿ ಪ್ರಧಾನಿ ಗದ್ದುಗೆಗೇರಲು ಮತ್ತು ಅದಕ್ಕಿಂತ ಮುಖ್ಯವಾಗಿ ಪ್ರಣಬ್ ಮುಖರ್ಜಿಯವರಂತಹ ಸಮರ್ಥರ ನಾಯಕತ್ವದಿಂದ ಕಾಂಗ್ರೆಸ್ ವಂಚಿತವಾಗಿ ಅಡ್ಡದಾರಿ ಹಿಡಿಯಲು ಕಾರಣವಾಯಿತು. ಇಷ್ಟೇ ಅಲ್ಲ ಈ ವಂಶ ರಾಜಕಾರಣವನ್ನು ಪೊರೆಯಲೆಂದೇ, ಬಿಜೆಪಿಯೇತರ ವಲಯದಲ್ಲಿ ಮೋದಿಯವರಿಗೆ ಸವಾಲಾಗಬಲ್ಲ ಸಾಮರ್ಥ್ಯವಿದ್ದ ಏಕೈಕ ನಾಯಕರಾಗಿದ್ದ ನಿತೀಶ್‌ಕುಮಾರ್‌ರನ್ನು ಬಿಜೆಪಿಯ ತೆಕ್ಕೆ ಸೇರುವಂತಹ ಅಸಹಾಯಕತೆಯನ್ನು ಸೃಷ್ಟಿಸಲಾಯಿತು

ಹಾಗಾಗಿಯೇ, ತಮ್ಮ ಪಕ್ಷಕ್ಕೆ ಸಂಬಂಧಿಸಿದ ಇದಾವುದರ 'ಜಾಗೃತಿ'ಯೂ ಇಲ್ಲದ ಸಿದ್ಧರಾಮಯ್ಯ ಗೋಹತ್ಯೆ ನಿಷೇಧ ಕಾಯ್ದೆ ಆರೆಸ್ಸೆಸ್ ಕಾರ್ಯಕ್ರಮವೆಂದು ಜನರನ್ನು 'ಜಾಗೃತ'ಗೊಳಿಸಲು ಹೇಳಿರುವದು! ಅಂದರೆ ಅವರಿಗೆ ಬಿಜೆಪಿ ಮತ್ತು ಆರೆಸ್ಸೆಸ್‌ಗೂ ಇರುವ ತಾತ್ವಿಕ ಮತ್ತು ಐತಿಹಾಸಿಕ ಸಂಬಂಧದ ಆಳದ ಅರಿವೇ ಇಲ್ಲ ಎನ್ನಬೇಕು. ಆರೆಸ್ಸೆಸ್ ಸ್ಥಾಪಿತವಾದದ್ದೇ ಗಾಂಧಿ ರಾಜಕಾರಣ ಕುರಿತ ಅಸಮಧಾನದಿಂದ; ಆ ರಾಜಕಾರಣವನ್ನು ಹಿಂದುತ್ವದ ರಾಜಕಾರಣದ ಮೂಲಕ ಎದುರಿಸಿ ಗಾಂಧಿ ಕಲ್ಪನೆಯ ನವ ಭಾರತಕ್ಕೆ ಪರ್ಯಾಯವಾಗಿ ತನ್ನದೇ ನವ ಭಾರತ ನಿರ್ಮಾಣಕ್ಕಾಗಿ. ಅದನ್ನು ರಾಜಕೀಯವಾಗಿ ಸಾಕಾರಗೊಳಿಸಲು ಅದು ಹುಟ್ಟು ಹಾಕಿದ್ದೆ ಜನಸಂಘ ಎಂಬ ಪಕ್ಷ. ಅದೀಗ ಹಲವು ಏಳುಬೀಳುಗಳ ನಡುವೆ ಭಾರತೀಯ ಜನತಾ ಪಕ್ಷವಾಗಿ ರೂಪುಗೊಂಡು ಸಶಕ್ತವಾಗಿ ಬೆಳೆದು ನಿಂತಿದೆ. ಇದು ಸಾಧ್ಯವಾಗಿರುವುದು ಆರೆಸ್ಸೆಸ್ ಸ್ವಯಂಸೇವಕರ ಪಡೆಯಿಂದ ಕೊಡುಗೆಯಾಗಿ ಬಂದು ಪಕ್ಷಕ್ಕೆ ಸರ್ವಸಮರ್ಪಿತರಾಗಿ ಬೆಳೆದ ನಾಯಕರಿಂದ. ಸಿದ್ಧರಾಮಯ್ಯನವರೊಮ್ಮೆ ಆರೆಸ್ಸೆಸ್ ಮತ್ತು ಬಿಜೆಪಿಯಲ್ಲಿನ ಇಂದಿನ ಜಾತಿ ಸ್ವರೂಪವನ್ನು ಗಮನಿಸಲಿ. ನಂತರ ತಮ್ಮ ಸಾಮಾಜಿಕ ನ್ಯಾಯ ರಾಜಕಾರಣ ಎಷ್ಟು ತಲೆಕೆಳಗಾಗಿದೆ ಮತ್ತು ಏಕೆ ಎಂದು ಅರಿತು ಆರೆಸ್ಸೆಸ್ ಭೂತದ ಹೆದರಿಕೆ ಹುಟ್ಟಿಸುವ ಮಾತಾಡಲಿ.

ಕಾಂಗ್ರೆಸ್ ಎಂದರೆ ಕಾಂಗ್ರೆಸ್ ಮಾತ್ರವಲ್ಲ. ಏಕೆಂದರೆ ಭಾರತದ ಬಹುಪಾಲು

ಬಿಜೆಪಿಯೇತರ ಪಕ್ಷಗಳೆಲ್ಲವೂ ಮೂಲತಃ ಕಾಂಗ್ರೆಸ್‌ನಿಂದ ಅದರ ಯಜಮಾನಿಕೆಯ ರಾಜಕಾರಣವನ್ನು ಧಿಕ್ಕರಿಸಿದ ನಾಯಕರಿಂದ ಒಡಮೂಡಿದ ಪಕ್ಷಗಳೇ. ಹಾಗಾಗಿ ಇಂದು ಅವೆಲ್ಲವೂ, ಮೊನ್ನೆ ಪ್ರಧಾನಿ ನರೇಂದ್ರ ಮೋದಿಯವರು ಹೊಸ ಸಂಸತ್ ಭವನದ ಕಟ್ಟಡಕ್ಕಾಗಿ ಶಿಲಾನ್ಯಾಸ ಮಾಡುತ್ತಾ ಆಡಿದ 'ನವ ಭಾರತ'ಕ್ಕಾಗಿ ನವ ಸಂಸತ್ ಭವನ' ಎಂಬ ಮಾತಿನ ಆಳದ ಅರ್ಥವನ್ನು ಅರಿಯಲು ಯತ್ನಿಸಬೇಕು. ಅವರು ಹೇಳುತ್ತಿದ್ದಾರೆ, ೧೯೪೭ರಲ್ಲಿ ಜನಿಸಿದ ನವಭಾರತದ ಕಾಲ ಮುಗಿಯಿತು; ಹೊಸದೊಂದು 'ನವ ಭಾರತ' ಅನಾವರಣವಾಗಿದೆ ಎಂದು. ಈ ಹೊಸ ನವಭಾರತದ ಲಕ್ಷಣಗಳು ಎದ್ದು ಕಾಣತೊಡಗಿವೆ. ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣಕ್ಕೆ ಅಭಿಯಾನ, ೩೭೦ನೇ ವಿಧಿಯ ರದ್ದತಿ, ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ, ಪೌರತ್ವ ನೋಂದಣಿ ಕಾರ್ಯಕ್ರಮದ ಪ್ರತಿಪಾದನೆ, ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ವಾಯತ್ತೆಯ ನಾಶ. ಇವುಗಳ ಜೊತೆಗೇ ನಡೆದಿರುವ ಇನ್ನೊಂದು ಬೆಳವಣಿಗೆಯನ್ನೂ ನಾವು ಗಮನಿಸಬೇಕು. ಅದು ಭಾರತದ ಚರಿತ್ರೆಯ ಪುನರ್ವ್ಯಾಖ್ಯಾನ ಮತ್ತು ಮರು ನಿರೂಪಣೆ, ವಿಶೇಷವಾಗಿ ಗಾಂಧಿ ಕೇಂದ್ರಿತ ಸ್ವಾತಂತ್ರ್ಯ ಹೋರಾಟವನ್ನು ಬಹುಕೇಂದ್ರಿತ ಹೋರಾಟವನ್ನಾಗಿ ಮರು ವ್ಯಾಖ್ಯಾನ ಮಾಡಿ ಗಾಂಧಿ ಪ್ರಣೀತ ಸತ್ಯ, ಪ್ರೇಮ, ಅಹಿಂಸೆಗಳೆಂಬ ಮೌಲ್ಯಗಳನ್ನಾಧರಿಸಿದ ಧರ್ಮ ಮತ್ತು ರಾಷ್ಟ್ರದ ಕಲ್ಪನೆಗಳನ್ನು ಏಕರೂಪಿ ಕ್ಷಾತ್ರ ಧರ್ಮ ಮತ್ತು ರಾಷ್ಟ್ರವನ್ನು ಪ್ರತಿಪಾದಿಸುವ ಮೌಲ್ಯಗಳನ್ನು ಪ್ರಚುರಪಡಿಸುವುದು. ಈಗಾಗಲೇ ಗಾಂಧಿಯವರನ್ನು ರಾಷ್ಟ್ರಪಿತ ಸ್ಥಾನದಿಂದ ಉಚ್ಚಾಟಿಸಿ ಗೋಡ್ಸೆ ಅಥವಾ ಸಾವರ್ಕರ್‌ರನ್ನು ಆ ಸ್ಥಾನಕ್ಕೇರಿಸಬೇಕೆಂಬ ಕೂಗುಗಳು ಕೇಳೀಬರುತ್ತಿವೆ. ಈ ಕೂಗುಗಳು ಕ್ಷೀಣವಾಗಿವೆ ಎಂಬುದು ನಿಜ. ಅದಕ್ಕಿಂತ ಮುಖ್ಯವಾಗಿ ಅದು ಕೇಳಿಬರುತ್ತಿದೆ ಮತ್ತು ಅದನ್ನು ಪ್ರಭುತ್ವ ನಿರ್ಲಕ್ಷ್ಯದ ವೇಷದಲ್ಲಿ ಸಹಿಸುತ್ತಿದೆ ಎಂಬುದು ಮುಖ್ಯ ಮತ್ತು ಬರಲಿರುವ ನಿರ್ಮಮ ರಾಜಕಾರಣದ ಸೂಚನೆ.

ಮೋದಿ ಸರ್ಕಾರ ನಮ್ಮ ೭೪ನೇ ಸ್ವಾತಂತ್ರ್ಯೋತ್ಸವದ ಹೊತ್ತಿಗೆ 'ನವ ಭಾರತ'ದ ಅನಾವರಣದ ಮಾತಾಡುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಣಾಯಕ ಘಟ್ಟಗಳಲ್ಲಿ ಬ್ರಿಟಿಷ್ ಪ್ರಭುತ್ವ ಮತ್ತು ಜಿನ್ನಾರ ಜೊತೆ ಸೇರಿದ ಚರಿತ್ರೆ ಇರುವವರು ಸ್ವಾತಂತ್ರ್ಯೋತ್ಸವದ ಮಾತಾಡಿದಾಗ ನಾವು ಎಚ್ಚರದಿಂದಿರಬೇಕು ವಾಸ್ತವವಾಗಿ ಬಿಜೆಪಿಯ ಮನದಲ್ಲಿರುವುದು ೨೦೨೫, ಆರೆಸ್ಸೆಸ್‌ನ ಶತಮಾನೋತ್ಸವ ವರ್ಷ. ಆ ಹೊತ್ತಿಗೆ ಆರೆಸ್ಸೆಸ್ಸಿನ ಕನಸಿನ ಭಾರತವನ್ನು ಅದಕ್ಕೆ ಐತಿಹಾಸಿಕ ಗುರುದಕ್ಷಿಣೆಯಾಗಿ ನೀಡುವ ಯೋಜನೆ ಬಿಜೆಪಿಯದು. ಅದಕ್ಕಾಗಿ ಅದು ಇತಿಹಾಸದ ಪುನರ್‌ನಿರ್ಮಾಣಕ್ಕಷ್ಟೇ ಕೈ ಹಾಕಿಲ್ಲ. ರಾಷ್ಟ್ರದ ರಾಜಧಾನಿಯ ಕೇಂದ್ರ ಪ್ರದೇಶದ ವಾಸ್ತುವನ್ನೇ ೨೦ ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬದಲಾಯಿಸ ಹೊರಟಿದೆ.

ಇದು ಇತಿಹಾಸದ ವಾಸ್ತುವನ್ನು ಬದಲಿಸುತ್ತಿರುವ ಸಂದರ್ಭ ಎಂಬುದು ಕಾಂಗ್ರೆಸ್‌ಗೆ ನೆನಪಿರಬೇಕು ಮತ್ತು ಅದಕ್ಕಿಂತ ಹೆಚ್ಚಾಗಿ ಮನದಟ್ಟಾಗಬೇಕು. ಆಗ ರಾಹುಲ್ ಗಾಂಧಿಯವರಿಂದ ಹಿಡಿದು ಸಿದ್ಧರಾಮಯ್ಯನವರವರೆಗೆ ತಾವು ಮಾಡಬೇಕಾದ ರಾಜಕಾರಣ ಎಷ್ಟು ಆಳದ ಜ್ಞಾನ ಮತ್ತು ಘನವಂತಿಕೆಯಿಂದ ಕೂಡಿರಬೇಕು ಮತ್ತು ಇದರ ಕೇಂದ್ರದ ಪ್ರತೀಕ ಏನಾಗಿರಬೇಕೆಂಬ ಅರಿವಾದೀತು.

ಈ ಟಿಪ್ಪಣಿಗಳನ್ನು ಮುಗಿಸುವ ಮುನ್ನ ಒಂದು ಮಾತು. ಕಳೆದ ಸಂಚಿಕೆಯಲ್ಲಿನ ಅಂಬೇಡ್ಕರ್ ಕುರಿತ ಲೇಖನಗಳ ಬಗ್ಗೆ ಪ್ರತಿಕ್ರಿಯಿಸಿರುವ ಹತ್ತಾರು ಓದುಗರಲ್ಲಿ ದಲಿತ ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ಕುರಿತ ಸ್ಮೃತಿ ಕೊಪ್ಪೀಕರ್ ಅವರ ಅದ್ಭುತ ಲೇಖನದ ಬಗ್ಗೆ ಪ್ರತಿಕ್ರಿಯಿಸಿರುವುದು ಒಬ್ಬರು ಮಾತ್ರ. ಏಕೆ ಹೀಗೆ? ಯೋಚಿಸಬೇಕಾದ ವಿಚಾರ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂಬರ್ ಸಂಪಾದಕೀಯ ಸಮಂಜಸವಾಗಿದೆ. ನಮ್ಮದು ತುಡಿಯುವ ಪ್ರಜಾಪ್ರಭುತ್ವವಾಗಿ ನಿಂತುಹೋದದ್ದು ಇಂದಿರಾ ಗಾಂಧಿಯವರು ಪ್ರಧಾನಿ ಆದಾಗಿನಿಂದಲೆ. ಸರ್ವಾಧಿಕಾರಿಕಾರಿ, ಹೈಕಮಾಂಡ್ ಧೋರಣೆಯು ಆಗ ಆರಂಭವಾದದ್ದು ಈಗ ಉಲ್ಬಣಗೊಂಡಿದೆ ಅಷ್ಟೆ. ನಮ್ಮ ಪ್ರಜಾಪ್ರಭುತ್ವ ತುಡಿಯುವುದು ಚುನಾವಣೆ ಕಾಲದಲ್ಲಿ ಮಾತ್ರ. ಆಗ ಎಂಥೆಂಥವರೋ ಯಾವ ಯಾವುದೋ ಮಾರ್ಗದ ಮೂಲಕ ಚುನಾಯಿತರಾಗಿ ಬಿಡುತ್ತಾರೆ. ಮತದಾರ ನೇಪಥ್ಯಕ್ಕೆ ಸರಿದುಬಿಡುತ್ತಾನೆ.

ಕಾಂಗ್ರೆಸ್ ಉದ್ಧಾರ ಆಗುವ ಲಕ್ಷಣಗಳು ಕಾಣುತ್ತಿಲ್ಲ. ಅಲ್ಲಿ ಭರವಸೆ ಇಡಬಹುದಾದ ಸಾಚಾ, ಶ್ರಮಜೀವಿ, ಮುತ್ಸದ್ದಿ ನಾಯಕರೇ ಕಾಣುತ್ತಿಲ್ಲ. ರೈತ ಪ್ರತಿಭಟನೆ ಕೇಂದ್ರದ ಸರ್ವಾಧಿಕಾರಿ ಧೋರಣೆಗೆ ಸವಾಲಾಗಿದೆ. ಹೊಸ ಕೃಷಿ ಕಾಯ್ದೆಗಳ ಕುರಿತು ವಿಭಿನ್ನ ಅಭಿಪ್ರಾಯಗಳಿದ್ದು ಸೀಮಿತ ಪ್ರದೇಶದಲ್ಲಿ ಮೊದಲು ಜಾರಿಗೊಳಿಸಿ ನೋಡುವುದು ಸೂಕ್ತವೆನಿಸುತ್ತದೆ.

ಅಂಬೇಡ್ಕರ್ ಕುರಿತು ಮೂರು ಪ್ರಬುದ್ಧ ಲೇಖನಗಳು ಸಂಬಂಧಿಸಿದವರಿಗೆ ನಾಟಬೇಕು.

ಇನ್ನು ನಮ್ಮ ಘನ ಸರ್ಕಾರ ಒಂದು ಕಡೆ ಬೃಹತ್ ಮೊತ್ತದ ಸಾಲ ಪಡೆದು, ಮತ್ತೊಂದು ಕಡೆ ಅಪ್ಪಟ ರಾಜಕೀಯ ಕಾರಣಗಳಿಗಾಗಿ ನಿಗಮ ಮಂಡಳಿಗಳಂಥ ಅನುತ್ಪಾದಕ ತೆವಲುಗಳ ಮೇಲೆ ಸೂರೆ ಮಾಡುತ್ತದೆ. ಬಜೆಟ್ ಹಂಗಿಲ್ಲದೆ ಮನಬಂದಂತೆ ವೆಚ್ಚ ಮಾಡುವದು ಎಂಥ ಆಡಳಿತ! ತಳಮಟ್ಟದ ಕಚೇರಿಗಳಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು ಗಮನ ವಹಿಸುವವರೇ ಇಲ್ಲ.

ನಮ್ಮ ಜನಪ್ರತಿನಿಧಿಗಳಿಗೆ ಈಗ ಕೂಡ್ರಲು, ಏಳಲು ಕೂಡ ನಿಯಮಗಳನ್ನು ಮಾಡುವ ಕಾಲ ಸನ್ನಿಹಿತವಾಗಿದೆ. ಇಲ್ಲದಿದ್ದರೆ ಸಂವಿಧಾನದ ಅಡಿಯಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಂಥಾ ದರ್ಬಾರು ನಡೆಯುತ್ತಲೇ ಇರುತ್ತದೆ.

**–ವೆಂಕಟೇಶ ಮಾಚಕನೂರ,** ಧಾರವಾಡ

ಡಿಸೆಂಬರ್ ಸಂಚಿಕೆಯಲ್ಲಿ, "ತುಡಿಯುವ ಪ್ರಜಾಪ್ರಭುತ್ವ" ಕುರಿತ ಅವಲೋಕನ ಮತ್ತು ಇಂದಿನ ಅವಸ್ಥೆಗೆ ಕಾರಣವಾದ ಆರ್ಥಿಕ, ಚಾರಿತ್ರಿಕ ಅಂಶಗಳ ವಿಶ್ಲೇಷಣೆ ಒಂದು ಪ್ರಬುದ್ಧ ಸಂಪಾದಕೀಯ ಟಿಪ್ಪಣಿಯಾಗಿದೆ. ಪ್ರಪಂಚದಾದ್ಯಂತ ಪ್ರಜಾಪ್ರಭುತ್ವ ವ್ಯವಸ್ಥೆ ಕುಸಿಯುತ್ತಿದೆ ಎಂದು ನೋಂ ಚಾಮ್ಸ್ಕಿ ಇತ್ತೀಚಿಗೆ ವ್ಯಕ್ತಪಡಿಸಿದ ಕಳಕಳಿಗೆ ಇದೊಂದು ದೃಷ್ಟಾಂತ. ಗಾಂಧಿ ಮತ್ತು ಅಂಬೇಡ್ಕರ್ ಕುರಿತಂತೆ ಸಮರ್ಥ ಅಧ್ಯಯನಗಳು ಈ ಸಂಚಿಕೆಯ ಇನ್ನೊಂದು ವಿಶೇಷ.

**–ಎಚ್,ಎಸ್. ಈಶ್ವರ,** ಬೆಂಗಳೂರು

, ಅಂಬೇಡ್ಕರ್ ಕುರಿತ ರಾಜೇಂದ್ರ ಚೆನ್ನಿ ಅವರ ಲೇಖನ ಹಲವಾರು ಒಳನೋಟಗಳನ್ನು ನೀಡಿತು . ಇದನ್ನು ಗಾಂಧಿ ಮತ್ತು ಅಂಬೇಡ್ಕರ್‌ವಾದಿಗಳಿಬ್ಬರೂ ಅರಿತು ಮುನ್ನಡೆದರೆ ಆ ಇಬ್ಬರೂ ಮಹಾತ್ಮರ ಆತ್ಮಕ್ಕೆ ಗೌರವ ಸಲ್ಲುತ್ತದೆ.

**–ಎನ್. ಆರ್. ವಿಶುಕುಮಾರ್, ಬೆಂಗಳೂರು**

ಡಿಸೆಂಬರ್ ಸಂಚಿಕ್ಕೆ ಓದಿದೆ. ಸಂಪಾದಕರ ಟಿಪ್ಪಣಿ ಇಷ್ಟವಾಯಿತು. ಪ್ರಸಕ್ತ ರಾಜಕಾರಣದಲ್ಲಿ ಕಾಂಗ್ರೆಸ್ ಪರ್ಯಾಯ ಆಗಲು ಸಾಧ್ಯವೇ ಇಲ್ಲ ಅನ್ನಿಸುತ್ತದೆ. ಕಾಂಗ್ರೇಸ್ಸೇತರ ಆಯ್ಕೆ ಸಾಧ್ಯತೆಗಳೂ ಕಾಣಿಸುತ್ತಿಲ್ಲ. ಕಾಂಗ್ರೆಸ್‌ನ ನಡೆ ಮತ್ತು ಈಗಿರುವ ಅದರ ಆಲೋಚನಾ ಕ್ರಮ ಅದನ್ನು ಕೈಬಿಡುವ ಅನಿವಾರ್ಯತೆ ಸೃಷ್ಟಿಸಿದೆ. ಕೆಲ ಬಿಡಿ ಸಾಂಸ್ಕೃತಿಕ ಟಿಪ್ಪಣಿಗಳು ಇಷ್ಟವಾದವು. ಅನ್ನಿಸಿದ್ದ ನ್ನು ಹೇಳುವ – ದಾಖಲಿಸುವ ನಿಮ್ಮ ನಿಲುವು ಪ್ರಿಯವಾಯಿತು. ಗಾಂಧಿ–ಅಂಬೇಡ್ಕರ್ ಓದಿದೆ. ವಿಭಿನ್ನ ಒಳನೋಟ ಹಾಗೂ ಚಿಂತನೆಗಳಿರುವ ಬರೆಹ. ವರ್ತಮಾನದ ಬಿಕ್ಕಟ್ಟು ಅರ್ಥ ಮಾಡಿಕೊಳ್ಳಲು ಹಾಗೂ ನಡೆ– ಚಲನೆಯನ್ನು ಸ್ಪಷ್ಟಪಡಿಸಿಕೊಳ್ಳಲು ನೆರವಾಗುತ್ತದೆ.

**–ದೇವು ಪತ್ತಾರ,** ಬೆಂಗಳೂರು

ಅಂಬೇಡ್ಕರ್ ಪರಿನಿರ್ವಾಣ ದಿನದ ವಿಶೇಷವಾಗಿ ನವೆಂಬರ್ ಸಂಚಿಕೆಯಲ್ಲಿ ಅಂಬೇಡ್ಕರ್ ಅವರ ವ್ಯಕ್ತಿತ್ವ ಮತ್ತು ಹೋರಾಟ–ರಾಜಕಾರಣದ ಸುತ್ತ ಹಲವು ಲೇಖನಗಳನ್ನು ಪ್ರಕಟಿಸಿರುವುದು ಸ್ತುತ್ಯರ್ಹ. ಈ ಲೇಖನಗಳಲ್ಲಿ ವಿನಯ ರಕ್ಕಿತ ಮಹಾಥೇರಾ ಅವರ ಅಂಬೇಡ್ಕರ್‌ವಾದಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಕರೆ ಕೊಡುತ್ತಾ ಅಂಬೇಡ್ಕರ್‌ವಾದಿಗಳು ಹಕ್ಕು ಸ್ಥಾಪನೆಯ ರಾಜಕಾರಣದ ಜೊತೆಗೆ ಅಂಬೇಡ್ಕರ್ ಅವರ ಬೌದ್ಧಿಕ ಪರಿಶ್ರಮ ಮತ್ತು ಸಾಧನೆಗಳ ಹೆಜ್ಜೆಗಳನ್ನು ಅನುಸರಿಸಬೇಕೆಂದು ಸೂಚಿಸಿರುವುದು ಅಂಬೇಡ್ಕರ್‌ವಾದವೆನ್ನುವುದು ಈಗ ಬಹುಮಟ್ಟಿಗೆ ಮಾಯಾವತಿವಾದವಾಗಿ ಕುಬ್ಜಗೊಂಡಿರುವ ಈ ಸಂದರ್ಭದಲ್ಲಿ ಸಕಾಲಿಕ ಸೂಚನೆಯಾಗಿದೆ. ಇನ್ನು ದಲಿತ ಮಹಿಳೇಯರ ಮೇಲಿನ ನಿಲ್ಲದ ಅತ್ಯಾಚಾರಗಳ ದುರಂತ್ ಬಗ್ಗೆ ಹೇಳುವ ಸ್ಮೃತಿ ಕೊಪ್ಪೀಕರ್ ಅವರ 'ಖೈರ್ಲಾಂಜಿಯಿಂದ ಹಾಥ್‌ರಸ್ ವರೆಗೆ' ಎಲ್ಲರ ಆತ್ಮಸಾಕ್ಷಿಯನ್ನು ಕೆಣಕುವಂತಿದೆ.

**–ಎಂ. ರಾಜಶೇಖರ್, ಚಿಕ್ಕಮಗಳೂರು**

ಅಂಬೇಡ್ಕರ್ (ಮತ್ತು ಗಾಂಧಿಯವರ) ಕುರಿತ ವಿಶೇಷ ಲೇಖನಗಳನ್ನೊಳಗೊಂಡ ಡಿಸೆಂಬರ್ ಸಂಚಿಕೆ ಅವರನ್ನು ಆರಾಧಿಸುವ ಬದಲು ಓದುಗರು ಅವರ ಚಿಂತನೆಗಳನ್ನು ಮೆಲಕು ಹಾಕುವಂತೆ ಪ್ರೇರೇಪಿಸುತ್ತದೆ. ಅಸ್ಪ್ರಶ್ಯತೆ ವಿರುದ್ಧದ ಹೋರಾಟ, ಮೀಸಲಾತಿ ಮತ್ತು ಬೌದ್ಧ ಧರ್ಮಕ್ಕೆ ಮತಾಂತರದಂತಹ ಮೂರು ಮುಖ್ಯ ಮಾರ್ಗೋಪಾಯಗಳ ಹೊರತಾಗಿಯೂ ಭಾರತದ ಸಾಮಾಜಿಕ ಬಿಕ್ಕಟ್ಟು ಮುಂದುವರೆದಿದೆ ಎಂದರೆ ಅದೆಂತಹ ಕಗ್ಗಂಟಿನ ಸಮಾಜದಲ್ಲಿ ನಾವು ಬದುಕಿದ್ದೆವು ಎಂದು ಯೋಚಿಸುವಂತಾಗುತ್ತದೆ. ಆಧುನಿಕ ಜಗತ್ತು ಕಂಡ ಇಬ್ಬರು ಧೀಮಂತ ನಾಯಕರು ಸಮಕಾಲೀನರಾಗಿ ಭಾರತದಲ್ಲಿ ಹುಟ್ಟಿಯೂ ಈ ಸ್ಥಿತಿಯಾದರೆ ಅವರಿಲ್ಲದೆ ಹೋಗಿದ್ದರೆ ದೇಶ ಹೇಗಿರುತ್ತಿತ್ತು ಎಂಬುದನ್ನು ನೆನೆಸಿಕೊಂಡರೇ ಭಯವಾಗುತ್ತದೆ. ರಾಜೇಂದ್ರ ಚೆನ್ನಿ, ಜೆ. ಎಸ್. ಸದಾನಂದ ಅವರ ಬರಹಗಳಲ್ಲಿ ಹೊಸ ಹೊಳವುಗಳಿವೆ. ಎಸ್. ಆರ್. ದಾರಾಪುರಿಯವರು ಈಗಲೂ ಭೂಮಿ ಹಂಚಿಕೆಯ ಕುರಿತು ಹೇಳುತ್ತಾರೆ. ಆದರೆ ಭೂಮಿ ಹಂಚಿಕೆಯನ್ನು ಸಾಧ್ಯವಾಗಿಸುವ

**(೧೮ನೇ ಪುಟಕ್ಕೆ**

ಪ್ರಚಲಿತ-೧

# ಫ್ರಾನ್ಸ್‌ನಲ್ಲಿ ಸೆಕ್ಯುಲರಿಸಂನ ಹೊಸ ಸಂಕಥನ

-ಟಿ. ಅವಿನಾಶ್

**ಇತ್ತೀಚೆಗೆ ಫ್ರಾನ್ಸ್‌ನಲ್ಲಿ ತರಗತಿಯ ಪಾಠದ ಭಾಗವಾಗಿ ಪ್ರವಾದಿ ಮಹಮ್ಮದರ ಚಿತ್ರ ಬಳಸಿದ್ದಕ್ಕಾಗಿ ಶಿಕ್ಷಕರೊಬ್ಬರನ್ನು ಅವರದೇ (ಮುಸ್ಲಿಂ) ವಿದ್ಯಾರ್ಥಿಯೊಬ್ಬ ಕತ್ತು ಸೀಳಿ ಕೊಂದ ಪ್ರಕರಣ ಆ ದೇಶದ ಮಧ್ಯಮ ಪಂಥೀಯ ಇಮ್ಯಾನುಯಲ್ ಮಾಕ್ರಾನ್ ಪ್ರತಿಪಾದಿಸುತ್ತಿರುವ 'ಕ್ರಿಯಾಶೀಲ ಸೆಕ್ಯುಲರಿಸಂ; ಕುರಿತಂತೆ ಜಗತ್ತಿನಾದ್ಯಂತ ಚರ್ಚೆ ನಡೆದಿದ್ದು, ಭಾರತ ಕೂಡ ಅದನ್ನು ಗಮನಿಸುವಂತಾಗಿದೆ.-ಸಂ**



ಎರಡು-ಮೂರು ತಿಂಗಳುಗಳ ಕೆಳಗೆ ಫ್ರಾನ್ಸ್‌ನ ಶಾಲೆಯೊಂದರಲ್ಲಿ ಶಿಕ್ಷಕನೊಬ್ಬನು ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತ ಪಾಠ ಮಾಡುತ್ತ ಪಾಠದ ವಿವರಣೆಯ ಭಾಗವಾಗಿ ಪ್ರವಾದಿ ಮಹಮ್ಮದ್‌ರ ಚಿತ್ರವೊಂದನ್ನು ಬಳಸಿದನೆಂದು ಆ ಶಿಕ್ಷಕನನ್ನು ಮುಸ್ಲಿಂ ಧರ್ಮಕ್ಕೆ ಸೇರಿದ ಆತನ ವಿದ್ಯಾರ್ಥಿಯೊಬ್ಬ ಕತ್ತು ಕುಯ್ದು ಬರ್ಬರವಾಗಿ ಹತ್ಯೆಮಾಡಿದ. ಕೊಲೆಗಾರ ವಿದ್ಯಾರ್ಥಿ ಚೆಚೆನ್ಯಾದಿಂದ ಬಂದ ನಿರಾಶ್ರಿತ ಕುಟುಂಬಕ್ಕೆ ಸೇರಿದವನು. ಈ ಘಟನೆಗೆ ಪ್ರತಿಕ್ರಿಯಿಸಿದ ಫ್ರಾನ್ಸ್‌ನ ಅಧ್ಯಕ್ಷ ಇಮ್ಯಾನುಯಲ್ ಮಾಕ್ರಾನ್ ತನ್ನ ದೇಶ ತಾನು ಅಂಗೀಕರಿಸಿರುವ ಸೆಕ್ಯುಲರಿಸಂನ ವಿಶಿಷ್ಟ ಚಹರೆಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ ಎಂದು ಸಾರಿದ. ಫ್ರಾನ್ಸ್‌ನಾದ್ಯಂತಂತ ಜನ ತಮ್ಮ ಅಧ್ಯಕ್ಷರಿಗೆ ಬೆಂಬಲವಾಗಿ ಪ್ರವಾದಿಯ ಚಿತ್ರವನ್ನು ಪ್ರದರ್ಶಿಸುತ್ತಾ ಪ್ರತಿಭಟನೆ ನಡೆಸಿದರು. ಫ್ರಾನ್ಸ್‌ನ ಎಡಪಂಥೀಯರು ಬಲಪಂಥೀಯರನ್ನು ಎದುರಿಸಲು ಅಸಮರ್ಥರಾಗಿರುವಾಗ ಮಧ್ಯಮ ಪಂಥೀಯತೆಯೊಂದನ್ನು ರೂಪಿಸಿ ಅದರ ನಾಯಕನಾಗಿ ಹೊರಹೊಮ್ಮಿರುವ ಅಧ್ಯಕ್ಷ ಮಾಕ್ರಾನ್ ಪ್ರತಿಪಾದಿಸುವ ಹಲವು ಹೊಸ ತತ್ವಗಳಲ್ಲಿ 'ಕ್ರಿಯಾಶೀಲ'/'ರ್‍ಯಾಡಿಕಲ್' ಎಂದು ಕರೆಯಲಾಗುವ ಸೆಕ್ಯುಲರಿಸಂ ಕೂಡ ಒಂದು. ಅದರ ಪ್ರಕಾರ ಸೆಕ್ಯುಲರಿಸಂನ ಸಾಂಪ್ರದಾಯಿಕ ಅರ್ಥವಾದ ಪರಧರ್ಮ ಸಹಿಷ್ಣುತೆಗೆ ಪ್ರತಿಯಾಗಿ ಜನ ತಮ್ಮ ವೈಚಾರಿಕ/ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಪರಸ್ಪರರ ಧರ್ಮಗಳನ್ನು ವಿಮರ್ಶಿಸುತ್ತಾ ಅರ್ಥ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನೂ ಹೊಂದಿರುತ್ತಾರೆ. ಆದರೆ ಧಾರ್ಮಿಕ ಶಠತ್ವವನ್ನೇ ಮೈಹೊದ್ದ ಇಸ್ಲಾಮಿಕ್‌ವಾದಿಗಳು ಮತ್ತು ಇತರರು ಪ್ರಪಂಚದಾದ್ಯಂತ ಮ್ಯಾಕ್ರಾನ್ ವಾದವನ್ನು ತೀವ್ರವಾಗಿ ಖಂಡಿಸಿದ್ದೇ ಅಲ್ಲದೆ ಹಿಂಸಾತ್ಮಕ ಪ್ರತಿಭಟನೆಗೂ ಕರೆಕೊಟ್ಟರು. ಟರ್ಕಿಯ ಅಧ್ಯಕ್ಷನನ್ನು ಸೇರಿದಂತೆ ಮಧ್ಯಪ್ರಾಚ್ಯದ ಕೆಲ ಧಾರ್ಮಿಕ ಮುಖಂಡರು ಮಾಕ್ರಾನ್‌ನ ಸೆಕ್ಯುಲರಿಸಂನ್ನು ಖಂಡಿಸಿ ಆತನ ಹತ್ಯೆಮಾಡುವುದೂ ಅಪರಾಧವೇನಲ್ಲ ಎಂದು ವಾದಿಸತೊಡಗಿದ್ದರು. ಭಾರತದಲ್ಲೂ ಕೆಲವಡೆ ಇಂತಹ ಪ್ರತಿಭಟನೆಗಳು ನಡೆದವು. ಇತ್ತೀಚಿನ ಇತಿಹಾಸದಲ್ಲಿ ಇಸ್ಲಾಂ ಹೆಸರಿನಲ್ಲಿ ಹತ್ಯೆ-ಹಿಂಸೆಯನ್ನು ಪ್ರಚೋದಿಸಿ ಸಮರ್ಥಿಸಿರುವ ಹಲವು ಉದಾಹರಣೆಗಳಿರುವಾಗ ಈ ವಿದ್ಯಮಾನ ಯಾರಿಗೂ ಆಶ್ಚರ್ಯ ತರದು.

ಅದೇನೇ ಇರಲಿ, ಮಾಕ್ರಾನ್ ಈ ಸೆಕ್ಯುಲರಿಸಂ ಎಡ-ಬಲ ಪಂಥಗಳಿಂದ ದೂರವಾದ ಮಧ್ಯಮ ಪಂಥೀಯತೆಯ ಭಾಗ ಎಂದು ಹೇಳಿಕೊಳ್ಳುತ್ತಿದ್ದು, ಅದು ಇಂದು ತೀವ್ರ ಚರ್ಚೆಗೆ ಒಳಗಾಗಿದೆ,. ಮಾಕ್ರಾನ್ ಪ್ರಕಾರ ಆತ ಇಸ್ಲಾಂ ಧರ್ಮದ ವಿರೋಧಿ ಅಲ್ಲ. ಆತನ ತಕರಾರು ಇರುವುದು 'ಇಸ್ಲಾಂವಾದಿ'(ಇಸ್ಲಾಮಿಸ್ಟ್)ಗಳು ಪ್ರತಿಪಾದಿಸುವ ಇಸ್ಲಾಂ ಧರ್ಮದ ತಿರುಚಿದ ವಾದಗಳ ವಿರುದ್ಧ. ಆತನು ಶಾಲಾ ಶಿಕ್ಷಕನ ಹತ್ಯೆಯ ನಂತರ ಫ್ರಾನ್ಸ್ ತನ್ನ ಪಾರಂಪರಿಕ ಲಿಬರಲಿಸಂನಿಂದ ದೂರ ಸರಿಯುವುದಿಲ್ಲ ಎಂದು ಘೋಷಿಸಿ ಇಸ್ಲಾಂವಾದಿಗಳು ಪ್ರತಿಪಾದಿಸುವ ಹಿಂಸಾತ್ಮಕ ಧಾರ್ಮಿಕ ವಾದಗಳಿಂದಾಗಿ ಜಾಗತಿಕ ಇಸ್ಲಾಂ ವಿಪತ್ತಿನಲ್ಲಿದೆ ಎಂದು ಸಾರಿದ. ಇನ್ನೂ ಮುಂದುವರೆದು ಇಸ್ಲಾಂ ಧರ್ಮವನ್ನು 'ವಹಾಬಿ'ಗಳು ಮತ್ತು 'ಜೆಹಾದಿ'ಗಳು ಅಪಹರಿಸಿ, ಅದರ ವಿಶಾಲವಾದ ನೆಲೆಗಳನ್ನು ಸಂಕುಚಿತಗೊಳಿಸಿದ್ದಾರೆ ಎಂದು ವಾದಿಸುತ್ತಾನೆ. ಅಷ್ಟೇ ಅಲ್ಲ, ಈ ಇಸ್ಲಾಂವಾದಿ ಭಯೋತ್ಪಾದನೆಗೆ ಮುಲ್ಲಾಗಳು ಮತ್ತು ಇಮಾಮ್‌ಗಳೂ ಸಹ ಸಾಂಸ್ಥಿಕ ಸ್ವರೂಪ ನೀಡಿದ್ದಾರೆಂದು ವಿವರಿಸಿ ಇದು ನಾಗರೀಕತೆಗಳ ನಡುವಿನ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿರುವುದು ಮತ್ತು ಇಸ್ಲಾಂ ಧರ್ಮಕ್ಕೆ ಕುತ್ತು ಬಂದಿರುವುದು ಇಂತಹ ಏಕಮುಖೀ ಸ್ವಧರ್ಮದ ವಿಜೃಂಭಣೆಯಿಂದ ಎಂದು ವಾದಿಸುತ್ತಾನೆ.. ಆತ ಫ್ರೆಂಚ್ ಕ್ರಾಂತಿಯ ಸದಾಶಯವಾದ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಯಾವ ಕಾರಣಕ್ಕೂ ತಾನು ಬಿಟ್ಟುಕೊಡುವುದಿಲ್ಲ ಎಂದು ಘೋಷಿಸಿದ್ದಾನೆ.. ಇಸ್ಲಾಂ ಉಗ್ರವಾದವನ್ನು ಎದುರಿಸಲು ಇಂತಹ ಮುಕ್ತ ಸೆಕ್ಯುಲರ್‌ವಾದ ಅಗತ್ಯ ಎಂದೂ ಸಹ ಸೂಚಿಸುತ್ತಾನೆ. ಫ್ರಾನ್ಸ್‌ನಲ್ಲಿ ನಾಗರೀಕರು ಖಾಸಗಿ ವಲಯದಲ್ಲಿ ಮಾತ್ರ ಧಾರ್ಮಿಕ ಆಚರಣೆಗಳನ್ನು ತೊಡಗಬಹುದು ಎನ್ನುತ್ತಾನೆ. 'ನನ್ನ ದೇಶದ ರಸ್ತೆಗಳಲ್ಲಿ ಮೂರು ವರ್ಷದ ಮಗುವನ್ನು ಅಡಿಯಿಂದ ಮುಡಿವರೆಗೆ ಬುರ್ಖಾದಿಂದ ಮುಚ್ಚಿ ಕರೆದೊಯ್ಯುದ ದೃಶ್ಯ ಫ್ರೆಂಚ್ ನಾಗರಿಕ ಮೌಲ್ಯಗಳಿಗೆ ಅಪಚಾರವೆಸಗಿದಂತೆ' ಎಂದು ಆತ ಹೇಳುತ್ತಾರ್ನೆ.

ಮಾಕ್ರಾನ್‌ನ ಈ ಬಗೆಯ ವಾದಕ್ಕೆ ತೀವ್ರ ಟೀಕೆಗಳು ಕೂಡಾ ಬಂದಿವೆ. ಮಧ್ಯಮ ಪಂಥದ ಆತ ಚುನಾವಣಾ ಕಾರಣಕ್ಕಾಗಿ ಈ ಬಗೆಯ ವಾದವನ್ನು ಹರಿಬಿಟ್ಟಿದ್ದಾನೆ ಮತ್ತು ಈಗಾಗಲೇ ಆತಂಕದಲ್ಲಿರುವ ಮುಸ್ಲಿಂ ಸಮುದಾಯದ ಮೇಲಿನ ಈ ಬಗೆಯ ಆಕ್ರಮಣ ವ್ಯತಿರಿಕ್ತ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂಬ ಆಕ್ಷೇಪಣೆಗಳೂ ಬಂದಿವೆ.

ಭಾರತೀಯ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡರೆ ಇಲ್ಲಿ ಅನೇಕ ಮೂಲಭೂತ ಪ್ರಶ್ನೆಗಳು ಏಳುತ್ತವೆ. ಒಂದು: ಧಾರ್ಮಿಕ ನೆಲೆಯ ವಿದ್ಯಮಾನಕ್ಕೆ ಜಾಗತಿಕವಾಗಿ ಒಂದಾಗುವ ರಾಜಕೀಯ-ಧಾರ್ಮಿಕ ನಾಯಕರು ಸಾಮಾನ್ಯ ಮುಸ್ಲಿಂ ಪ್ರಜೆಯ ಕಷ್ಟನಷ್ಟಗಳಿಗೆ ಏಕೆ ಇದೇ ತೀವ್ರತೆಯಲ್ಲಿ ಮುಖಾಮುಖಿ ಆಗುವುದಿಲ್ಲ ಎಂಬುದು.ಎರಡನೆಯದು: ಸಣ್ಣ-ಪುಟ್ಟ ವಿದ್ಯಮಾನಗಳಿಗೂ ಸಹ ಬರ್ಬರ ಹಿಂಸಾತ್ಮಕ ಧಾರ್ಮಿಕ ನೆಲೆಯ ಪ್ರತಿಕ್ರಿಯೆಗಳಿಗೆ ಇರುವ ಸೆಲೆ ಯಾವುದು ಎಂಬ ಪ್ರಶ್ನೆ. ಇದನ್ನು ಇನ್ನೂ ವಿಸ್ತರಿಸಬಹುದಾದರೆ, ಧರ್ಮದ ಒಳಗೆ ಇರುವ ಅಂಶಗಳಿಂದ ಜೆಹಾದಿಗಳು ಸ್ಫೂರ್ತಿ ಪಡೆಯುತ್ತಾರೋ ಅಥವಾ ಜಾಗತಿಕ 'ಇಸ್ಲಾಂ ವಿರೋಧಿ ವ್ಯಸನ' ಈ ಜೆಹಾದಿಗಳನ್ನು ಇನ್ನೂ ಹೆಚ್ಚು ತೀವ್ರತೆಯಿಂದ ಪ್ರತಿಕ್ರಿಸುವಂತೆ ಮಾಡುತ್ತಿದೆಯೋ ಎಂಬ ಪ್ರಶ್ನೆ. ಮೂರನೆಯದೆಂದರೆ ಧರ್ಮವನ್ನು ಏಕರೂಪಿ ಮಾಡಿ ಸಂಕುಚಿತಗೊಳಿಸುವ ಪ್ರವೃತ್ತಿಗೆ ಪ್ರತಿಕ್ರಿಯೆಯಾಗಿ ಇಡೀ ಧರ್ಮವನ್ನೇ ರಾಕ್ಷಸೀಕರಿಸುವ ಪ್ರವೃತ್ತಿ ಸಿದ್ಧಮಾದರಿ ಬಿಂಬಕ್ಕೆ ಜೋತುಬೀಳಿಸುವ ಹುನ್ನಾರಗಳು ವ್ಯತಿರಿಕ್ತ ಪರಿಣಾಮಗಳನ್ನುಂಟು ಮಾಡಬಲ್ಲವು. ಹಾಗಾದರೆ ಈ ಅಪಾಯಗಳಿಂದ ಪಾರಾಗುವ ಬಗೆ ಹೇಗೆ?

ಸ್ವಧರ್ಮದ ಕುರಿತಾದ ಆತಂಕ ಮತ್ತು ಇತರರನ್ನು ಅನ್ಯೀಕರಿಸುವ ವಿದ್ಯಮಾನ ಇಸ್ಲಾಂ ಧರ್ಮಕ್ಕೆ ಮಾತ್ರ ಸೀಮಿತವಾದದ್ದಲ್ಲ. ಯಾವುದನ್ನು ಡಿ.ಆರ್. ನಾಗರಾಜ್ 'ಆತಂಕಿತ ಹಿಂದೂ' ಎಂದು ಕರೆಯುತ್ತಾರೋ ಅಂತಹ ಪ್ರಯತ್ನಗಳು ಹಿಂದೂಧರ್ಮವೂ ಸೇರಿದಂತೆ ಜಗತ್ತಿನ ಎಲ್ಲಾ ಧರ್ಮಗಳೂ ತಮ್ಮ ತಮ್ಮ ಧರ್ಮಗಳು ಆತಂಕದಲ್ಲಿವೆ ಎಂಬ ಭಾವನೆಯನ್ನು ತೀವ್ರವಾಗಿ ಹರಿಬಿಟ್ಟು ಧಾರ್ಮಿಕ ಕ್ರೋಢೀಕರಣ ಮತ್ತು ಶ್ರೇಷ್ಠತೆಯನ್ನು ಸಾರುವುದಕ್ಕೆ ಚಾರಿತ್ರಿಕ ಹಿನ್ನೆಲೆಯೇ ಇದೆ.

ಆದರೆ ನಮ್ಮ ಆಧುನಿಕ ಸೆಕ್ಯುಲರ್‌ವಾದಕ್ಕೆ ಇದನ್ನು ವಿವರಿಸುವ ಮತ್ತು ಪರಿಹರಿಸುವ ಶಕ್ತಿ ಇದೆಯೇ ಎಂಬ ಪ್ರಶ್ನೆ ಏಳುತ್ತದೆ. ಇತ್ತೀಚಿನ ಒಂದು ಲೇಖನದಲ್ಲಿ ಯೋಗೇಂದ್ರ ಯಾದವ್ ಅವರು ಭಾರತೀಯ ಸೆಕ್ಯುಲರ್‌ವಾದ ಜನಸಾಮಾನ್ಯರ ನುಡಿಗಟ್ಟನ್ನು ಅರ್ಥಮಾಡಿಕೊಳ್ಳಲು ವಿಫಲವಾಗಿದ್ದು ಇದರ ಪರಿಣಾಮವಾಗಿಯೇ ಈಗ ಬಲಪಂಥೀಯ ರಾಜಕೀಯ ಕಾರ್ಯಸೂಚಿಗೆ ಜನಸಾಮಾನ್ಯರ ಒಪ್ಪಿಗೆ ದೊರೆಯುತ್ತಿದೆ ಎಂದು ವಾದಿಸುತ್ತಾ, ಅಲ್ಲಲ್ಲಿ ಚದುರಿದಂತೆ ಕಾಣಸಿಗುವ ಧಾರ್ಮಿಕ-ಸಾಮಾಜಿಕ ಸಮನ್ವಯತೆಯ ವಿದ್ಯಮಾನಗಳನ್ನು ನಾವು ವಿವೇಕದ ಮಾದರಿಗಳು ಎಂದು ಗ್ರಹಿಸಬೇಕೋ ಅಥವಾ ಅವುಗಳ ಸಾಂಕೇತಿಕತೆಯಲ್ಲಿಯೇ ಸೆಕ್ಯುಲರಿಸಂನ ಶಕ್ತಿ ವ್ಯಯವಾಗುತ್ತಿದೆಯೇ ಎಂಬುದನ್ನು ಸರಿಯಾಗಿ ಪರಿಶೀಲಿಸಬೇಕಿದೆ ಎನ್ನುತ್ತಾರೆ. ರಾಜೀವ ಭಾರ್ಗವ ಅವರು ಕೋಮುವಾದವನ್ನು ಎದುರಿಸಲು ರಾಜಕೀಯ ಸೆಕ್ಯುಲರಿಸಂ ಮಾದರಿಗಳನ್ನು ಬಿಟ್ಟುಕೊಟ್ಟು ನಮ್ಮ ಪರಿಸರ/ ನಾಗರೀಕತೆಯಲ್ಲಿ ಇರುವ ಬಹುತ್ವದ ನೆಲೆಗಳನ್ನು ಬಲಪಡಿಸುವ ಅಗತ್ಯದ ಕುರಿತಾಗಿ ವಾದಿಸುತ್ತಾರೆ.

ಹಾಗಾಗಿ ಕಲ್ಪಿತ ಧಾರ್ಮಿಕ ಆತಂಕದ ಈ ದಿನಗಳಲ್ಲಿ ಸೆಕ್ಯುಲರಿಸಂ ತನ್ನ ಹಳಸಲಾಗಿರುವ ಪರಿಭಾಷೆಯನ್ನು ಬಿಡಬೇಕು ಎಂಬುದು ಅನೇಕರ ವಾದದ ಸಾರಾಂಶ. ಆದರೆ ಪರ್ಯಾಯದ ಮಾದರಿಗಳ ಬಗ್ಗೆ ಎಲ್ಲರಿಗೂ ಗೊಂದಲ-ಸಂಶಯವಿದ್ದೇ ಇದೆ. ಮಾಕ್ರಾನ್ ಪ್ರತಿಪಾದಿಸುವ ಆಕ್ರಮಣಕಾರಿ ಸೆಕ್ಯುಲರಿಸಂ ಧಾರ್ಮಿಕ ಶಠತ್ವವನ್ನು ಎದುರಿಸುವ ಒಂದು ಪರಿಪೂರ್ಣವಲ್ಲದ; ಆದರೆ ಹೊಸ ಪರಿಭಾಷೆಗಾಗಿ ಹುಡುಕುತ್ತಿರುವ ಒಂದು ಮಾದರಿಯಂತಿದೆ. ಭಾರತದ ಪರಿಸರಕ್ಕೆ ಒಗ್ಗುವ ಸೆಕ್ಯುಲರಿಸಂ ಕುರಿತಾದ ಪರಿಭಾಷೆಯನ್ನು ತುರ್ತಾಗಿ ಚರ್ಚಿಸುವ ಅಗತ್ಯ ಇದೆ.



**(ಶಿವಮೊಗ್ಗದ ಸಹ್ಯಾದ್ರಿ ಪ್ರ.ದ.ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿರುವ ಲೇಖಕರು ಕ್ರೀಡಾ ಬರಹಗಾರರೂ ಮತ್ತು ಸಾಂಸ್ಕೃತಿಕ ಚಿಂತಕರೂ ಹೌದು)**

ಪ್ರಚಲಿತ-೨

# ರೈತ ಹೋರಾಟ ರೈತರ ಹಕ್ಕುಗಳಿಗಷ್ಟೇ ಸಂಬಂಧಿಸಿದ್ದಲ್ಲ, ಎಚ್ಚರ!

-ಪಿ. ಸಾಯಿನಾಥ್

**ರಕ್ತ ಹೆಪ್ಪುಗಟ್ಟಿಸುವಂತಹ ಜನವರಿಯ ದೆಹಲಿ ಚಳುವಳಿಯಲ್ಲಿಯೂ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸಿರುವ ರೈತ ಸಮೂಹದ ಬೇಡಿಕೆಯಲ್ಲಿ ಹುರುಳಿಲ್ಲದಿರಲು ಸಾಧ್ಯವಿಲ್ಲವೆಂದು ರಾಷ್ಟ್ರದ ಸರ್ವೋನ್ನತ ನ್ಯಾಯಾಲಯವೇ ಅವರತ್ತ ಸಹಾಯ ಹಸ್ತದೊಂದಿಗೆ ಧಾವಿಸಬೇಕಾಯಿತೇ ಹೊರತು, ಈ ಕಾಯ್ದೆಗಳನ್ನು ಅವರ ಮೇಲೇ ಹೇರಿದ ಸರ್ಕಾರವಲ್ಲ. ಹಾಗೆ ನೋಡಿದರೆ ಈ ಕಾಯ್ದೆಗಳು ರೈತರಿಗೆ ಮಾತ್ರವಲ್ಲ, ರಾಷ್ಟ್ರದ ನಾಗರಿಕರಿಗೆ ಸಂವಿಧಾನ ನೀಡಿರುವ ಹಲವು ಹಕ್ಕುಗಳನ್ನು ದುರ್ಬಲಗೊಳಿಸುವ ಅಪಾಯವನ್ನೂ ಒಳಗೊಂಡಿದೆ ಎಂದು ವಿವರಿಸುವ ಮೂಲಕ ಈ ಲೇಖನ, ಈ ವಿಷಯದಲ್ಲಿ ಸರ್ವೋನ್ನತ ನ್ಯಾಯಾಲಯದ ಮಧ್ಯಸ್ಥಿಕೆ ಉಚಿತವೇ ಆಗಿದೆ ಎಂದು ಸೂಚಿಸುತ್ತಿರುವಂತಿದೆ. –ಸಂ**



"ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ವ್ಯಕ್ತಿ ಈ ಕಾಯ್ದೆಯ ಅಡಿಯಲ್ಲಿ ಅಥವಾ ಕಾಯ್ದೆಗೆ ಸಂಬಂಧಿಸಿದಂತೆ ಸದುದ್ದೇಶದಿಂದ ಕೈಗೊಂಡ, ಅಥವಾ ಕೈಗೊಳ್ಳಬಯಸುವ ಕ್ರಮದ ವಿರುದ್ಧ ಯಾವುದೇ ಮೊಕದ್ದಮೆ, ಕಾನೂನು ಕ್ರಮ, ನ್ಯಾಯಿಕ ನಡಾವಳಿಗೆ ಆಸ್ಪದವಿಲ್ಲ." ಇದು ಪ್ರಸ್ತುತ ರೈತರು ವಿರೋಧಿಸುತ್ತಿರುವ ನೂತನ ಕಾಯ್ದೆಗಳನ್ನು ಪ್ರಶ್ನಾತೀತಗೊಳಿಸುತ್ತಿರುವ ರೀತಿ.

ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸುಗಮಗೊಳಿಸುವ) ಕಾಯ್ದೆ ೨೦೨೦ ರ ಕಲಮು ೧೩ ರ ಇರಾದೆಯೇ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ನಾಶಮಾಡುವುದು.

ತಮ್ಮ ಶಾಸನಬದ್ಧ ಕರ್ತವ್ಯ ನಿರ್ವಹಿಸುವ ನಾಗರಿಕ ಸಿಬ್ಬಂದಿ ಅನಗತ್ಯ ದಾವೆಗಳಲ್ಲಿ ಸಿಲುಕದಂತೆ ಅವರನ್ನು ರಕ್ಷಿಸುವ ಇತರೆ ಕಾನೂನುಗಳು ಇವೆ, ಆದರೆ ಈ ಕಾನೂನು ಬಹಳ ಮುಂದೆ ಹೋಗುತ್ತದೆ, ಇಲ್ಲಿ ನಾಗರಿಕ ಸಿಬ್ಬಂದಿ ಅಥವಾ ಇತರರು ಸದುದ್ದೇಶದಿಂದ ಮಾಡಿರಬಹುದಾದ ಅಪರಾಧಗಳಿಗಾಗಿ ಮಾತ್ರ ಅವರಿಗೆ ರಕ್ಷಣೆಯಲ್ಲ, ಅವರು ಮುಂದೆ ಮಾಡಬಹುದಾದ ಅಪರಾಧಗಳ ವಿಚಾರಕ್ಕೂ ಅವರಿಗೆ ರಕ್ಷಣೆ! (ಅಪರಾಧ ಸದುದ್ದೇಶದಿಂದ ಆಗಿರಬೇಕಷ್ಟೆ) ಕಲಮು ೧೫ ಇದನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಈ ಕಾಯ್ದೆಯ ಅಡಿಯಲ್ಲಿ ಬರುವ ಇತರೆ ಯಾವ ವ್ಯಕ್ತಿಯೂ ಯಾವ ವಿಚಾರಕ್ಕೂ ಯಾವ ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೂ ಒಳಪಡುವಂತಿಲ್ಲ. ಅಂದರೆ ನೀವು ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸುವಂತೆಯೇ ಇಲ್ಲ. ಹಾಗಾದರೆ ಸದುದ್ದೇಶದಿಂದ ಕಾರ್ಯ ನಿರ್ವಹಿಸುವ, ಕಾನೂನಿನ ವ್ಯಾಪ್ತಿಗೆ ಒಳಪಡದ, ಈ 'ಇತರೆ ಯಾವ ವ್ಯಕ್ತಿಯೂ' ಎಂದರೆ ಯಾರು?

ಯಾವುದೇ ದಾವೆ, ಕಾನೂನು ಕ್ರಮ, ಅಥವಾ ಕಾನೂನಿನ ನಡಾವಳಿಗೆ ಆಸ್ಪದವಿಲ್ಲ. ಕೇವಲ ರೈತರು ಕಾನೂನು ಕ್ರಮ ಕೈಗೊಳ್ಳಲು ಅಸಾಧ್ಯವಾಗುವುದು ಮಾತ್ರವಲ್ಲ. ಇತರೆ ಯಾರೂ ಕಾನೂನು ಕ್ರಮ ಕೈಗೊಳ್ಳುವಂತಿಲ್ಲ. ಇದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಗೂ ಕೂಡ ಅನ್ವಯಿಸುತ್ತದೆ. ಯಾವುದೇ ಸರ್ಕಾರೇತರ ಸಂಸ್ಥೆ, ರೈತ ಸಂಘಟನೆಗಳು ಅಥವಾ ಯಾವ ವ್ಯಕ್ತಿಯೂ– ಆತನ ಉದ್ದೇಶ ಒಳ್ಳೆಯದೋ ಅಥವಾ ಕೆಟ್ಟದ್ದೋ_ ಇಲ್ಲಿ ಮಧ್ಯೆ ಪ್ರವೇಶಿಸುವಂತಿಲ್ಲ.

೧೯೭೫–೭೭ರ ತುರ್ತು ಪರಿಸ್ಥಿತಿಯನ್ನು ಹೊರತುಪಡಿಸಿದರೆ ಇಷ್ಟೊಂದು ವ್ಯಾಪಕವಾಗಿ ನಾಗರೀಕರನ್ನು ಕಾನೂನಿನ ಆಸರೆಯಿಂದ ದೂರವಿರಿಸಿದ ಮತ್ತೊಂದು ಉದಾಹರಣೆ ಇಲ್ಲ. ಇಲ್ಲಿನ ನ್ಯಾಯಾಲಯದ ಪರಿಭಾಷೆಯನ್ನು ಇಂಗ್ಲಿಷ್‌ಗೆ ಅನುವಾದಿಸಿದರೆ ಇದರ ಕಾನೂನಾತ್ಮಕ ಭಾಷೆ ಕೆಳಗಿನ ಹಂತದ ಕಾರ್ಯಾಂಗವನ್ನು ನ್ಯಾಯಾಂಗವನ್ನಾಗಿ ಪರಿವರ್ತಿಸಿರುವುದು ತಿಳಿಯುತ್ತದೆ. ವಾಸ್ತವದಲ್ಲಿ ಇದು ಕಾರ್ಯಾಂಗವನ್ನು ನ್ಯಾಯಾಧೀಶನನ್ನಾಗಿ, ಪಂಚರನ್ನಾಗಿ ಮತ್ತು ಶಿಕ್ಷಾಧಾರಕರನ್ನಾಗಿ ಮಾಡುತ್ತದೆ. ಈಗಾಗಲೇ ರೈತರು ಮತ್ತು ಕಾನೂನಿನ ಪ್ರಕಾರ ಅವರು ವ್ಯವಹರಿಸಬೇಕಾಗಿರುವ ಕಾರ್ಪೋರೇಟ್ ದೈತ್ಯರ ನಡುವೆ ಇರುವ ಅಗಾಧ ಅಪನಂಬಿಕೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರಿಂದ ಎಚ್ಚೆತ್ತ ದೆಹಲಿಯ ನ್ಯಾಯವಾದಿಗಳ ಪರಿಷತ್ತು ನಾಗರೀಕ ಬದುಕಿಗೆ ಸಂಬಂಧಿಸಿದ ಯಾವುದೇ ಖಟ್ಲೆಯ ತೀರ್ಪಿನ ಅಧಿಕಾರವನ್ನು ಕಾರ್ಯಾಂಗದ ಅಧಿಕಾರಿಗಳಿಂದ ನಿಯಂತ್ರಿಸಲ್ಪಡುವ ರಚನೆಗಳಿಗೆ ನೀಡುವುದು ಹೇಗೆ ಸಾಧ್ಯ ಎಂದು ಪ್ರಧಾನಿ ಮೋದಿಯವರನ್ನು ಪ್ರಶ್ನಿಸಿದೆ. ಕಾರ್ಯನಿರ್ವಾಹಕ ಅಧಿಕಾರಿಗಳು ಎಂದರೆ ಉಪವಿಭಾಗ ಮ್ಯಾಜಿಸ್ಟ್ರೇಟರು, ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರು. ಇವರೆಲ್ಲ ತಮ್ಮ ಸ್ವಾತಂತ್ರ್ಯ ಸನ್ನಂಬಿಕೆ ಮತ್ತು ಸದುದ್ದೇಶಗಳಿಗೆ ಎಷ್ಟರಮಟ್ಟಿಗೆ ಹೆಸರಾದವರು ಎಂಬುದು ಪ್ರತಿಯೊಬ್ಬ ಭಾರತೀಯನಿಗೂ ತಿಳಿದಿರುವ ಸಂಗತಿಯೇ. ದೆಹಲಿಯ ವಕೀಲರ ಪರಿಷತ್ತು ಮುಂದುವರಿದು, ನ್ಯಾಯಿಕ ಅಧಿಕಾರವನ್ನು ಕಾರ್ಯಾಂಗಕ್ಕೆ ವರ್ಗಾಯಿಸುವುದು ಒಂದು ದೊಡ್ಡ ಪ್ರಮಾದ. ಇದು ವಿಶೇಷವಾಗಿ ಜಿಲ್ಲಾ ನ್ಯಾಯಾಲಯಗಳನ್ನು ಹಾಳು ಮಾಡುತ್ತದೆ ಮತ್ತು ವಕೀಲ ವೃತ್ತಿಗೇ ಕಂಟಕಪ್ರಾಯವಾಗುತ್ತದೆ ಎಂದಿದೆ.

ಈ ಕಾಯ್ದೆಗಳಲ್ಲಿನ ಒಡಂಬಡಿಕೆಗಳಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ನ್ಯಾಯಾಂಗದ ಅಧಿಕಾರಗಳನ್ನು ಕಾರ್ಯಾಂಗಕ್ಕೆ ವರ್ಗಾಯಿಸುವ ಪ್ರಯತ್ನ ಎದ್ದು ಕಾಣುವಂತಿದೆ.– ಬೆಲೆ ಖಾತರಿ ಮತ್ತು ಜಮೀನು ಸೇವಾ ಕಾಯ್ದೆ ಮೇಲಿನ ರೈತರ(ಸಬಲೀಕರಣ ಮತ್ತು ರಕ್ಷಣೆ) ಒಡಂಬಡಿಕೆ ೨೦೨೦ರ ೧೮ನೇ ಅನುಚ್ಛೇದ 'ಸದಾಶಯ'ದ ಅರ್ಥ ಸಂದಿಗ್ಧತೆ ಪುನಃ ಆತಂಕವನ್ನುಂಟು ಮಾಡುವಂತಿದೆ ಏಕೆಂದರೆ. ಅನುಚ್ಛೇದ ೧೯, ಈ ಕಾಯ್ದೆಯಿಂದ, ಅಥವಾ ಅದರ ಅಡಿಯಲ್ಲಿ ಅಧಿಕಾರ ಪಡೆದ ಒಬ್ಬ ಉಪವಿಭಾಗಾಧಿಕಾರಿ ಅಥವಾ ಅಪೀಲು ಅಧಿಕಾರಿ ನೀಡಿದ ತೀರ್ಪನ್ನು ಪ್ರಶ್ನಿಸುವ ಯಾವುದೇ ದಾವೆಯನ್ನೂ ಸ್ವೀಕರಿಸುವ, ತಡೆಯಾಜ್ಞೆ ನೀಡುವ ಅಧಿಕಾರ ಯಾವುದೇ ಸಿವಿಲ್ ನ್ಯಾಯಾಲಯಕ್ಕೂ ಇರುವುದಿಲ್ಲ.

ಭಾರತೀಯ ಸಂವಿಧಾನದ ವಿಧಿ ೧೯, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತವಾಗಿ ಸಭೆ ನಡೆಸುವ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ, ಸಂಘ ಮತ್ತು ಒಕ್ಕೂಟಗಳ ರಚನೆ ಇತ್ಯಾದಿಗಳ ಬಗೆಗೆ ಇದೆ ಎಂದು ಭಾವಿಸಿರುವವರು, ಈ ಜಮೀನು ಕಾಯ್ದೆಯ ಅನುಚ್ಛೇದ ೧೯, ಸಂವಿಧಾನದ ಮೂಲ ರಚನೆಯ ಭಾಗ ಎಂದು ಪರಿಗಣಿಸಲಾದ, ಸಾಂವಿಧಾನಿಕ ಪರಿಹಾರಗಳ(ಕಾನೂನಿನ ಕ್ರಮ ಕೈಗೊಳ್ಳುವ ಹಕ್ಕು) ಅವಕಾಶವನ್ನು ಖಾತರಿ ಪಡಿಸುವ ಸಂವಿಧಾನದ ವಿಧಿ ೩೨ನ್ನು ಘಾಸಿಗೊಳಿಸುತ್ತದೆ ಎಂಬುದನ್ನೂ ತಿಳಿದಿರಲಿ.

'ಮುಖ್ಯ ವಾಹಿನಿ ಮಾಧ್ಯಮಗಳು' (ಸಾಮಾನ್ಯ ಜನತೆಗೆ ಸಂಬಂಧಿಸಿದ ಶೇ.೭೦ರಷ್ಟು ವಿಚಾರಗಳನ್ನು ಹೊರಗಿಡುವ ವೇದಿಕೆಯನ್ನು ಈ ಹೆಸರಿನಿಂದ ಕರೆಯುವುದೇ ಒಂದು ವಿಚಿತ್ರ!) ಭಾರತದ ಪ್ರಜಾಪ್ರಭುತ್ವದ ಮೇಲೆ ಈ ಹೊಸ ಜಮೀನು ಕಾಯ್ದೆಗಳು ಉಂಟುಮಾಡುವ ಪರಿಣಾಮಗಳ ಬಗ್ಗೆ ತಿಳಿಯದೆ ಇರಲು ಖಂಡಿತವಾಗಿಯೂ ಸಾಧ್ಯವಿಲ್ಲ. ಆದರೆ ಪ್ರಜಾಪ್ರಭುತ್ವದ ಬಗೆಗಿನ ಯಾವ ವಿಚಾರಗಳಿಗಿಂತಲೂ ಹೆಚ್ಚಾಗಿ ಅವುಗಳನ್ನು ಮುನ್ನಡೆಸುವುದು ತಮ್ಮ ಲಾಭದ ವಿಚಾರ. ಇಲ್ಲಿ ಹಿತಾಸಕ್ತಿಗಳ ನಡುವೆ ತಾಕಲಾಟಗಳ ಯಾವ ಸಮಸ್ಯೆಯೂ ಇರದು, ಏಕೆಂದರೆ ಈ ಮಾಧ್ಯಮಗಳೇ ಕಾರ್ಪೊರೇಟ್ ಸಂಸ್ಥೆಗಳು! ಹಾಗಾಗಿ ಈ ಮಾಧ್ಯಮಗಳಿಗೆ ತಮ್ಮ ಸ್ವಂತ ಹಿತಾಸಕ್ತಿಯ ಎದುರು ಸಾರ್ವಜನಿಕ ಹಿತಾಸಕ್ತಿ ಮುಖ್ಯವಲ್ಲ, ಇನ್ನು ರೈತರ ಹಿತಾಸಕ್ತಿಯನ್ನಂತೂ ಕೇಳುವುದೇ ಬೇಡ. ಇವು ರೈತರನ್ನು ಶ್ರೀಮಂತ ರೈತರು, ಕೇವಲ ಪಂಜಾಬಿಗಳು, ಖಲಿಸ್ತಾನಿಗಳು, ಆಷಾಢಭೂತಿಗಳು, ಕಾಂಗ್ರೆಸ್ಸಿಗಳು ಎಂಬೆಲ್ಲಾ ಹೆಸರುಗಳಿಂದ ಕರೆದು ಕಳಂಕಿತರನ್ನಾಗಿ ಮಾಡುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಬಂದಿವೆ.

ಹೆಸರಾಂತ ಪತ್ರಿಕೆಗಳು ಕೂಡ ಇದಕ್ಕಿಂತ ಭಿನ್ನವಾಗಿಲ್ಲ, ಇವುಗಳ ಸಂಪಾದಕೀಯಗಳು ಮೊಸಳೆ ಕಣ್ಣೀರು ಸುರಿಸಿ, ಸರ್ಕಾರವು ಸಮಸ್ಯೆಯನ್ನು ತುಸು ಎಚ್ಚರದಿಂದ ನಿರ್ವಹಿಸಬೇಕಿತ್ತು, ಪ್ರತಿಭಟನಾ ನಿರತರು ಎಷ್ಟೇ ಆದರೂ ಮೂಢರು; ಆರ್ಥಿಕ ತಜ್ಞರು ಮತ್ತು ಪ್ರಧಾನಿಗಳ ಪ್ರತಿಭೆಯನ್ನು ಅರಿಯುವ ಶಕ್ತಿಯಿಲ್ಲದ ಅವರಿಗೆ ಈ ಕಾನೂನು ತಮ್ಮ ಸಮುದಾಯದ ಬಗ್ಗೆ ಎಂತಹ ಕಾಳಜಿ ಹೊಂದಿದೆ, ತಮ್ಮ ಆರ್ಥಿಕತೆಗೆ ಅದು ಎಷ್ಟು ಸಹಾಯಕವಾಗಿದೆ ಎಂಬುದನ್ನು ಅರ್ಥ ಮಾಡಿಸಬೇಕು ಎನ್ನುತ್ತವೆ. ಹಾಗಾಗಿ ಈ ಕಾನೂನುಗಳು ಜಾರಿಯಾಗಲೇಬೇಕು ಎನ್ನುತ್ತವೆ. 'ಇಂಡಿಯನ್ ಎಕ್ಸ್‌ಪ್ರೆಸ್'ನ ಒಂದು

(೧೩ನೇ ಪುಟಕ್ಕೆ

# ಮೋದಿ ಜನಪ್ರಿಯತೆಯ ವಿಪರ್ಯಾಸಗಳು...

## ಅಭಿವೃದ್ಧಿ ಸೂಚ್ಯಂಕಗಳು ನಿರಂತರ ಕುಸಿಯುತ್ತಿದ್ದರೂ ಜನಬೆಂಬಲದ ಸೂಚ್ಯಂಕ ಏರುಗತಿಯಲ್ಲೇ ಇದೆ!

-ಶೇಖರ್ ಗುಪ್ತ



ಇದು ಮೋದಿ ಆಡಳಿತದ ಏಳನೇ ವರ್ಷ. ಈ ಸರ್ಕಾರ ಎಷ್ಟು ಯಶಸ್ವಿಯಾಗಿದೆ ಅಥವಾ ವಿಫಲವಾಗಿದೆ ಎಂಬ ದೀರ್ಘಕಾಲಿಕ ಅಂದಾಜು ಮಾಡಲು ಈ ಅವಧಿ ಸಾಕಷ್ಟಾಗಿದೆ, ಇಂತಹ ಅಂದಾಜು ಮಾಡುವ ಸಾಕಷ್ಟು ಸಮೀಕ್ಷೆಗಳು ಅಂದರೆ ವಿವಿಧ ಕ್ಷೇತ್ರಗಳಲ್ಲಿನ ದೇಶದ ಸಾಧನೆ-ಸ್ಥಾನಮಾನ ಮತ್ತು ಶ್ರೇಯಾಂಕಗಳನ್ನು ಗುರುತಿಸುವ ಹಲವು ವರದಿಗಳು ಬರುತ್ತಿವೆ. ಇವೆಲ್ಲವೂ ವಿಶ್ವಾಸಾರ್ಹ ವರದಿಗಳೇ. ಏಕೆಂದರೆ, ಇಂತಹ ಈ ಹಿಂದಿನ ವರದಿಗಳಲ್ಲಿ ದೇಶದ ಸಾಧನೆಗಳ ಸೂಚ್ಯಂಕಗಳು ಎತ್ತರಕ್ಕೆ ಏರಿದಾಗ ನಾವು, ಅಂದರೆ ಸರ್ಕಾರ ಸಂಭ್ರಮಿಸಿದೆ. ಆದರೆ ಈಗ ಈ ಸಮೀಕ್ಷೆಗಳ ವರದಿಗಳು ಮೋದಿ ಸರ್ಕಾರಕ್ಕೆ ಎಲ್ಲ ರೀತಿಯಲ್ಲೂ ಪ್ರತಿಕೂಲವಾಗಿವೆ.

ಮೊದಲು ಮಾನವ ಸ್ವಾತಂತ್ರ್ಯ ಸೂಚ್ಯಂಕ ಕುರಿತ ವರದಿ ನೋಡೋಣ. ಇದನ್ನು ಮಾಡಿರುವುದು ಅಮೇರಿಕಾದ 'ಕಾಟೋ' ಸಂಸ್ಥೆ. ಈ ಬಗ್ಗೆ ನಾವು ಹೇಳಬಹುದು, ಇವರೆಲ್ಲ ಎಡಪಂಥೀಯರು, ಭಾರತದ ಮೋದಿ ಸರ್ಕಾರದ ಮೇಲೆ ಆಕ್ರಮಣ ಮಾಡುತ್ತಿದ್ದಾರೆ ಎಂದು. ಆದರೆ, ನನಗೆ ತಿಳಿದಂತೆ ಕಾಟೋ ಸಂಸ್ಥೆ ಖಂಡಿತವಾಗಿಯೂ ಎಡಪಂಥೀಯವಲ್ಲ, ಇದು ಉದಾರವಾದಿ, ಸ್ವತಂತ್ರ ಸಂಸ್ಥೆ. ನಮ್ಮ ಪ್ರಖ್ಯಾತ ಅಂಕಣಕಾರ ಸ್ವಾಮಿನಾಥನ್ ಅಯ್ಯರ್ ಅಲ್ಲಿ ಕೆಲಸ ಮಾಡುತ್ತಾರೆ. ಈಗ ಈ ಸಂಸ್ಥೆ ಸಮೀಕ್ಷೆ ಮಾಡಿದ ಮಾನವ ಸ್ವಾತಂತ್ರ್ಯ ಸೂಚ್ಯಂಕದಂತೆ ಭಾರತದ ಸ್ಥಾನ ಈ ವರ್ಷ ಗಮನಾರ್ಹವಾಗಿ ಕುಸಿದಿದೆ, ಭಾರತದ ಸ್ಥಾನ ೧೬೨ರಲ್ಲಿ ೧೧೧ನೆಯದು. ಅದು ಬಹಳ ನಿರಾಶಾದಾಯಕ ಸ್ಥಾನ. ಅಂದರೆ ೧೭ ಸ್ಥಾನಗಳನ್ನು ಕಳೆದುಕೊಂಡು ೯೪ರಿಂದ ೧೧೧ಕ್ಕೆ ಕುಸಿದಿದೆ. ನಮಗೆ 'ಗರಿಷ್ಟ ಆಡಳಿತ ಕನಿಷ್ಟ ಸರ್ಕಾರ' ಎಂದು ಭರವಸೆ ಕೊಟ್ಟಂತಹ ಸರ್ಕಾರ ಇರುವಾಗ ಇದು ಬಹಳ ನಿರಾಶಾದಾಯಕವೇ. ಏಕೆಂದರೆ ಮಾನವ ಸ್ವಾತಂತ್ರ್ಯ ಸೂಚ್ಯಂಕ ವಾಸ್ತವವಾಗಿ ೭೬ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಅದರಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಸಂಚಾರದ ಹಕ್ಕು, ಸುರಕ್ಷತೆ ಮತ್ತು ಭದ್ರತೆ, ಕಾನೂನು ಆಡಳಿತಕ್ಕೆ ಸಂಬಂಧಿಸಿದ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ, ನಾಗರಿಕ ಸಮಾಜದ ಚಟುವಟಿಕೆಯ ಸ್ವಾತಂತ್ರ್ಯ, ಅಭಿವ್ಯಕ್ತಿ ಮತ್ತು ಮಾಹಿತಿ ಪಡೆಯುವ ಸ್ವಾತಂತ್ರ್ಯ ಸೇರಿದಂತೆ ಎಲ್ಲಾ ವಿಧದ ಸ್ವಾತಂತ್ರ್ಯಗಳನ್ನು ಒಳಗೊಂಡಿವೆ. ಇವೆಲ್ಲವನ್ನು ಒಟ್ಟು ಸೇರಿಸಿದರೆ ಭಾರತವು ೧೭ ಸ್ಥಾನಗಳನ್ನು ಕಳೆದುಕೊಂಡು ಕೆಳಕ್ಕಿಳಿದಿದೆ. ಮೋದಿ ಸರ್ಕಾರಕ್ಕೆ ಇದು ಬಹಳ ಕೆಟ್ಟ ಸ್ಥಿತಿ, ಏಕೆಂದರೆ ಅದು ಕನಿಷ್ಟ ಸರ್ಕಾರ, ಗರಿಷ್ಟ ಆಡಳಿತ, ಸುಲಲಿತ ವ್ಯವಹಾರವನ್ನು ನಡೆಸುವ ಭರವಸೆ ನೀಡಿತ್ತು. ಆದ್ದರಿಂದ ಇದು ಅತ್ಯಂತ ನಿರಾಶಾದಾಯಕ ಆಡಳಿತ ನಿರ್ವಹಣೆಯೇ. ಅಂತಿಮವಾಗಿ ಈ ೭೬ ಮಾನದಂಡಗಳನ್ನು ಮೂರು ಅಂಶಗಳನ್ನಾಗಿ ಸಂಕ್ಷಿಪ್ತಗೊಳಿಸಬಹುದು. ಅವೆಂದರೆ ವೈಯಕ್ತಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಮಾನವ ಸ್ವಾತಂತ್ರ್ಯ. ಇವುಗಳ ನಿರ್ವಹಣೆಯಲ್ಲಿ ಭಾರತವು ಅತ್ಯಂತ ನಿರಾಶಾದಾಯಕವಾದ ಸ್ಥಾನದಲ್ಲಿದೆ. ಈ ವರದಿಗಳೆಲ್ಲಾ ಬಂದಿರುವುದು ಒಂದು ಹೆಸರಾಂತ ಸಂಸ್ಥೆಯಿಂದ, ಅದೇನೂ ಭಾರತದ ಮೇಲೆ ದ್ವೇಷ ಹೊಂದಿಲ್ಲ. ಹಾಗಿದ್ದಲ್ಲಿ ಈ ಸೂಚ್ಯಂಕಗಳಲ್ಲಿ ನಮಗಿಂತ ಬಹು ಹಿಂದಿರುವ ನಮ್ಮ ನೆರೆಯ ದೇಶಗಳು ಅಂದರೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಈ ವರದಿಯ ಬಗ್ಗೆ ಇಂತಹುದೇ ಕಾರಣಕ್ಕೆ ಈ ವರದಿಯನ್ನು ದೂರಬೇಕಿತ್ತು.

ನಾವೀಗ ಮಾನವ ಅಭಿವೃದ್ಧಿಯ ಸೂಚ್ಯಂಕದ ವರದಿ ನೋಡೋಣ. ಆದರೆ ಒಟ್ಟಾರೆ ಎರಡು ಸ್ಥಾನ ಕೆಳಗಿಳಿದಿದೆ. ಮೊದಲು ೧೨೯ನೇ ಸ್ಥಾನದಲ್ಲಿತ್ತು. ಕಳೆದ ಎರಡು ವರ್ಷಗಳಲ್ಲಿ ೧೩೦ಕ್ಕೆ ಬಂತು. ಈಗ ೧೩೧ನೇ ಸ್ಥಾನಕ್ಕೆ ಏರಿದೆ. ಮೊದಲನೆಯದಾಗಿ ಇದು ಭಾರಿ ಮುಜುಗರದ ಸ್ಥಿತಿ. ಖಂಡಿತವಾಗಿಯೂ ಮೋದಿ ಸರ್ಕಾರದ ಏಳನೆಯ ವರ್ಷದಲ್ಲಿಯೇ ಇದು ಕೆಳಕ್ಕೆ ಇಳಿದಿರುವುದು.

ಈಗ ಜಾಗತಿಕ ಹಸಿವಿನ ಸೂಚ್ಯಂಕದ ಕಡೆ ಗಮನ ಹರಿಸೋಣ, ಇದು ರಾತ್ರಿ ಖಾಲಿ ಹೊಟ್ಟೆಯಲ್ಲಿ ಮಲಗುವುದಕ್ಕೆ ಸಂಬಂಧಿಸಿದ ವಿಷಯ. ಈ ಸೂಚ್ಯಂಕ ಅಪೌಷ್ಠಿಕತೆ, ಶಿಶು ಮರಣ ಪ್ರಮಾಣ ಇತ್ಯಾದಿ ಹಲವು ಆಂಶಗಳನ್ನು ಒಳಗೊಂಡಿದೆ. ಈ ವಿಷಯದಲ್ಲೂ ಭಾರತಕ್ಕೆ ಕಳೆದ ವರ್ಷ ೧೧೭ರಲ್ಲಿ ೧೦೨ನೇ ಸ್ಥಾನ ದಕ್ಕಿತ್ತು. ಈ ವರ್ಷ ಅದು ೯೪ಕ್ಕೆ ಬಂದಿದೆ. ಆದರೆ ಈ ಬಗ್ಗೆ ನಾವು ಹೆಚ್ಚು ಖುಷಿಪಡಬೇಕಿಲ್ಲ. ಏಕೆಂದರೆ ಹೋದ ವರ್ಷ ನಾವು ೧೦೨ನೇ ಸ್ಥಾನದಲ್ಲಿದ್ದುದು ೧೧೭ ದೇಶಗಳ ಪಟ್ಟಿಯಲ್ಲಾದರೆ ಈಗ ೯೪ನೇ ಸ್ಥಾನದಲ್ಲಿರುವುದು ೧೦೭ ದೇಶಗಳ ಪಟ್ಟಿಯಲ್ಲಿ. ಹಾಗಾಗಿ ಈ ಸೂಚ್ಯಂಕದ ವಿಷಯದಲ್ಲಿ ನಮ್ಮ ಸಾಧನೆ ಹೆಚ್ಚೂ ಕಡಿಮೆ ಏರುಪೇರಿಲ್ಲದ್ದು. ಖಂಡಿತ ಇದು ಮೋದಿ ಸರ್ಕಾರ ತನ್ನ ಏಳನೇ ವರ್ಷದಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳಬೇಕಾದ ಸಂಗತಿ ಏನಲ್ಲ.

ಈಗ ಅಂತರ್ಜಾಲ ಸ್ವಾತಂತ್ರ್ಯದ ಸೂಚ್ಯಂಕದ ವಿಷಯಕ್ಕೆ ಬರೋಣ. ಜಗತ್ತಿನಲ್ಲೇ ಅಂತರ್ಜಾಲ ಅತ್ಯಂತ ಹೆಚ್ಚು ಅವಧಿಗೆ ಸ್ಥಗಿತಗೊಂಡ ದಾಖಲೆ ಭಾರತದ್ದೇ ಆಗಿದೆ. ಈ ವಿಷಯದಲ್ಲಿ ನಮ್ಮ ಸ್ಥಾನ ಸತತವಾಗಿ ಮೂರು ವರ್ಷಗಳಿಂದ ಕುಸಿಯುತ್ತಲೇ ಇದೆ.

ಈಗ ಭಾರತದ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕವನ್ನು ನೋಡೋಣ.. ಭಾರತದ ಚಿಂತನಾಚಾವಡಿಯ ಖ್ಯಾತನಾಮರು/ತಜ್ಞರ ತಂಡವೂ ಹೇಳುವಂತೆ ಭಾರತದ ಸ್ಥಾನ ೭೯ರಿಂದ ೧೦೫ಕ್ಕೆ ಬಂದು ೨೬ ಸ್ಥಾನಗಳಷ್ಟು ಕುಸಿದಿದೆ. ಈ ಸಮೀಕ್ಷೆಯ ವರದಿ ಸೆಪ್ಟಂಬರಿನಲ್ಲಿ ಬಂದಿದೆ. ಪುನಃ ನೀವು ಹೇಳಬಹುದು, ಇದೆಲ್ಲಾ ಒಂದು ಒಳಸಂಚು ಎಂದು. ಆದರೆ ಎಲ್ಲರೂ ನಮ್ಮವಿರುದ್ಧ ಸಂಚು ಮಾಡುವವರೇ ಎಂದು ಹೇಳಲು ಸಾಧ್ಯವಿಲ್ಲ. ಹಿಂದೆ ಇದೇ ಸಂಸ್ಥೆ ಮತ್ತು ಭಾರತದ ತಜ್ಞರ ತಂಡ ಮೋದಿ ಸರ್ಕಾರದ ಸುಧಾರಣೆಗಳನ್ನು ಗುರುತಿಸುವ ಅಂಕಿಅಂಶಗಳನ್ನು ನೀಡಿ ಮೆಚ್ಚಿತ್ತು.. ಆದರೆ ಮೋದಿ ಆಡಳಿತದ ಈ ಕೆಲವು ವರ್ಷಗಳಲ್ಲಿ ಏನೋ ತಪ್ಪಾಗಿದೆ. ಆಮೇಲೆ ಎಲ್ಲವೂ ಬಿಗಡಾಯಿಸಿದೆ.

ಈಗ ಒಂದು ವಿಶಾಲ ಕ್ಷೇತ್ರಕ್ಕಕ್ಕೆ ಬರೋಣ. ಅದೆಂದರೆ ರಾಷ್ಟ್ರೀಯ ಆರೋಗ್ಯ ಸಮೀಕ್ಷೆ. ಇದನ್ನು ತಯಾರಿಸಿರುವುದು ಭಾರತದ ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯುವೇ. ಈ ಸಮೀಕ್ಷೆಯು ಅಂಕಿ-ಅಂಶಗಳು ಬಹಳ ನಿರಾಶಾದಾಯಕವಾಗಿವೆ. ಸಮೀಕ್ಷೆಯ ಪ್ರಮುಖ ಸೂಚ್ಯಂಕಗಳನ್ನು ಗಮನಿಸಿದರೆ ಬಾಲ್ಯವಿವಾಹಗಳು ಹೆಚ್ಚಾಗಿವೆ. ಗರ್ಭನಿರೋಧಕಗಳ ಬಳಕೆಯಲ್ಲಿ ಪುರುಷರ ಭಾಗವಹಿಸುವಿಕೆ ಅತ್ಯಂತ ಕಡಿಮೆಯಾಗಿದೆ. ಇವುಗಳನ್ನೆಲ್ಲಾ ಬದಿಗಿಟ್ಟು ಮಕ್ಕಳ ಪೌಷ್ಟಿಕಾಂಶದ ಬಗ್ಗೆ ಗಮನಹರಿಸಿದರೆ ಐದು ವರ್ಷದೊಳಗಿನ ಮಕ್ಕಳಿಗೆ ಹೆಚ್ಚು ಪೌಷ್ಟಿಕಾಂಶಗಳು ದೊರಕುತ್ತಿಲ್ಲ, ಬಹಳಷ್ಟು ಮಕ್ಕಳು ಸೊರಗಿಹೋಗಿವೆ, ಕೆಲವು ಕಡಿಮೆ ತೂಕದವು ಅಥವಾ ವಯೋಸಹಜ ಎತ್ತರ ಮತ್ತು ತೂಕವಿಲ್ಲದವು ಅಥವಾ ಬೊಜ್ಜಿನವು. ಇದಕ್ಕೆ ಕಾರಣ, ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಜನರಿಗೆ ಸರ್ಕಾರ ಒಂದು ರೂಪಾಯಿಗೆ ಒಂದು ಕಿಲೋ, ಎರಡು ರೂಪಾಯಿಗೆ ಒಂದು ಕಿಲೋ ಕೆಲವೊಮ್ಮೆ ಉಚಿತವಾಗಿ ಸಾಕಷ್ಟು ಧಾನ್ಯಗಳನ್ನು ಪೂರೈಸುತ್ತಿದೆ. ಹಾಗಾಗಿ ಜನ ಹೆಚ್ಚೆಚ್ಚು ಧಾನ್ಯ ತಿನ್ನುತ್ತಿದ್ದಾರೆ. ಖನಿಜಾಂಶಗಳು, ಜೀವಸತ್ವಗಳಂತಹ ಪೌಷ್ಟಿಕಾಂಶಗಳ ಕೊರತೆಯಾಗಿದೆ. ಇದು ಜಾಗತಿಕ ಭಾರತದ ಅತಿ ನಿರಾಶಾದಾಯಕ, ಮುಜುಗರದ ಜಾಗತಿಕ ಹಸಿವು ಸೂಚ್ಯಂಕದ ಏರಿಕೆಯ ಪ್ರತೀಕವಾಗಿದೆ. ಇದು ಪ್ರಖ್ಯಾತ ಸಂಸ್ಥೆ ಮತ್ತು ತಜ್ಞರ ಸಮೀಕ್ಷೆಯ ವರದಿ. ನಮ್ಮ ಇತ್ತೀಚಿನ ಆಹಾರ ಪದ್ಧತಿಗೆ ನಾವು ತೆರುತ್ತಿರುವ ಬೆಲೆ. ಬಹುಶಃ ಜನರ ವರಮಾನ ಹೆಚ್ಚಾಗಿರುತ್ತಿದ್ದರೆ ಹೆಚ್ಚೆಚ್ಚು ಗುಣಮಟ್ಟದ ಆಹಾರಕ್ಕಾಗಿ ವ್ಯಯ ಮಾಡಬಹುದಿತ್ತು. ಹಾಲು, ಕೋಳಿಮಾಂಸ, ಬೇಳೆಕಾಳುಗಳು, ತರಕಾರಿ, ಹಣ್ಣು, ಮುಂತಾದ ಖನಿಜಾಂಶಗಳು, ಜೀವಸತ್ವವಿರುವ ಆಹಾರ ಸೇವಿಸಬಹುದಾಗಿತ್ತು. ಆದರೆ ಜನರ ವರಮಾನ ಕಳೆದ ಐದು ವರ್ಷಗಳಲ್ಲಿ ಜಾಸ್ತಿಯಾಗಿಲ್ಲ. ಅದೇನೇ ಇರಲಿ ಈ ಅಪೌಷ್ಠಿಕತೆಗೆ ಹೆಚ್ಚೆಚ್ಚು ಧಾನ್ಯಗಳ ಪೂರೈಕೆ ಕಾರಣವೆಂದೂ ಇದು ಯುಪಿಎ ಸರ್ಕಾರ ರಾಷ್ಟ್ರೀಯ ಆಹಾರ ಭದ್ರತಾ ಕಾನೂನು ಜಾರಿಗೆ ತಂದ ನಂತರದ ಪರಿಣಾಮವೆಂದೂ ವಾದಿಸಬಹುದು ಆದರೆ ಇಂದು ಕಾಣುವ ಅಪೌಷ್ಠಿಕತೆಯ ಪರಿಣಾಮಗಳಿಗಾಗಿ ಮೋದಿ ಸರ್ಕಾರ ಯುಪಿಎ ಅಥವಾ ಅದರ ಹಿಂದಿನ ಯಾವುದೇ ಸರ್ಕಾರವನ್ನು ದೂಷಿಸಲಾಗದು. ಏಕೆಂದರೆ ಇದು ಐದು ವರ್ಷದ ಮಕ್ಕಳಿಗೆ ಸಂಬಂಧಿಸಿದ ೨೦೧೯-೨೦ರ ಅಂಕಿ ಅಂಶಗಳು. ಈ ಮಕ್ಕಳು ಹುಟ್ಟಿರುವುದು ಮೋದಿ ಸರ್ಕಾರದ ಆಡಳಿತಾವಧಿಯಲ್ಲೇ. ಈ ಅಂಕಿ ಅಂಶಗಳು ಕೊರೋನಾ ಪಿಡುಗು ಬರುವುದಕ್ಕಿಂತ ಮುಂಚಿನ ಅಂಕಿ-ಅಂಶಗಳು. ಜೊತೆಗೆ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಈ ವಯೋಮಾನದ ಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತಿತ್ತು ಎಂದು ಈ ಅವಧಿಯ ಸಮೀಕ್ಷೆಗಳು ತಿಳಿಸುತ್ತವೆ. ಮೋದಿ ಆಡಳಿತದಲ್ಲಿ ಈ ಪ್ರವೃತ್ತಿ ತಿರುಗುಮುರುಗಾಗಿದೆ.

ಇದಕ್ಕೆ ನನಗೆ ತೋಚಿದ ಕಾರಣವೆಂದರೆ ಭಾರತದ ಆರ್ಥಿಕ ಅಭಿವೃದ್ಧಿಯ ವೇಗ ಸತತವಾಗಿ ಹಿಂದಿನ ವರ್ಷಗಳಿಂದಲೂ ಇಳಿಕೆಯಾಗುತ್ತಲೇ ಇದೆ. ನೋಟು ರದ್ದತಿಯ ನಂತರವಂತೂ ಬಡಬಗ್ಗರ ವರಮಾನ ತೀರಾ ಕುಗ್ಗಿ ಹೋಗಿದೆ. ಅವರು ಉತ್ತಮ ಆಹಾರಕ್ಕಾಗಿ, ಮಕ್ಕಳಿಗೆ ಪೌಷ್ಟಿಕವಾದ ಆಹಾರ ಒದಗಿಸಲು ಹೆಚ್ಚು ವ್ಯಯಿಸಲು ಸಾಧ್ಯವಾಗುತ್ತಿಲ್ಲ. ಇದು ಜೀವನಮಟ್ಟ ಸುಧಾರಣೆಗೆ ಅಡ್ಡಿಯಾಗಿರುವ ಒಂದು ಗಂಭೀರ ಅಂಶ.

ಇದನ್ನೆಲ್ಲ ಒಂದು ವರ್ಷವಲ್ಲ, ಹಲವು ವರ್ಷಗಳ ಕಾಲಮಾನದ ಹಿನ್ನೆಲೆಯಲ್ಲಿ ನೋಡಿದಾಗ ನಿಮ್ಮ ಆರ್ಥಿಕ ಸ್ವಾತಂತ್ರ್ಯ ಯಾವಾಗ ಕೆಳಗೆ ಹೋಗುತ್ತದೋ ಆಗ ರಾಜಕೀಯ ಸ್ವಾತಂತ್ರ್ಯವೂ ಕೆಳಗೆ ಹೋಗುತ್ತದೆ. ನಿಮ್ಮ ಧಾರ್ಮಿಕ ಸ್ವಾತಂತ್ರ್ಯವೂ ಕೆಳಗೆ ಹೋಗುತ್ತದೆ. ಹೀಗೆಯೇ ಎಲ್ಲಾ ಶ್ರೇಯಾಂಕಗಳು ಕೆಳಗಿಳಿಯುತ್ತವೆ. ಈ ಎಲ್ಲ ಸ್ವಾತಂತ್ರ್ಯಗಳ

(೧೩ನೇ ಪುಟಕ್ಕೆ

ಗಣರಾಜ್ಯೋತ್ಸವ ವಿಶೇಷ ಲೇಖನ

# ಭಂಗಗೊಳ್ಳುತ್ತಿರುವ ಒಕ್ಕೂಟ ರಾಷ್ಟ್ರ ತತ್ವ

- ನಾರಾಯಣ ಎ.

**ಸಹಕಾರಿ ಒಕ್ಕೂಟವಾದವನ್ನು ಪ್ರತಿಪಾದಿಸುತ್ತಿದ್ದವರೇ ಪ್ರಧಾನಿಯಾಗಿರುವ ಈ ಹೊತ್ತಿನಲ್ಲಿ ಬಲಿಷ್ಠ ರಾಷ್ಟ್ರ ನಿರ್ಮಾಣದ ಹೆಸರಿನಲ್ಲಿ ರಾಜ್ಯಗಳ ಅಧಿಕಾರಗಳನ್ನು ಒತ್ತರಿಸಿಕೊಂಡು ಬಲಿಷ್ಠ ಕೇಂದ್ರ ನಿರ್ಮಾಣವಾಗುತ್ತಿರುವುದು ವಿಪರ್ಯಾಸದ ಸಂಗತಿ. ಈ ವಿಪರ್ಯಾಸದ ಅಪಾಯಗಳನ್ನು ಚರ್ಚಿಸುವ ಒಂದು ಪ್ರಯತ್ನ ಈ ಲೇಖನ.-ಸಂ**





ಸಂವಿಧಾನಕ್ಕೆ ಸಂಬಂಧಿಸಿದಂತೆ ಒಂದೇ ವರ್ಷದ ಅವಧಿಯಲ್ಲಿ ಎರಡು ವೈರುಧ್ಯಮಯವಾದ ಸನ್ನಿವೇಶಗಳನ್ನು ದೇಶ ಕಂಡಿದೆ. ಹೋದ ವರ್ಷ ಗಣರಾಜ್ಯೋತ್ಸವದ ಹೊತ್ತಿಗೆ ಸಿಎಎ -ಎನ್‌ಆರ್ ಸಿ ವಿರೋಧಿ ಚಳವಳಿ ದೇಶದೆಲ್ಲೆಡೆ ಅನುರಣಿಸುತಿತ್ತು. ಸಂವಿಧಾನ, ಸಂವಿಧಾನದ ಪ್ರತಿಗಳು, ಸಂವಿಧಾನದ ಪ್ರಸ್ತಾವನೆ ಇತ್ಯಾದಿಗಳೆಲ್ಲಾ ಆ ಚಳವಳಿಯಲ್ಲಿ ಬಳಕೆಯಾದವು ಮತ್ತು ಶಕ್ತಿಶಾಲಿ ಸಂಕೇತಗಳಾಗಿ ಹೊರಹೊಮ್ಮಿದವು. ದೇಶಪ್ರೇಮಿಗಳು ಯಾರು? ದೇಶ ದ್ರೋಹಿಗಳು ಯಾರು? ಎನ್ನುವ ಪ್ರಶ್ನೆಗಳು ಇದ್ದಕ್ಕಿದ್ದಂತೆ ಧುತ್ತೆಂದು ಭಾರತೀಯ ಮೈಮನಗಳನ್ನು ಆವರಿಸಿರುವ ಆ ಹೊತ್ತಲ್ಲಿ ಸಂವಿಧಾನವನ್ನು ಒಪ್ಪಿಕೊಂಡು ಗೌರವಿಸುವುದರ ಆಚೆಗೆ ದೇಶಪ್ರೇಮದ ಪರೀಕ್ಷೆಯೊಂದು ಅಗತ್ಯವಿಲ್ಲ ಎಂಬ ಸರಳ ಸೂತ್ರವನ್ನು ಭಾರತದ ಸಹಸ್ರ ಸಹಸ್ರ ಯುವಕ ಯುವತಿಯರೆಲ್ಲಾ ಸೇರಿ ದೊಡ್ಡ ದೊಡ್ಡ ನಾಯಕರುಗಳಿಗೆ ರವಾನಿಸುತ್ತಿರುವಂತೆ ತೋರುತಿತ್ತು. ಯಾವ ಹಾಡನ್ನು ಹಾಡಿದರೆ ದೇಶಭಕ್ತಿಯಾಗುತ್ತದೆ, ಯಾವ ಘೋಷಣೆ ಕೂಗಿದರೆ ದೇಶ ದ್ರೋಹವಾಗುತ್ತದೆ ಎಂಬಿತ್ಯಾದಿ ಗೊಂದಲಗಳಿಗೆ ಉತ್ತರವೋ ಎಂಬಂತೆ ಸಾರ್ವಜನಿಕ ವೇದಿಕೆಗಳಲ್ಲಿ, ಸಂವಿಧಾನದ ಪೀಠಿಕೆಯನ್ನು ಓದುವ ಪರಿಪಾಟವೊಂದು ಹುಟ್ಟಿಕೊಂಡಿತ್ತು. ನಮ್ಮ ಧರ್ಮ- ನಿಮ್ಮ ಧರ್ಮ, ಒಳಗಣ ಧರ್ಮ-ಹೊರಗಣ ಧರ್ಮ, ಪ್ರಾಚೀನ ಧರ್ಮ- ಅರ್ವಾಚೀನ ಧರ್ಮ ಅಂತ ಧರ್ಮ-ಧರ್ಮಗಳ ನಡುವಣ ಸಂಬಂಧ ಹದಗೆಟ್ಟು ರಾಷ್ಟ್ರದ ಮೂಲಾಧಾರವೇ ಅಲುಗತೊಡಗಿದ ಕಾಲಕ್ಕೆ ಸಂವಿಧಾನವೇ ಭಾರತೀಯ ಧರ್ಮ ಅಂತ ಹೊಸ ತಲೆಮಾರಿನ ಮಕ್ಕಳು ಧರ್ಮದ ಹೆಸರಲ್ಲಿ ರಾಜಕೀಯ ಮಾಡುತ್ತಿರುವ, ರಾಜಕೀಯಕ್ಕಾಗಿ ಧರ್ಮವನ್ನು ಕೆಡಿಸುತ್ತಿರುವ ಹಿರಿಯರಿಗೆ ತಿಳಿಹೇಳುತ್ತಿದ್ದಂತೆ ತೋರುತಿತ್ತು. ಇದನ್ನೆಲ್ಲಾ ನೋಡುತ್ತಿದ್ದರೆ ಕೋರ್ಟುಗಳ ಅಂಗಳದಲ್ಲಿ, ನ್ಯಾಯಶಾಸ್ತ್ರ ಪಂಡಿತರ ಚರ್ಚೆಗಳಲ್ಲಿ ಉಳಿದುಕೊಂಡಿದ್ದ ಸಂವಿಧಾನ ಈಗ ಜನರ ಮಧ್ಯೆ ಕಾಣಿಸಿಕೊಳ್ಳುವಂತೆ, ಜನರ ಜನಪರ ಹೋರಾಟಗಳಿಗೆ ದಿಕ್ಸೂಚಿಯಾಗುತ್ತಿರುವಂತೆ, ಸಮಕಾಲೀನ ಜಾನಪದದ ಭಾಗವಾಗಿ ಹೋಗುತ್ತಿರುವಂತೆ ಭಾಸವಾಗುತ್ತಿತ್ತು.

ಈ ವರ್ಷದ (೨೦೨೧)ರ ಗಣರಾಜ್ಯೋತ್ಸವಕ್ಕೆ ದೇಶ ಅಣಿಯಾಗುತ್ತಿರುವ ಇಂದಿನ ದಿನಗಳಲ್ಲಿ ದೇಶ ಇನ್ನೊಂದು ರೀತಿಯ ಚಳವಳಿಯನ್ನು ನೋಡುತ್ತಿದೆ. ದೇಶದ ರಾಜಧಾನಿಯ ಸುತ್ತ ನೆರೆದಿರುವ ಸಾವಿರ ಸಾವಿರ ಸಂಖ್ಯೆಯ ರೈತರು ಕೃಷಿಯನ್ನು ಮುಕ್ತ ಮಾರುಕಟ್ಟೆಗೆ ಒಪ್ಪಿಸುವ ಕೇಂದ್ರ ಸರಕಾರದ ಮೂರು ಕಾನೂನುಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಅವರೂ ಸಂವಿಧಾನದ ಆಶಯದ ನಿಜ ಸಾಕ್ಷಾತ್ಕಾರಕ್ಕಾಗಿ ಈ ಹೋರಾಟ ನಡೆಸುತ್ತಿದ್ದಾರಾದರೂ ಅವರು ಸಂವಿಧಾನವನ್ನು ಸಾಂಕೇತಿಕವಾಗಿ ಪ್ರದರ್ಶಿಸುವ ಸ್ಥಿತಿಯಲ್ಲಿಲ್ಲ. ನಮ್ಮ ಸಮಸ್ಯೆಗೆ ಪರಿಹಾರ ಸಂವಿಧಾನದಲ್ಲಿದೆ ಎನ್ನುವ ಹಾಗಿಲ್ಲ. ಯಾಕೆಂದರೆ, ರಾಜ್ಯಗಳ ಅಧಿಕಾರವ್ಯಾಪ್ತಿಯನ್ನು ತಾನೇ ಆವಾಹಿಸಿಕೊಂಡು ಈ ಮೂರು ವಿವಾದಿತ ಕಾನೂನುಗಳನ್ನು ರೈತರ ಮೇಲೆ ಹೇರಲು ಕೇಂದ್ರ ಸರಕಾರ ಸಂವಿಧಾನವನ್ನೇ ಬಳಸಿಕೊಂಡಿದೆ. ಕೃಷಿ, ಕೃಷಿ ಮಾರುಕಟ್ಟೆ ಇತ್ಯಾದಿಗಳೆಲ್ಲಾ ರಾಜ್ಯಗಳ ಅಧಿಕಾರ ವ್ಯಾಪ್ತಿಗೆ ಸೇರಿದ ವಿಷಯಗಳು. ಆದರೂ ಅವುಗಳ ಮೇಲೆ ಕಾನೂನು ರೂಪಿಸುವ ಅಧಿಕಾರವನ್ನು ಕೇಂದ್ರವೂ ತಾಂತ್ರಿಕವಾಗಿ ಪಡೆದುಕೊಳ್ಳುವ ರೀತಿಯಲ್ಲಿ ಸಂವಿಧಾನ ರೂಪುಗೊಂಡಿದೆ. ಒಂದರ್ಥದಲ್ಲಿ, ಹೋದ ವರ್ಷದ ಸಿಎಎ-ಎನ್.ಆರ್.ಸಿ. ವಿರೋಧಿ ಸಮರ ಸಂವಿಧಾನದ ಬಳಕೆಯ ಹೊಸ ಸಾಧ್ಯತೆಗಳನ್ನು ತೆರೆದಿರಿಸಿದ್ದರೆ ಈ ವರ್ಷದ ರೈತ ಚಳವಳಿ ಸಂವಿಧಾನದ ಕೆಲವು ಮಿತಿಗಳ ಬಗ್ಗೆ ನಮ್ಮ ಗಮನಸೆಳೆಯುತ್ತದೆ. ರೈತರು ಪ್ರಶ್ನಿಸುತ್ತಿರುವ ಕೃಷಿ ಕಾನೂನುಗಳ ಹಿಂದೆ ಇರುವುದು ಕೇಂದ್ರ ಸರಕಾರದ ದೈತ್ಯ ಶಕ್ತಿ. ಆ ಶಕ್ತಿಯ ಪ್ರದರ್ಶನ ವಿವಿಧ ರೀತಿಯಲ್ಲಿ ನಡೆಯುತ್ತಿದ್ದು ವಿವಾದಿತ ಕೃಷಿ ಕಾನೂನುಗಳ ಜಾರಿ ಈ ಸಾಲಿನ ತೀರಾ ಇತ್ತೀಚೆಗಿನ ಬೆಳೆವಣಿಗೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಕೇಂದ್ರ ಸರಕಾರ ಈ ರೀತಿ ಮತ್ತೆ ಮತ್ತೆ ಬಲ ಪ್ರದರ್ಶನ ನಡೆಸುವುದಕ್ಕೆ ಮೂಲದಲ್ಲಿ ಸಂವಿಧಾನವೇ ಹಾದಿ ಹಾಕಿ ಕೊಟ್ಟಿದೆ ಎನ್ನುವುದು ಇಲ್ಲಿರುವ ವಿಪರ್ಯಾಸಕರ ಅಂಶ. ಈ ಅಸಮತೋಲನವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಅದನ್ನು ಸರಿಪಡಿಸುವ ಕುರಿತು ಯೋಚಿಸಬೇಕಾದ ಸಮಯ ಬಂದಂತೆ ಕಾಣುತ್ತದೆ.

### ಲೋಕಸಭೆಯ ವಿಸ್ತರಣೆಯಾಗಿರುವ ರಾಜ್ಯಸಭೆ

ರಾಜ್ಯಗಳಿಗೆ ಸಾರ್ವಭೌಮಾಧಿಕಾರದಲ್ಲಿ ಸಮಪಾಲು ನೀಡಿ ದೇಶವನ್ನು ಒಕ್ಕೂಟ ವ್ಯವಸ್ಥೆಯನ್ನಾಗಿ ರೂಪಿಸಿದ ಸಂವಿಧಾನವೇ ಕೇಂದ್ರ ಸರಕಾರಕ್ಕೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಿದೆ; ಹೆಚ್ಚು ರಾಜಕೀಯ ಅಧಿಕಾರವನ್ನು ನೀಡಿದೆ. ಸಾರ್ವಭೌಮಾಧಿಕಾರದ ಪರಿಕಲ್ಪನೆಯೇ ಆ ಅಧಿಕಾರದ ಮೇಲೆ ಯಾವ ಶಕ್ತಿಯೂ ಸವಾರಿ ಮಾಡುವ ಸ್ಥಿತಿಯಲ್ಲಿ ಇರಬಾರದು ಎನ್ನುವುದು. ಆದರೆ ಅಧಿಕ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳನ್ನು ಹೊಂದಿದ ಕೇಂದ್ರ ಸರಕಾರ ರಾಜ್ಯಗಳ ಸಾರ್ವಭೌಮಾಧಿಕಾರದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿರುವುದು ಮಾತ್ರವಲ್ಲ, ವಿವಿಧ ರೀತಿಯ ದಾಳಿಗಳನ್ನೂ ನಡೆಸುತ್ತಿದೆ. ರಾಜ್ಯಗಳೂ, ರಾಜ್ಯಗಳು ಪ್ರತಿನಿಧಿಸುವ ಬಹುತ್ವವನ್ನೂ ಎತ್ತಿ ಹಿಡಿಯುವ ಸಂವಿಧಾನ ಹಿಂದಿಯನ್ನು ಅಧಿಕೃತ ಭಾಷೆ ಅಂತ ಘೋಷಿಸುತ್ತದೆ (ಆದರೆ, ಹಲವಾರು ಮಂದಿ ವಾದಿಸುವಂತೆ ಹಿಂದಿ ರಾಷ್ಟ್ರ ಭಾಷೆ ಅಂತ ಸಂವಿಧಾನ ಹೇಳಿಲ್ಲ). ಸಂವಿಧಾನ ಕೇಂದ್ರ ಸರಕಾರಕ್ಕೆ ಮಾತ್ರ ಸೇರಿದ್ದಲ್ಲ. ಅದು ರಾಜ್ಯಗಳಿಗೂ ಸೇರಿದ್ದು. ಆದರೆ ಸಂವಿಧಾನದಲ್ಲಿ ಬಹಳಷ್ಟು ಬದಲಾವಣೆಗಳನ್ನು ಕೇಂದ್ರ ಅಂದರೆ ಸಂಸತ್ತು ರಾಜ್ಯಗಳನ್ನು ಗಣನೆಗೆ ತೆಗೆದುಕೊಳ್ಳದೆಯೇ ಮಾಡಬಹುದಾದ ಅಧಿಕಾರವನ್ನು ಸಂವಿಧಾನ ಕೇಂದ್ರಕ್ಕೆ ನೀಡಿದೆ. ನಿಜ. ಸಂಸತ್ತಿನ ರಾಜ್ಯಸಭೆ ರಾಜ್ಯಗಳ ಹಿತರಕ್ಷಣೆಗೆಂದು ಸ್ಥಾಪಿಸಲಾದ ವ್ಯವಸ್ಥೆ. ಆದರೆ ರಾಜ್ಯಸಭೆ ಎನ್ನುವುದು ರಾಜ್ಯಗಳ ಸಂಸ್ಥೆಯಾಗುವುದರ ಬದಲು ಅದೂ ಲೋಕಸಭೆಯ ಇನ್ನೊಂದು ಭಾಗವೇನೋ ಎನ್ನುವಂತೆ ಕೇಂದ್ರದಲ್ಲಿ ಆಡಳಿತ ನಡೆಸುವ ರಾಜಕೀಯ ಪಕ್ಷಗಳು ಅದನ್ನು ಮಾರ್ಪಡಿಸಿ ನಡೆಸಿಕೊಂಡು ಹೋಗುತ್ತಿವೆ.. ಯಾವುದೋ ರಾಜ್ಯದ ಸ್ಥಾನಗಳನ್ನು ತುಂಬಲು ಇನ್ಯಾವುದೋ ರಾಜ್ಯದ ವ್ಯಕ್ತಿಗಳು ರಾಜ್ಯಸಭೆಗೆ ಆಯ್ಕೆಯಾಗುತ್ತಿರುವುದು ಇಡೀ ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತಿದೆ. ಒಕ್ಕೂಟದ ತತ್ವಗಳಿಗೆ ಬದ್ಧತೆಯನ್ನು ಸಾರುವ ಸಂವಿಧಾನ ಈ ಪರಿಪಾಟಕ್ಕೆ ನಿರ್ಬಂಧ ಹೇರಿಲ್ಲ. ಯಾವುದೋ ರಾಜ್ಯದವರು ಯಾವುದೋ ರಾಜ್ಯದಿಂದ ರಾಜ್ಯ ಸಭೆಗೆ ಆಯ್ಕೆ ಆದರೆ ಸಂಬಂಧಪಟ್ಟ ರಾಜ್ಯದ ಹಿತಾಸಕ್ತಿ ಹೇಗೆ ರಕ್ಷಣೆ ಆಗುವುದು ಎನ್ನುವುದು ಒಂದು ಪ್ರಶ್ನೆ. ಇನ್ನೊಂದು, ಹಾಗೆ ಆಯ್ಕೆ ಆದ ರಾಜ್ಯಸಭಾ ಸದಸ್ಯನೊಬ್ಬ ತನ್ನ ಪಕ್ಷದ ಹಿತಾಸಕ್ತಿಗೆ (ಆ ಪಕ್ಷ ರಾಷ್ಟ್ರೀಯ ಪಕ್ಷವೇ ಆಗಿರುವುದರಿಂದ ಕೇಂದ್ರದ ಹಿತಾಸಕ್ತಿಗೆ) ಅನುಗುಣವಾಗಿ ಕೆಲಸ ಮಾಡಬಹುದೇ ಹೊರತು ರಾಜ್ಯದ ಹಿತಾಸಕ್ತಿಯ ಪರವಾಗಿಯಲ್ಲ.

### ಸಂವಿಧಾನದಡಿಯಲ್ಲೇ ರಾಜ್ಯಗಳ ಮೇಲೆ ಕೇಂದ್ರದ ಸವಾರಿ

ಸಂವಿಧಾನದ ಏಳನೆಯ ಶೆಡ್ಯೂಲ್‌ನ ಎರಡನೆಯ ಪಟ್ಟಿಯ ಮೂಲಕ ರಾಜ್ಯಗಳ ಅಧಿಕಾರ ವ್ಯಾಪ್ತಿಗೆ ನೀಡಲಾದ ವಿಷಯಗಳನ್ನು ಸಮವರ್ತಿ ಪಟ್ಟಿಗೆ ಸೇರಿಸುವ ಮೂಲಕ ಕೇಂದ್ರವೂ ಆ ವಿಷಯಗಳ ಮೇಲೆ ಅಧಿಕಾರ ಸ್ಥಾಪಿಸಲು ಹೊರಟರೆ ಸಂವಿಧಾನ ತಡೆಯುವುದಿಲ್ಲ. ರಾಜ್ಯ ಪಟ್ಟಿಯಲ್ಲಿರುವ ವಿಷಯಗಳಲ್ಲೂ ಕೇಂದ್ರ ಮೂಗು ತೋರಿಸುವ ಪ್ರಕರಣಗಳು ಮತ್ತೆ ಮತ್ತೆ ನಡೆಯುತ್ತಿದೆ. ಕೊರೋನಾ ಕಾಲದುದ್ದಕ್ಕೂ ಕೇಂದ್ರ ಸರಕಾರ

ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಜನಜೀವನವನ್ನು ಬಾಧಿಸುವ ಹಲವು ಕ್ರಮಗಳನ್ನು ಕೈಗೊಂಡದ್ದು ಇದಕ್ಕೆ ತೀರಾ ಇತ್ತೀಚೆಗಿನ ಉದಾಹರಣೆ. ರಾಜ್ಯ ಸರಕಾರಗಳನ್ನು ಬೇಕಾಬಿಟ್ಟಿಯಾಗಿ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರುವ ಪರಿಪಾಟಕ್ಕೆ ಸುಪ್ರೀಂ ಕೋರ್ಟ್ ೧೯೯೪ರಲ್ಲಿ ನೀಡಿದ ಎಸ್.ಆರ್. ಬೊಮ್ಮಾಯಿ ತೀರ್ಪು ಒಂದು ಹಂತದ ತಿಲಾಂಜಲಿ ನೀಡಿತು. ವಜಾಗೊಳಿಸದಿದ್ದರೆ ಏನು? ಕೇಂದ್ರ ರಾಜ್ಯ ಸರಕಾರಗಳನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವ, ಅಂಕೆಗೆ ಸಿಗದೇ ಹೋದರೆ ಸತಾಯಿಸಲು ಬೇಕಾದಷ್ಟು ಅಧಿಕಾರ ಸಂವಿಧಾನದತ್ತವಾಗಿಯೇ ಕೇಂದ್ರದ ಬಳಿ ಬೊಮ್ಮಾಯಿ ತೀರ್ಪಿನ ಬಳಿಕವೂ ಇದೆ.

### ಪ್ರಾದೇಶಿಕ ಭಾಷೆಗಳಿಗೆ ಕುತ್ತಾದ ಮೂಲಭೂತ ಹಕ್ಕುಗಳು!

ಸಂವಿಧಾನದ ಆಶಯ ಒಕ್ಕೂಟ ವ್ಯವಸ್ಥೆ. ಆದರೆ ಅದರ ಧಾಟಿ, ಪದ ವಿಂಗಡಣೆ, ಪ್ರಾಯೋಗಿಕ ನಿಯಮಗಳೆಲ್ಲವೂ ಅಧಿಕಾರ ಕೇಂದ್ರೀಕರಣಕ್ಕೆ ಪೂರಕ. ಒಂದೆಡೆ ಹಿಂದಿಯ ಪ್ರಸಾರಕ್ಕೆ ಸಂವಿಧಾನ ಅನುವು ಮಾಡಿಕೊಡುತ್ತದೆ. ಇನ್ನೊಂದೆಡೆ ರಾಜ್ಯ ಭಾಷೆಗಳು ಆಯಾ ರಾಜ್ಯಗಳಲ್ಲಿ ಕಡ್ಡಾಯ ಶಿಕ್ಷಣ ಮಾಧ್ಯಮವಾಗಬೇಕು ಎಂದು ಹೊರಟರೆ ಅದಕ್ಕೆ ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳು ತೊಡಕಾಗುತ್ತವೆ. ಎಲ್ಲಾ?ಭಾಷೆಗಳ ಪೋಷಣೆ ಇಲ್ಲದೆ ಸಮಾನತೆ ಉಳಿಯುವುದು ಹೇಗೆ, ಬಹುತ್ವ ಉಳಿಯುವುದು ಹೇಗೆ. ಸಂವಿಧಾನದ ಮೂಲ ಆಶಯಗಳಾದ ಸಮಾನತೆ ಮತ್ತು ಬಹುತ್ವ ಎರಡಕ್ಕೂ ಪ್ರೇರಕವಾಗಿ ಮತ್ತು ಪೂರಕವಾಗಿರುವ ಒಕ್ಕೂಟ ವ್ಯವಸ್ಥೆಯ ಬಗ್ಗೆ ಸಂವಿಧಾನದಲ್ಲಿ ಈ ಸಡಿಲ ನಿಲುವೇಕೆ? ಸಂವಿಧಾನ ಕೇಂದ್ರ ಸರಕಾರ ಎಂಬ ಪದವನ್ನೇ ಬಳಸುವುದಿಲ್ಲ. ಬದಲಾಗಿ 'ಒಕ್ಕೂಟ' (ಯೂನಿಯನ್) ಎನ್ನುವ ಪದ ಬಳಸುತ್ತದೆ. ಸಂವಿಧಾನದ ಮೊದಲ ಪರಿಚ್ಛೇದವೇ 'ಇಂಡಿಯಾ ಅಂದರೆ ಭಾರತವು ರಾಜ್ಯಗಳ ಒಂದು ಒಕ್ಕೂಟ' ಅಂತ ದಾಖಲಿಸುತ್ತದೆ. ಅಷ್ಟೆಲ್ಲ ಹೇಳಿದ ನಂತರ ಕೇಂದ್ರ ಸರಕಾರದ ಬಳಿ ಎಲ್ಲ ಅಧಿಕಾರ ಉಳಿಯಲೂ ಅನುವು ಮಾಡಿಕೊಡುತ್ತದೆ.

### ಬಲಿಷ್ಠ ಕೇಂದ್ರ ಅಗತ್ಯ ಎಲ್ಲ ಕಾಲಕ್ಕಲ್ಲ

ಸಂವಿಧಾನ ಒಂದು ಪ್ರಾಯೋಗಿಕ ಗ್ರಂಥ. ಅದರಲ್ಲಿರುವುದು ಒಣ ತತ್ವಗಳಲ್ಲ. ಅದರಲ್ಲಿರುವುದು ಮಾನವೀಯ ಮೌಲ್ಯಗಳಿಂದ ಲೇಪಿತವಾಗಿರುವ ಪ್ರಾಯೋಗಿಕ ಸೂತ್ರಗಳು. ಪ್ರಾಯೋಗಿಕ ಸೂತ್ರಗಳನ್ನು ಪ್ರಾಯೋಗಿಕವಾಗಿಯೇ ಪರಿಗಣಿಸಬೇಕು. ಭಾವನಾತ್ಮಕವಾಗಿಯಲ್ಲ. ಪ್ರಾಯೋಗಿಕವಾಗಿರುವ ಎಲ್ಲಾ ವಿಚಾರಗಗಳು ಕಾಲದೊಂದಿಗೆ ಸಂವೇದಿಯಾಗಿರುತ್ತವೆ. ಒಂದು ಕಾಲಕ್ಕೆ ಪ್ರಾಯೋಗಿಕವಾಗಿರುವುದು ಇನ್ನೊಂದು ಕಾಲಕ್ಕೆ ಅಪ್ರಾಯೋಗಿಕವೆನಿಸುತ್ತದೆ. ಒಂದು ಕಾಲದ ಅಗತ್ಯ ಇನ್ನೊಂದು ಕಾಲದ ಹೊರೆಯಾಗುತ್ತದೆ. ಉದಾಹರಣೆಗೆ ಸಂವಿಧಾನ ಬರೆಯುವ ಕಾಲಕ್ಕೆ ಪ್ರಬಲವಾದ ಕೇಂದ್ರ ಸರ್ಕಾರವೊಂದರ ಅಗತ್ಯವಿತ್ತು. ಆದ ಕಾರಣ ಒಲ್ಲದ ಮನಸ್ಸಿನಿಂದ ಸಂವಿಧಾನ ಬರೆದವರು ಕೇಂದ್ರವನ್ನು ರಾಜ್ಯಗಳಿಗಿಂತ ಹೆಚ್ಚು ಬಲಿಷ್ಠಗೊಳಿಸಿದರು.

ವಾಸ್ತವವಾಗಿ ಭಾರತ ರಾಜ್ಯಗಳಿಂದಾಗಿ ಸೃಷ್ಟಿಯಾದ ದೇಶ. ಭಾರತದಲ್ಲಿ ರಾಜ್ಯಗಳನ್ನು ದೇಶ ಸೃಷ್ಟಿಸಲಿಲ್ಲ. ಹಾಗಾಗಿ ರಾಜ್ಯಗಳನ್ನು ಕೇಂದ್ರದ ಜತೆ ಸಮನಾದ ಪಾಲುದಾರರನ್ನಾಗಿ ಸಂವಿಧಾನ ರೂಪಿಸಬೇಕಿತ್ತು. ಕಾಂಗ್ರೆಸ್ ಸ್ವಾತಂತ್ರ್ಯ ಸಂಗ್ರಾಮದುದ್ದಕ್ಕೂ ಈ ತತ್ವಕ್ಕೆ ಬದ್ಧವಾಗಿತ್ತು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಯೋಚನೆಯೂ ಇದೇ ಧಾಟಿಯಲ್ಲೇ ಇತ್ತು. ಆದರೂ, ಸಂವಿಧಾನ ರಚನೆಯ ಹೊತ್ತಲ್ಲೇ ನಡೆದುಹೋದ ದೇಶದ ವಿಭಜನೆ ಈ ಕುರಿತಾದ ಯೋಚನೆಯ ದಿಕ್ಕನ್ನು ಬದಲಿಸಿತು. ರಾಜ್ಯಗಳನ್ನು ಕೇಂದ್ರಕ್ಕೆ ಸರಿಸಮಾನವಾಗಿ ನಿರ್ಮಿಸಿದರೆ ಆಗ ಕೆಲ ರಾಜ್ಯಗಳು ದೇಶದಿಂದ ಒಡೆದು ಹೋಗಲು ಮುಂದಾಗಿ ಬಿಟ್ಟರೆ ಎನ್ನುವ ಭಯ ಅವರನ್ನು ಕಾಡಿತು. ಹಾಗಾಗಿ ಕೇಂದ್ರಕ್ಕೆ ಹೆಚ್ಚು ರಾಜಕೀಯ ಮತ್ತು ಆರ್ಥಿಕ ಅಧಿಕಾರವನ್ನು ಅವರು ನೀಡಿದರು. ಹಣದ ಥೈಲಿ ಕೇಂದ್ರದ ಕೈಯಲ್ಲಿದ್ದರೆ ಒಕ್ಕೂಟ ಬಿಟ್ಟು ಹೋಗದಂತೆ ರಾಜ್ಯಗಳನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯೂ ಅದಕ್ಕಿರುತ್ತದೆ ಎಂದು ನಂಬಿದರು. ಹೀಗೆ ಕೇಂದ್ರವನ್ನ ರಾಜ್ಯಗಳಿಗಿಂತ ಬಲಿಷ್ಠಗೊಳಿಸಿದ್ದು ಒಂದು ಸಾಂವಿಧಾನಿಕ ಅಸಮತೋಲನ. ಇದನ್ನು ಬೇಕಂತಲೇ ಸೃಷ್ಟಿಸಲಾಯಿತು. ಆದರೆ ಈ ಅಸಮತೋಲನವನ್ನು ಹಾಗೆಯೇ ಉಳಿಸಿಕೊಳ್ಳಬೇಕೆಂದು ಅವರ ಆಶಯವಾಗಿರಲಿಲ್ಲ. ಅದು ಆ ಕಾಲದ ಅಗತ್ಯಕ್ಕೆ ಸಂವಿಧಾನ ನಿರ್ಮಾತೃಗಳು ಸ್ಪಂದಿಸಿದ ರೀತಿ. ಅದು ಸಂವಿಧಾನದ ಶಾಶ್ವತ ತತ್ವವೇನೂ ಅಲ್ಲ. ಆದ ಕಾರಣವೇ ತನ್ನ ಹಲವಾರು ತೀರ್ಪುಗಳಲ್ಲಿ ಕೇಂದ್ರ ಸರಕಾರದ ಅಧಿಕಾರವನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್ ಕೂಡಾ ಸಂವಿಧಾನದ ಮೂಲ ಆಶಯ ಒಕ್ಕೂಟ ತತ್ವವೇ ಆಗಿದೆ ಎನ್ನುವ ಅಭಿಪ್ರಾಯವನ್ನು ಹೇಳಿದೆ. ಮಾತ್ರವಲ್ಲ, ಪ್ರಸಿದ್ಧ ಕೇಶವಾನಂದ ಭಾರತಿ ಪ್ರಕರಣದ ತೀರ್ಪಿನಲ್ಲಿ ಒಕ್ಕೂಟ ವ್ಯವಸ್ಥೆ ಸಂವಿಧಾನದ ಮೂಲ ಸಂರಚನೆಯ ಭಾಗ ಅಂತ ಒತ್ತಿ ಹೇಳಿದೆ.

### ಒಂದು ರಾಷ್ಟ್ರ ಒಂದು ಭಾಷೆ, ಒಂದು ಧರ್ಮದ ಅಪಾಯ

ಸಂವಿಧಾನ ನಿರ್ಮಾತೃಗಳನ್ನು ಕಾಡಿದ್ದ ವಿಭಜನೆಯ ಭಯ ಅರ್ಥ ಕಳೆದುಕೊಂಡಿದೆ. ರಾಜ್ಯವೊಂದು ಭಾರತೀಯ ಒಕ್ಕೂಟದಿಂದ ಕಳಚಿಕೊಂಡು ಸ್ವತಂತ್ರ ದೇಶವಾಗುವ ಸನ್ನಿವೇಶ ಈಗ ತೀರಾ ಅಸಂಭವ. ಆದರೆ, ಕೇಂದ್ರ ಸರಕಾರ ಈಗಿನ ರೀತಿಯಲ್ಲೇ ತನ್ನ ಅಧಿಕಾರ ಕೇಂದ್ರೀಕರಣವನ್ನು ಮುಂದುವರಿಸಿದರೆ, ರಾಜ್ಯಗಳನ್ನು ಸಾಮಂತ ಪ್ರಾಂತ್ಯಗಳಂತೆ ಪರಿಗಣಿಸಿ ಆಡಳಿತ ನಡೆಸಿದರೆ ಆಗ ಮತ್ತೆ ವಿಭಜನೆಯ ಪ್ರವೃತ್ತಿ ತಲೆ ಎತ್ತಿದರೂ ಆಶ್ಚರ್ಯ ಪಡಬೇಕಾಗಿಲ್ಲ. ಯಾವ ಉದ್ದೇಶದಿಂದ ಸಂವಿಧಾನ ಬರೆದವರು ಕೇಂದ್ರಕ್ಕೆ ಹೆಚ್ಚು ಅಧಿಕಾರ ನೀಡಿದರೋ, ಆ ಅಧಿಕಾರ ಈಗ ಆ ಮೂಲ ಉದ್ದೇಶಕ್ಕೆ ಮುಳುವಾಗುವ ಹಂತ ತಲುಪಿದೆ. ಅತಿಯಾಗಿ ಅಂಕೆಯಲ್ಲಿಟ್ಟುಕೊಳ್ಳುವ ಪ್ರಯತ್ನ ಅರಾಜಕತೆಯಲ್ಲಿ ಅಂತ್ಯವಾದದ್ದಕ್ಕೆ ಚರಿತ್ರೆ ಬೇರೆ ಬೇರೆ ಸಂದರ್ಭಗಳಲ್ಲಿ ಸಾಕ್ಷಿಯಾಗಿದೆ. ಸೋವಿಯಟ್ ಯೂನಿಯನ್ ಛಿದ್ರವಾಗಿದ್ದರ ಹಿಂದೆ ಅಧಿಕಾರ ಕೇಂದ್ರೀಕರಣದ ರಾಜಕೀಯ ಕೆಲಸ ಮಾಡಿತ್ತು. ನೆರೆಯ ಪಾಕಿಸ್ತಾನ ಇಬ್ಭಾಗವಾಗಿ ಹೋದದ್ದು ಕೂಡಾ ಪಶ್ಚಿಮ ಪಾಕಿಸ್ತಾನ ಪೂರ್ವ ಪಾಕಿಸ್ತಾನದ ಮೇಲೆ ಭಾಷಾ ಪ್ರಭುತ್ವ ಸ್ಥಾಪಿಸಹೊರಟ ಕಾರಣದಿಂದಾಗಿ ಎಂಬ ಸತ್ಯವನ್ನು ಭಾರತ ಮರೆಯಬಾರದು.

ಆದರೆ ಒಂದು ರಾಷ್ಟ್ರ, ಒಂದು ಭಾಷೆ, ಒಂದು ಧರ್ಮ, ಒಬ್ಬನೇ ರಾಮ, ಒಂದೇ ರಾಮಾಯಣ ಅಂತ ಸ್ಥಾಪಿಸಹೊರಟ ರಾಜಕೀಯ ಶಕ್ತಿಗಳಿಗೆ ಇದೆಲ್ಲಾ ಅರ್ಥವಾಗಲಾರದು. ಸಂವಿಧಾನದತ್ತವಾಗಿ ಕೇಂದ್ರ ಸರಕಾರ ಅಗತ್ಯಕ್ಕಿಂತ ಹೆಚ್ಚು ಅಧಿಕಾರ ಹೊಂದಿರುವಷ್ಟು ಕಾಲ, ಕೇಂದ್ರದಲ್ಲಿ ಸ್ವಂತ ಬಹುಮತ ಪಡೆದು ಅಧಿಕಾರಕ್ಕೆ ಬಂದ ಪಕ್ಷವೊಂದು ರಾಜ್ಯಗಳ ಮೇಲೆ ಸವಾರಿ ಮಾಡುವುದನ್ನು ಮತ್ತು ಆ ಮೂಲಕ ಈ ದೇಶದ ಬಹುತ್ವಕ್ಕೆ ಸಂಚಕಾರ ತರುವ ರೀತಿಯಲ್ಲಿ ವರ್ತಿಸುವುದನ್ನು ನಿಲ್ಲಿಸಲಾಗದು. ಹಾಗಾದರೆ ಏನು ಪರಿಹಾರ? ಪರಿಹಾರ ಇಷ್ಟೇ. ಸಂವಿಧಾನದ ಕೆಲವು ಅಸಮತೋಲನಗಳನ್ನು ನಿರ್ಭಾವುಕವಾಗಿ ಗುರುತಿಸಿ ಸರಿಪಡಿಸಿಕೊಳ್ಳುವ ಕಾಲ ಬಂದಿದೆ. ಸಂವಿಧಾನವನ್ನು ಬೇಕಾದ ಹಾಗೆ ತಿದ್ದಿ–ತೀಡಿ ರೂಪಿಸುವ ಅಧಿಕಾರವನ್ನು ಸಂವಿಧಾನ ನಿರ್ಮಾತೃಗಳು ಮುಂದಿನ ತಲೆಮಾರಿನವರಿಗೆ ಬಿಟ್ಟು ಹೋಗಿರುವುದು ಇಂತಹ ಕೆಲವು ಅಸಮತೋಲನಗಳನ್ನು ಕಾಲದ ಅಗತ್ಯಗಳಿಗೆ ಅನುಗುಣವಾಗಿ ಸರಿಪಡಿಸಿಕೊಳ್ಳಲಿ ಎಂಬ ಉದ್ದೇಶದಿಂದಲೇ ಅಲ್ಲವೇ?

### ಪ್ರಾದೇಶಿಕ ನಾಯಕತ್ವದ ದಮನ

ರಾಜ್ಯಗಳ ಸ್ವಾಯತ್ತತೆಯನ್ನು ಮತ್ತು ಸ್ವಾಭಿಮಾನವನ್ನು ರಕ್ಷಿಸಲು ಹೋರಾಟ ನಡೆಸಬೇಕಾಗಿರುವವರು ರಾಜ್ಯ ಮಟ್ಟದ ರಾಜಕೀಯ ನಾಯಕರು ಅಥವಾ ರಾಜ್ಯ–ಮಟ್ಟದ ಪಕ್ಷಗಳ ನಾಯಕರು. ಆದರೆ ಅಂತಹ ಪ್ರವೃತ್ತಿ ತೋರಿಸಬಲ್ಲ ನಾಯಕತ್ವವನ್ನು ಕೇಂದ್ರ ಸರಕಾರದಲ್ಲಿ ಅಧಿಕಾರ ಹೊಂದಿದವರು ಸಹಿಸುವುದಿಲ್ಲ. ಹಿಂದೆ ಇಂತಹ ನಾಯಕರನ್ನು ಮಣಿಸಲು ಸಂವಿಧಾನದ ೩೫೬ ನೇ ವಿಧಿ ಬಳಸಿ ರಾಜ್ಯ ಸರಕಾರಗಳನ್ನು ವಜಾ ಮಾಡಲಾಗುತಿತ್ತು. ಈಗ ಕೇಂದ್ರದ ಆಧೀನದಲ್ಲಿರುವ ವಿವಿಧ ತನಿಖಾ ಸಂಸ್ಥೆಗಳನ್ನು ಛೂ ಬಿಡುವ ಮೂಲಕ ಅಂತಹ ನಾಯಕತ್ವವನ್ನು ಹಣಿಯುವ ಕೆಲಸ ನಡೆಯುತ್ತಿದೆ. ಒಂದು ಕಾಲಕ್ಕೆ ಬಲಿಷ್ಠ ಪ್ರಾದೇಶಿಕ ನಾಯಕರು ಅಂತ ಅನ್ನಿಸಿಕೊಂಡವರೆಲ್ಲಾ ಈಗ ಕೇಂದ್ರದೆದುರು ಬಾಲ ಮುದುಡಿಕೊಂಡು ಸುಮ್ಮನಾಗುತ್ತಿದ್ದಾರೆ. ಈ ದೇಶದಲ್ಲಿ ರಾಜಕೀಯ ನಡೆಸಿದ ಪ್ರತಿಯೊಬ್ಬ ನಾಯಕನೂ ಗುಟ್ಟಾಗಿ ಏನೋ ಒಂದು ಅಕ್ರಮ ನಡೆಸಿಯೇ ಇರುತ್ತಾನೆ. ಅದರಲ್ಲಿ ಯಾವುದಾದರೂ ಒಂದನ್ನು ಬಳಸಿಕೊಂಡು ಬ್ಲಾಕ್ ಮೇಲ್ ಮಾಡುವ ಮೂಲಕ ಸುಮ್ಮನಾಗಿಸುವಷ್ಟು ರಾಜಕೀಯ ಬಲ ಕೇಂದ್ರ ಸರಕಾರಗಳಿಗೆ ಇದೆ. ಈ ಸ್ಥಿತಿಯಲ್ಲಿ, ಒಕ್ಕೂಟವನ್ನು ಉಳಿಸಬಲ್ಲವರು ಯಾರು? ರಾಜ್ಯಗಳನ್ನು ನಿಜ ಅರ್ಥದಲ್ಲಿ ಸಾರ್ವಭೌಮಾಧಿಕಾರದ ಪಾಲುದಾರರನ್ನಾಗಿಸುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂದು ಒತ್ತಾಯ ಹೇರುವವರು ಯಾರು?

ಹೇಳಿ ಕೇಳಿ ಸಂವಿಧಾನವನ್ನು ಹೀಗೆ ದೊಡ್ಡ ಮಟ್ಟದಲ್ಲಿ ತಿದ್ದುಪಡಿ ಮಾಡಲು ಸಂಸತ್ತಿಗೆ ಮಾತ್ರ ಸಾಧ್ಯ. ಸಂಸತ್ತು ವಾಸ್ತವದಲ್ಲಿ ಕೇಂದ್ರದಲ್ಲಿ ಬಹುಮತ ಪಡೆದಿರುವ ಪಕ್ಷದ ಅಧೀನದಲ್ಲೇ ಇರುತ್ತದೆ. ಹಾಗಿರುವಾಗ ದೊಡ್ಡ ಮಟ್ಟದ ಒತ್ತಡ ಕೇಂದ್ರದ ಮೇಲೆ ಬಂದಾಗ ಮಾತ್ರ ಇಂತಹದ್ದೊಂದು ಬದಲಾವಣೆ ಸಾಧ್ಯ. ಆ ಒತ್ತಡ ರಾಜಕೀಯ ಪಕ್ಷಗಳಿಂದಾಗಲೀ, ನಾಯಕರಿಂದಾಗಲೀ ಸೃಷ್ಟಿಯಾಗುವ ಸಾಧ್ಯತೆ ಇಲ್ಲ. ಅದು ಬಂದರೆ ಜನಾಂದೋಲನದ ಮೂಲಕವೇ ಬರಬೇಕು. ಈ ನಿಟ್ಟಿನಲ್ಲಿ ಜನಾಂದೋಲನವೊಂದು ಸೃಷ್ಟಿಯಾಗಬೇಕು ಎಂದಾದರೆ ಸಂವಿಧಾನದ ಈಗಿನ ಇತಿಮಿತಿಗಳು ಹೇಗೆ ಕೇಂದ್ರದಲ್ಲಿ ಅಧಿಕಾರ ಹೊಂದಿದವರನ್ನು ನಿರಂಕುಶ ಶಕ್ತಿಗಳನ್ನಾಗಿ ರೂಪಿಸುತ್ತದೆ ಎನ್ನುವ ಸತ್ಯ ಜನಮನದಾಳಕ್ಕೆ ಇಳಿಯಬೇಕು. ಅದಕ್ಕಾಗಿ ಚರ್ಚೆ, ಸಂವಾದ, ಮಾಧ್ಯಮ ಮೀಮಾಂಸೆ, ಹೋರಾಟ, ಹಾಡುಗಳು, ಬೀದಿ ನಾಟಕಗಳು ಇತ್ಯಾದಿ ಎಲ್ಲವನ್ನೂ ಒಳಗೊಂಡ ವ್ಯವಸ್ಥಿತ ಪ್ರಯತ್ನವೊಂದು ಬೇಕಾಗಬಹುದು.

### ಹುಸಿಯಾದ ಸಂವಿಧಾನ ಶಿಲ್ಪಿಗಳ ನಂಬಿಕೆ

ಸಂವಿಧಾನ ಎಂಬುದು ಒಂದು ನಂಬಿಕೆಯ ಒಡಂಬಡಿಕೆ. ಅದು ಒಂದು ತಲೆಮಾರಿನ ನಾಯಕರು ಮುಂದಿನ ತಲೆಮಾರುಗಳ ಮೇಲೆ ನಂಬಿಕೆ ಇರಿಸಿಕೊಂಡು ಬರೆದಿರುವ ಗ್ರಂಥ. ಆದ ಕಾರಣ ಭಾರತದ ಸಂವಿಧಾನ ಬರೆದವರು ಅವೆಷ್ಟೋ ವಿಚಾರಗಳನ್ನು ಮುಂದಿನ ತಲೆಮಾರುಗಳ ವಿವೇಚನೆಗೆ ಬಿಟ್ಟರು. ಆಪರೇಷನ್ ಕಮಲದಂತಹ ನೀಚತಂತ್ರಗಳನ್ನ ಮುಂದಿನ ತಲೆಮಾರು ರೂಪಿಸೀತು ಅಂತ ಅವರು ಕನಸು ಮನಸ್ಸಿನಲ್ಲೂ ಭಾವಿಸಿರಲಿಲ್ಲ. ಅದಕ್ಕಾಗಿ ರಾಜಕೀಯ ಪಕ್ಷಗಳ ವಿಚಾರದಲ್ಲಿ ಸಂವಿಧಾನ ಏನೂ ಹೇಳಿರಲಿಲ್ಲ. ಪಕ್ಷಾಂತರ ಎಂಬ ವಿಕಟ ನಾಟಕದ ಕೆಲ ವಿಕಾರ ಸಾಧ್ಯತೆಗಳನ್ನು ಅವರು

(೧೩ನೇ ಪುಟಕ್ಕೆ

# ಸಮಕಾಲೀನ ರಾಜಕಾರಣದ ಎರಡು ಸೀಳು ನೋಟಗಳು

**ಭಾರತದ ಇಂದಿನ ರಾಜಕೀಯ ಸಂದರ್ಭ ಆಧುನಿಕ ಭಾರತದ ಇತಿಹಾಸದಲ್ಲಿ ನಿರ್ಣಾಯಕವೆಂದು ತೋರುತ್ತಿರುವ ಇಂದಿನ ರಾಜಕೀಯ ಸಂದರ್ಭ ಹಲವು ಮಹತ್ವದ ಮತ್ತು ಬಹುಮುಖಗಳ ವಿಶ್ಲೇಷಣೆಗಳನ್ನು ಒಳಗೊಂಡ ಕೃತಿಗಳನ್ನು ಸೃಷ್ಟಿಸುತ್ತಿದೆ. ಇವುಗಳ ಓದು ಇಂತಹ ರಾಜಕೀಯ ಸಂದರ್ಭವನ್ನು ಅದರ ಸರಿಯಾದ ಪರಿಪ್ರೇಕ್ಷ್ಯಗಳೊಂದಿಗೆ ಅರಿಯಲು, ನಿರ್ವಹಿಸಲು ನೆರವಾಗಬಹುದೆಂಬ ದೃಷ್ಟಿಯಿಂದ ಪತ್ರಿಕೆ ಇಲ್ಲಿ ಸದ್ಯದ ಇಂತಹ ಎರಡು ಕೃತಿಗಳನ್ನು ಪರಿಚಯಿಸುತ್ತಿದೆ.-ಸಂ.**

## ೧. ಅರುಣ್ ಶೌರಿಯವರ 'ಅನಿತಾ ಗೆಟ್ಸ್ ಬೇಲ್' : ಇಲ್ಲೇ ನರಕ ದರ್ಶನ




ಅರುಣ್ ಶೌರಿಯವರ ದಶಾವತಾರಗಳಲ್ಲಿ ಒಂದು ಅವತಾರದಲ್ಲಿ ಅವರು ಅಂಬೇಡ್ಕರ್ ಅವರನ್ನು ಕ್ರೂರವಾಗಿ ಹೀಯಾಳಿಸಿ ಬರೆದ Worshipping False Gods ಎನ್ನುವ ಕೃತಿಯನ್ನು ಓದಿದ ಮೇಲೆ ಅವರ ಬರಹಗಳ ಬಗ್ಗೆ ನಾನು ತೀವ್ರವಾದ ಅನುಮಾನಗಳನ್ನು ಇಟ್ಟುಕೊಂಡಿದ್ದೇನೆ. ಆದರೆ Anita Gets Bail ಎನ್ನುವ ಈ ಕೃತಿಯನ್ನು ಭಾರತದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ, ಇತ್ತೀಚಿನ ವರ್ಷಗಳಲ್ಲಿ ಅದು ತಲುಪಿರುವ ಅಧೋಗತಿಯ ಬಗ್ಗೆ ಹಾಗೂ ಈ ಅಧೋಗತಿಯಿಂದಾಗಿ ದೇಶದ ಇಂದು ಹಾಗೂ ನಾಳೆಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬ ನಾಗರೀಕರು ಓದಲೇಬೇಕು. ಈ ಕೃತಿ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಇದು ನಿಜವಾ ಎಂದು ಹತ್ತು ಬಾರಿ ಆತಂಕದಿಂದ ಕೇಳುವಂತೆ ಮಾಡುತ್ತದೆ, ಅಂತಿಮವಾಗಿ ಗಾಢವಾದ ವಿಷಾದ ಹಾಗೂ ಅಸಹಾಯಕತೆಯ ಭಾವನೆಗಳನ್ನು ನಮ್ಮಲ್ಲಿ ಹುಟ್ಟಿಸುತ್ತದೆ. ಬರಹದ ಶೈಲಿಯು ಅತ್ಯುತ್ತಮ ಪತ್ರಿಕೋದ್ಯಮ ಹಾಗೂ ಶ್ರೇಷ್ಠ ಪತ್ತೇದಾರಿ ಬರಹದ ಶಕ್ತಿಯನ್ನು ಒಂದುಗೂಡಿಸುವುದರಿಂದ ಇದನ್ನು ಓದಲು ಶುರುಮಾಡಿದವರು ಕೊನೆಯ ಪುಟದವರೆಗೆ ಓದಿಯೇ ಓದುತ್ತಾರೆ.

ಈ ಕೃತಿಯಲ್ಲಿ ಚರ್ಚೆಯಾಗುವ ಕೇಸುಗಳು, ತೀರ್ಪುಗಳು ಹೊಸದೇನಲ್ಲ. ಅವುಗಳ ಬಗ್ಗೆ ಅನೇಕ ಗಂಭೀರ ಕಾಳಜಿಯ ಪತ್ರಿಕೆಗಳು ಆಯಾ ಕಾಲದಲ್ಲಿ ಬರೆದಿವೆ; ನಾಗರೀಕ ಸಮುದಾಯದಲ್ಲಿ ಚರ್ಚೆಯಾಗಿವೆ. ಆದರೆ ಅವೆಲ್ಲವನ್ನು ಒಂದು ಕೃತಿಯಲ್ಲಿ, ಅತ್ಯಂತ ತಾಳ್ಮೆಯಿಂದ ಎಲ್ಲಾ ವಿವರಗಳೊಂದಿಗೆ, ದಾಖಲೆಗಳ ಮೂಲಗಳೊಂದಿಗೆ ವಸ್ತುನಿಷ್ಠವಾಗಿ ವಿಶ್ಲೇಷಿಸುವುದರಿಂದಾಗಿ ಇಡೀ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಅತ್ಯಂತ ಕಳವಳ ಹಾಗೂ ಆಘಾತದ ಪ್ರತಿಕ್ರಿಯೆಯನ್ನು ಈ ಕೃತಿಯು ಹುಟ್ಟಿಸುತ್ತದೆ. ಅಧಿಕಾರಶಾಹಿ ಹಾಗೂ ನ್ಯಾಯಾಂಗದ ಬಗ್ಗೆ ಇಪ್ಪತ್ತನೆಯ ಶತಮಾನದ ಸಂವೇದನೆಯನ್ನೇ ತನ್ನ ರೂಪಕ ಸಾಮರ್ಥ್ಯದಿಂದ ಬುಡದಿಂದ ಅಲ್ಲಾಡಿಸಿದ ಫ್ರಾಂಜ್ ಕಾಫ್ಕಾ ಬರಹವನ್ನು ನೆನಪಿಸುವ ವಾಸ್ತವ ಸಂಗತಿಗಳು ಈ ಕೃತಿಯಲ್ಲಿವೆ.

ಈ ಕೃತಿಯ ಅತ್ಯಂತ ಭೀಕರವಾದ ಭಾಗವನ್ನು ನೋಡೋಣ. ಸೊಹ್ರಾಬುದ್ದೀನ್, ಆತನ ಹೆಂಡತಿ ಹಾಗೂ ಪ್ರಜಾಪತಿ ಎಂಬ ಸಾಕ್ಷಿಯನ್ನು ಗುಜರಾತಿನ ಪೋಲೀಸರು encounterನಲ್ಲಿ ಕೊಲ್ಲುತ್ತಾರೆ. ಇದರಲ್ಲಿ ಮುಖ್ಯ ಆರೋಪಿ ಅಮಿತ್ ಶಾ ಅವರು. ಇಡೀ ಪ್ರಕರಣವನ್ನು ಒಬ್ಬರೇ ನ್ಯಾಯಾಧೀಶರು ನಡೆಸಬೇಕೆಂದು ಹೇಳಿದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನು ಬದಿಗಿಟ್ಟು ನ್ಯಾಯಾಧೀಶರನ್ನು ವರ್ಗಾಯಿಸಲಾಗುತ್ತದೆ. ಆ ಪ್ರಕರಣವು ನ್ಯಾಯಮೂರ್ತಿ ಲೋಯಾ ಅವರ ಕೇಳಿಕೆಗೆ ಹೋಗುತ್ತದೆ. ಆದರೆ ಒಬ್ಬ ರಹಸ್ಯಮಯ ವ್ಯಕ್ತಿಯ ಆಹ್ವಾನದಿಂದ ಅವರು ಒಂದು ಮದುವೆಗೆ ಹೋಗಿ ಅತಿಥಿ ಗೃಹಕ್ಕೆ ವಾಪಸ್ಸು ಬರುತ್ತಾರೆ. ಬೆಳಿಗ್ಗೆ ಅವರಿಗೆ ಹೃದಯಾಘಾತವಾಯಿತೆಂದು ಹೇಳಿ ಅವರನ್ನು ಹತ್ತಿರದಲ್ಲೇ ಇರುವ ಎರಡು ಅತ್ಯುತ್ತಮ ಆಸ್ಪತ್ರೆಗಳ ಬದಲಾಗಿ ಒಬ್ಬ ಮೂಳೆತಜ್ಞರ ಆಸ್ಪತ್ರೆಯಲ್ಲಿ ತೋರಿಸಲಾಗುತ್ತದೆ. ಅವರು ಮರುದಿನ ಬೆಳಿಗ್ಗೆ ನಿಧನರಾದರೆಂದು ಹೇಳಲಾಗುತ್ತದೆ. ವಿಶೇಷವೆಂದರೆ ಅವರ ಸಾವಿನ ಮೊದಲೇ ಅವರು ನಿಧನರಾದರೆಂದು ಪೋಲೀಸ್ ಠಾಣೆಗೆ ಮಾಹಿತಿ ಹೋಗುತ್ತದೆ. ಯಾರೋ ಒಬ್ಬರು ಬಹು ದೂರದಲ್ಲಿರುವ ಲೋಯಾ ಅವರ ಸಂಬಂಧಿಗಳಿಗೆ ನಿಧನದ ಮಾಹಿತಿ ಕೊಡುತ್ತಾರೆ. ತರಾತುರಿಯಲ್ಲಿ ಶವಪರೀಕ್ಷೆ ಮಾಡಲಾಯಿತು ಎಂದು ಹೇಳಲಾಗುತ್ತದೆ. ಮುಂದೆ ನಡೆದ ತನಿಖೆ/ವರದಿಗಳಲ್ಲಿ ಈ ಶವಪರೀಕ್ಷೆಯ ವರದಿಯ ದಿನಾಂಕ ಹಿಂದಿನ ದಿನಾಂಕವಾಗಿರುತ್ತದೆ. ಲೋಯಾ ಅವರ ಸಹೋದರಿ (ಆಕೆ ವೈದ್ಯೆ) ಅವರ ಕತ್ತಿನ ಹಿಂಭಾಗದಲ್ಲಿ ತೀವ್ರ ಗಾಯದ ಕುರುಹು ಹಾಗೂ ಅವರ ಬಟ್ಟೆಗಳು ರಕ್ತಸಿಕ್ತವಾಗಿದ್ದನ್ನು ದೃಢೀಕರಿಸುತ್ತಾರೆ. ಮುಂದಿನ ದಿನಗಳಲ್ಲಿ ಆಪಾದಿತರಾದ ಅಮಿತ್ ಶಾ ಒಂದು ಸಾರಿಯೂ ನ್ಯಾಯಾಲಯಕ್ಕೆ ಹಾಜರಾಗದೆ ಆರೋಪದಿಂದ ವಿಮುಕ್ತರಾಗುತ್ತಾರೆ! ಈ ಅಧ್ಯಾಯದಲ್ಲಿರುವ ಕರಾರುವಾಕ್ಕು ದಾಖಲೆಗಳಿಂದ ನ್ಯಾಯಮೂರ್ತಿ ಲೋಯಾ ಅವರ ಸಾವು ಕೊಲೆಯೆನ್ನುವುದರ ಬಗ್ಗೆ ಯಾರಿಗೂ ತಿಳಿಯದೇ ಇರಲಾರದು. ಹೀಗೆ ಒಬ್ಬ ನ್ಯಾಯಮೂರ್ತಿಯ ಸಂಶಯಾಸ್ಪದ ಸಾವಿನ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಏನು ಮಾಡುತ್ತದೆ? ಏನೂ ಇಲ್ಲ! ಅಮಿತ್ ಶಾ ಖುಲಾಸೆಯಾಗುತ್ತಾರೆ.



ಈ ಕೃತಿಯ ಮೊದಲ ಭಾಗದಲ್ಲಿ ಬರುವ ಇಂಥ ಪ್ರಕರಣಗಳು, ಸಂಬಂಧಪಟ್ಟ ದಾಖಲೆಗಳು, ನೀಡಲಾದ ತೀರ್ಪಿನ ಭಾಗಗಳು– ಇವನ್ನೆಲ್ಲ ನೋಡಿದರೆ ಯಾರಿಗಾದರೂ ಭಯವುಂಟಾಗುತ್ತದೆ. ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರು ತಮ್ಮ ಆದಾಯವನ್ನು ಮೀರಿದ ಅಕ್ರಮ ಆಸ್ತಿಯನ್ನು ಹೊಂದಿದ್ದಾರೆ ಎನ್ನುವ ಪ್ರಕರಣವನ್ನು ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ವಹಿಸಿ ಕೊಡಲಾಗುತ್ತದೆ. ಕೆಳಗಿನ ನ್ಯಾಯಾಲಯದಲ್ಲಿ ನ್ಯಾಯಮೂರ್ತಿ ದಕೂನ್ಹಾ ಅವರು ನೀಡಿದ್ದ ಸಾಕ್ಷ್ಯಾಧಾರಿತವಾದ ಪರಿಪೂರ್ಣಷ್ಟ ತೀರ್ಪನ್ನು ನ್ಯಾಯಮೂರ್ತಿ ಕುಮಾರಸ್ವಾಮಿಯವರು ತಳ್ಳಿ ಹಾಕಿ ಜಯಲಲಿತಾ ಅವರನ್ನು ಆರೋಪದಿಂದ ಬಿಡುಗಡೆ ಮಾಡಿದ್ದು ಆಧುನಿಕ ಭಾರತದ ನ್ಯಾಯಾಂಗದ ಅತ್ಯಂತ ಕರಾಳ ವಿದ್ಯಮಾನವೆಂಬುದನ್ನು ಅರಣ್ ಶೌರಿ ಕರಾರುವಾಕ್ಕಾಗಿ ತೋರಿಸಿಕೊಡುತ್ತಾರೆ.

ಈ ಕೃತಿಯಲ್ಲಿ ಮೂರು ಅಂಶಗಳು ಪ್ರಧಾನವಾಗಿವೆ. ಒಂದು ನ್ಯಾಯಾಂಗ ವ್ಯವಸ್ಥೆಯಲ್ಲಿ ಇರುವ ಅಪಾರ ವಿಳಂಬ, ವಿನಾಕಾರಣ ಪುನರ್‌ಪರಿಶೀಲನೆ, ಅನಾವಶ್ಯಕವೂ, ಮೂರ್ಖತನದಿಂದ ಕೂಡಿದ ಸುದೀರ್ಘ ತೀರ್ಪುಗಳು, ಇವೆಲ್ಲವನ್ನು ಮೀರಿದ ಭ್ರಷ್ಟಾಚಾರ ಇವು ಪ್ರಮುಖವಾಗಿದೆ. ಸ್ವತಃ CBI ಬಳಿ ಒಬ್ಬ ನಿವೃತ್ತ ನ್ಯಾಯಾಧೀಶರು ದುಡ್ಡನ್ನು ಪಡೆದು ನ್ಯಾಯಾಲಯ ತೀರ್ಪನ್ನು ಪ್ರಭಾವಿಸಿದ ಎಲ್ಲಾ ದಾಖಲೆಗಳಿದ್ದರೂ ಸರ್ವೋಚ್ಚ ನ್ಯಾಯಾಲಯ ಏನನ್ನೂ ಮಾಡುವುದಿಲ್ಲ. ಈ ಕೃತಿಯ ಒಂದು ಬಹುಮುಖ್ಯ ಭಾಗವು ನಮ್ಮ ನ್ಯಾಯಾಂಗದ ತೀರ್ಪಿನ ಬರಹ ಹಾಗೂ ಚಿಂತನೆಯ ಅಸಂಗತತೆಯ ಬಗ್ಗೆ ಇದೆ. ಒಂದು ಶಾಲೆಯ ಆವರಣದಲ್ಲಿ ಅನೇಕ ನವಿಲುಗಳು ಸತ್ತು ಹೋಗಿದ್ದರ ಬಗ್ಗೆ ತೀರ್ಪು ಬರೆಯುವ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಗಂಡು ನವಿಲು ಬ್ರಹ್ಮಚಾರಿಯಾಗಿರುವುದರಿಂದ ಅದರ ಕಣ್ಣೀರುಗಳ ಹನಿಯನ್ನು ಸೇವಿಸಿ ಹೆಣ್ಣು ನವಿಲು ಗರ್ಭಧರಿಸುತ್ತದೆ ಎಂದು ಬರೆಯುತ್ತಾರೆ! ಗೋಶಾಲೆಯ ಅವ್ಯವಸ್ಥೆಯಿಂದ ನೂರಾರು ಗೋವುಗಳು ಸತ್ತಿದ್ದರ ಬಗ್ಗೆ ತೀರ್ಪು ಬರೆಯುವ ನ್ಯಾಯಾಧೀಶರು ಗೋಮೂತ್ರ ಹಾಗೂ ಸಗಣಿಯ ಬಗ್ಗೆ ಸುದೀರ್ಘ ಪ್ರಬಂಧವನ್ನು ಬರೆಯುತ್ತಾರೆ.

ಈ ಕೃತಿ ಎತ್ತುವ ಪ್ರಶ್ನೆಗಳಿಂದ ನಾನಂತೂ ತಳಮಳದಲ್ಲಿದ್ದೇನೆ. ಭಾರತದ ನ್ಯಾಯಾಂಗ ವ್ಯವಸ್ಥೆಯು ವಿಳಂಬ, ಅನಾವಶ್ಯಕ ಕ್ರಮಗಳು, ಮತ್ತು ನ್ಯಾಯಾಧೀಶರ ವೈಯಕ್ತಿಕ ನಿಲುವುಗಳಿಂದಾಗಿ ಇಂಥ ದುರ್ಗಮ ಸ್ಥಿತಿಯಲ್ಲಿದ್ದರೆ ನಮ್ಮ ರಕ್ಷಣೆಗೆ ಇರುವವರು ಯಾರು? ಈಗ ನಾನು ಕೃತಿಯ ಶೀರ್ಷಿಕೆಗೆ ಬರುತ್ತೇನೆ. ಒಂದು ಸೈಟನ್ನು ಕೊಂಡುಕೊಂಡು ಶೌರಿ ದಂಪತಿಗಳಿಗೆ ಅದನ್ನು ಮಾರಿಬಿಡುವ ಸನ್ನಿವೇಶ ಬರುತ್ತದೆ. ಆದರೆ ಅನೇಕ ವರ್ಷಗಳ ನಂತರ ಈ ಸೈಟನ್ನು ತಾವು ಪರಿಸರ ನಿಯಮಗಳನ್ನು ಮೀರಿ ಮನೆಕಟ್ಟಲು ಉಪಯೋಗಿಸಿದ್ದಾರೆಂದು ಶೌರಿಯವರ ಶ್ರೀಮತಿ ಅನಿತಾರಿಗೆ ಬೇಲ್ ಇಲ್ಲದ ನೋಟಿಸ್ ಬರುತ್ತದೆ! ಅಷ್ಟರಲ್ಲಿ ಅನಿತಾ Alziemer's ಖಾಯಿಲೆಯಿಂದಾಗಿ ನಡೆಯಲೂ ಅಸಮರ್ಥರಾಗಿರುತ್ತಾರೆ. ಆದರೆ ನ್ಯಾಯಾಂಗದ ಕುರುಡುತನದಿಂದಾಗಿ ಅವರನ್ನು ಹೊತ್ತುಕೊಂಡು ನ್ಯಾಯಾಲಯಕ್ಕೆ ತರಬೇಕಾಗುತ್ತದೆ. ಸುದೀರ್ಘ ಕಾಲದ ನಂತರ ಅವರಿಗೆ bail ದೊರೆಯುತ್ತದೆ. ಇಡೀ ಪ್ರಕರಣವನ್ನು ಕುರಿತು ಉಪನ್ಯಾಸ ನೀಡಿದ ಅರುಣ್ ಶೌರಿಯವರಿಗೆ ಪ್ರೇಕ್ಷಕರಲ್ಲಿದ್ದ ಒಬ್ಬ ನ್ಯಾಯಾಧೀಶರು ಕೇಳುತ್ತಾರೆ. "ನಿಮಗೆ ಹೀಗಾದರೆ ಸಾಮಾನ್ಯ ಮನುಷ್ಯನ ಗತಿಯೇನು?"

ಈ ಕೃತಿಯು ಪ್ರಕಟವಾದ ಮೇಲೆ ಭಾರತೀಯ ನ್ಯಾಯಾಂಗದ ನಡೆಯನ್ನು ಸೂಕ್ಷ್ಮವಾಗಿ ಗಮನಿಸುತ್ತ ಬಂದಿರುವ ನನ್ನ ಉತ್ತರವೆಂದರೆ ನಮ್ಮೆಲ್ಲರಿಗೆ ಕಾದಿರುವ ಗತಿಯೆಂದರೆ ಈ ಲೋಕದಲ್ಲಿಯೇ ನರಕ.

Harper Collins Publishers, India ಒಟ್ಟು ೩೦೫ ಪುಟಗಳ ಈ ಪುಸ್ತಕದ ಬೆಲೆ: ರೂ., ೩೩೪. ೯೫/–

–ರಾಜೇಂದ್ರ ಚೆನ್ನಿ

# ೨. ವಿನಯ ಸೀತಾಪತಿಯವರ 'ಜುಗಲ್‌ಬಂದಿ' : ಸಂಘ ಪರಿವಾರದ ಸಂಘಟನಾ ಸೂಕ್ಷ್ಮಗಳು




'ಜುಗಲ್ಬಂ/ದಿ: ಬಿಜೆಪಿ ಬಿಫೋರ್ ಮಘದಿ' ಎನ್ನುವ ವಿನಂಯ್ ಸೀತಾಪತಿಂಯುವರ ಹೊಸ ಪುಸ್ತಕ ಬಿಡುಗಡೆಯಾಗುತ್ತಿದ್ದಂತೆಯೇಸಾಕಷ್ಟು ಸುದ್ದಿ ಮಾಡಿದೆ.ಈ ಪುಸ್ತಕ ಹಿಂದುತ್ವ ರಾಜಕೀಯದ ಸುಮಾರು ಒಂದು ನೂರುವರ್ಷಗಳ ಹಿನ್ನೆಲೆಯಲ್ಲಿ ಭಾಜಪ ಮತ್ತು ಅದರಲ್ಲೂ ಮುಖ್ಯವಾಗಿ ವಾಜಪೇಯಿ–ಅದ್ವಾನಿಗಳ ಜೋಡಿಯನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವ ಯತ್ನವನ್ನು ಅವರು ಮಾಡುತ್ತದೆ. ಒಂದು ರಾಜಕೀಯ ಪಕ್ಷದ ಸಮಕಾಲೀನ ಚರಿತ್ರೆಯನ್ನು ಬರೆಯುವುದು ಸರಳವಲ್ಲ. ದಾಖಲೆಯ ಜೊತೆಜೊತೆಗೇ ಅದರ ವಿಶ್ಲೇಷಣೆ ಮತ್ತು ಒಳನೋಟಗಳೂ ಸೇರಿಹೋಗುತ್ತದೆ. ಹೀಗಾಗಿ ಇಂಥ ಪುಸ್ತಕಗಳು ಒಂದು ನೆಲೆಯಲ್ಲಿ ಚರಿತ್ರಾತ್ಮಕವಾಗಿರುತ್ತಲೇ ರಾಜಕೀಯ ಸಿದ್ಧಾಂತ ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆಯ ಕಲಸುಮೇಲೋಗರವಾಗಿರುತ್ತದೆ.

ಆರ್‌ಎಸೆಎಸ್ ಮತ್ತು ಭಾಜಪದ ಹಿಂದೂ ಕೇಂದ್ರಿತ ರಾಜಕೀಯ ೧೯೨೫ರಲ್ಲಿ ಸ್ಥಾಪಿತವಾದ ಆರ್‌ಎಸೆಸ್‌ನಿಂದ ಪ್ರಾರಂಭವಾಗಿ ಸುಮಾರು ನೂರು ವರ್ಷಗಳ ಕಾಲ ಯೋಜನಾಬದ್ಧ ರೀತಿಯಲ್ಲಿ ಮುಂದುವರೆದು ಸಮಕಾಲೀನ ಪರಿಸ್ಥಿತಿಯನ್ನು ತಲುಪಿದೆ. ಇದರಲ್ಲಿ ಹಿಂದೂ ಪ್ರಾಥಮಿಕತೆಯ ಏಕೋದ್ದೇಶ ಮತ್ತು ಅಖಂಡ ಭಾರತವನ್ನುಸ್ಥಾಪಿಸುವ ಕನಸಿನ ಉಟೋಪಿಯಾ ಇದೆ. ಅದನ್ನು ಸಾಧಿಸಲು ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳು ಯೋಜನಾಬದ್ಧವಾಗಿ ಕೆಲಸ ಮಾಡುತ್ತಾ ತಮ್ಮಲ್ಲಿನ ಅಂತರ್ವಿರೋಧವನ್ನು ನಿಭಾಯಿಸುತ್ತ ಮುಂದುವರೆದಿವೆ. ಈಗಿನ ಸಾಫಲ್ಯವನ್ನು ನೂರು ವರ್ಷಗಳ ಚರಿತ್ರೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆಂದು ಸೀತಾಪತಿ ವಾದಿಸುತ್ತಾ ಭಾಜಪ ಮತ್ತು ಅದರ ನಿರ್ಮಿತಿಯನ್ನು ಅರ್ಥ ಮಾಡಿಕೊಳ್ಳಲು ಒಂದು ಪ್ರವೇಶಿಕೆಯನ್ನುಈ ಪುಸ್ತಕದ ಮೂಲಕ ಕೊಡುತ್ತಾರೆ.

ಹಿಂದುತ್ವವನ್ನು ಹಿಡಿದು ನಡೆದ ಈ ಸಂಸ್ಥಾಜಾಲಕ್ಕೂ ಮಿಕ್ಕ ರಾಜಕೀಯ ಪಕ್ಷಗಳಿಗೂ ಇರುವ ಮೂಲಭೂತ ಅಂತರವನ್ನು ನಾವು ಸೀತಾಪತಿಂಯುವರ ವಾದದಿಂದಕಂಡುಕೊಳ್ಳಬಹುದ. ಮಿಕ್ಕ ಎಲ್ಲ ಪಕ್ಷಗಳಲ್ಲೂನಾಯಕತ್ವದ ಮಾತು ಬಂದಾಗ ಒಂದೇ ಧೃವ ಕಾಣಿಸುತ್ತದೆ. ಆದರೆ ಅಖಂಡ ಭಾರತದ ಕನಸು ಹೊತ್ತು ನಡೆದಿರುವ ಈ ಹಿಂದೂ ಅವಿಭಾಜಿತ ಸಂಸಾರದಲ್ಲಿ ಸತತವಾಗಿ ನಮಗೆ ಎರಡು ಎಳೆಗಳು ಕಾಣುತ್ತವೆ. ಬೌದ್ಧಿಕವಾಗಿ ಆಲೋಚಿಸುವ ಆರ್‌ಎಸ್‌ಎಸ್, ರಾಜಕೀಯದಲ್ಲಿ ಇಳಿದಿರುವ ಜನಸಂಘಮ ಆನಂತರ ಬಿಜೆಪಿ. ಬೌದ್ಧಿಕವಾಗಿ ಯೋಚಿಸುವ ಶ್ಯಾಮಾ ಪ್ರಸಾದ ಮುಖರ್ಜಿ, ರಾಜಕೀಯವಾಗಿ ವಾಕ್ಚಾತುರ್ಯ ತೋರುವ ದೀನ್ ದಯಾಳ್ ಉಪಾಧ್ಯಾಯ. ನಂತರ ಪಕ್ಷದ ಸಂಘಟನಕಾರ ಅದ್ವಾನಿ ಮತ್ತು ಸಂಸತ್ತಿನ ಪರಂಪರೆಯ ವಾಕ್ಚತುರ ವಾಜಪೇಯಿ. ಮತ್ತು ಈಗ ಕಾಣುತ್ತಿರುವ ಮೋದಿ–ಶಾ ಜೋಡಿ. ಭಿನ್ನ ರೀತಿಯ ಪ್ರತಿಭೆಗಳಿರುವ, ಭಿನ್ನಾಭಿಪ್ರಾಯಗಳಲ್ಲಿ ಇರಬಹುದಾದ ಅಂತರ್ವಿರೋಧ ಮತ್ತು ಅದನ್ನು ನಿಭಾಯಿಸುವ 'ಸಮನ್ವಯಮಾರ್ಗವು ನಿಜಕ್ಕೂ ಆಸಕ್ತಿಕರವಾದದ್ದು..ಪಕ್ಷದ ಒಳನಿರ್ಮಾಣದ ನಿರ್ವಹಣೆಗೂ, ಹೊರಗಿನ ಸಂಸತ್ತು ಮತ್ತು ರಾಜಕೀಯ ಪರಿಸ್ಥಿತಿಯ ನಿರ್ವಹಣೆಗೂ ಇರಬೇಕಾದ ಭಿನ್ನ ಪ್ರತಿಭೆಗಳು. ಸಿದ್ಧಾಂತವನ್ನೂ ರಾಜಕೀಯವನ್ನೂ ನಿಭಾಯಿಸುವಲ್ಲಿ ಮಾಡಿಕೊಳ್ಳಬೇಕಾದ ರಾಜಿ ಹಾಗೂ ಒಬ್ಬರ ವೈಯಕ್ತಿಕ ನಿಲುವಿಗೆ ವಿರುದ್ಧವಾಗಿ ಪಕ್ಷದ ಒಟ್ಟಾರೆ ನಿಲುವಿದ್ದಾಗ ಪಕ್ಷ/ಪರಿವಾರ ಮುರಿದು ಛಿದ್ರವಾಗದಂತೆ ನೋಡಿಕೊಂಡು (ಸಂಘ ಪರಿವಾರದ) ವಿಸ್ತೃತ ಉದ್ದೇಶವನ್ನು ಸಾಧಿಸಲು ಒಗ್ಗಟ್ಟಿನಿಂದ ಮುಂದುವರೆಯುವ ಅಂಶಗಳನ್ನು ಸೀತಾಪತಿ ಸೂಕ್ಷ್ಮವಾಗಿ ಗುರುತಿಸುತ್ತಾರೆ.

ಪುಸ್ತಕದಲ್ಲಿ ಎಲ್ಲವನ್ನೂ ಬಂಧಿಸಿಡುವ ಅಂಟು –ಫೆವಿಕಾಲ್ ಮತ್ತು 'ಗ್ಲೂ' ಎನ್ನುವಭಿತ್ತಿಯನ್ನು ಸೀತಾಪತಿ ಧಾರಾಳವಾಗಿ ಬಳಸಿದ್ದಾರೆ. ಅ ಅಂಟಿನ ಸಂರಚನೆಯಲ್ಲಿ ಪಕ್ಷ–ಸಿದ್ಧಾಂತದ ಸಲುವಾಗಿ ವಾಜಪೇಯಿ–ಅದ್ವಾನಿ ಇಬ್ಬರೂ ಅನೇಕ ಬಾರಿ ತಮ್ಮ ವೈಯಕ್ತಿಕ ಮಹತ್ವಾಂಕಾಂಕ್ಷೆಗಳನ್ನು ಬದಿಗಿಟ್ಟು ಸಿದ್ಧಾಂತಕ್ಕಾಗಿ ಪಕ್ಷಕ್ಕಾಗಿ ಕೆಲಸ ಮಾಡಿದ ಘಟನೆಗಳನ್ನು ಲೇಖಕರು ದಾಖಲಿಸುತ್ತಾರೆ. ವಾಜಪೇಯಿ ಅದ್ವಾನಿಗಿಂತ ಹಿರಿಯರಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಅದ್ವಾನಿಯವರ ನಾಯಕತ್ವವನ್ನು ಒಪ್ಪಿ ಅವರ ವಿಚಾರಗಳೊಂದಿಗೆ ರಾಜಿಯಾಗಿದ್ದುನ್ನು ದಾಖಲಿಸುತ್ತಾರೆ. ಆದರೆ ಈ ಪುಸ್ತಕ ಕೇಂದ್ರ ವಾಜಪೇಯಿ–ಅದ್ವಾನಿಗಳ ಕಾಲವನ್ನು ದಾಖಲಿಸುವುದಾಗಿರುವುದರಿಂದ ಇದು ಆರ್‌ಎಸ್‌ಎಸ್–ಭಾಜಪದ ಸಂರಚನೆಯ ಮೂಲ ಗುಣವೋ, ಅಥವಾ ಅವರಿಬ್ಬರ ವೈಯಕ್ತಿಕ ಕಾರ್ಯಶೈಲಿಯ ಫಲವೋ ಸ್ಪಷ್ಟವಾಗಿ ತಿಳಿಯುವುದಿಲ್ಲ.

ಆರ್‌ಎಸ್‌ಎಸ್‌ಗೆ ಸಮರ್ಪಿತರಾಗಿ ಪೂರ್ಣಾವಧಿ ಕೆಲಸ ಮಾಡುವವರು ಮದುವೆಯಾಗಬಾರದು ಎನ್ನುವ ನಿಯಮವಿರುವುದರಿಂದ ಸ್ವಜನಪಕ್ಷಪಾತ ಮತ್ತು ವಂಶ ಪಾರಂಪರ್ಯವನ್ನು ದೂರವಿಡಲು ಸಾಧ್ಯವಾಗಿದೆ ಎಂದು ಸೀತಾಪತಿವಾದಿಸುತ್ತಾರೆ. ಇದು ಆಕರ್ಷಕವಾಗಿ ಕಂಡರೂ ಆರ್‌ಎಸ್‌ಎಸ್‌ಗೆ ಅಬ್ವಯಿಸುವ ಈ ವಾದ ಭಾಜಪಕ್ಕೆ ಅನ್ವಯವಾಗುತ್ತದೆಯೇ ಎನ್ನುವದನ್ನು ಪ್ರಶ್ನಿಸಬೇಕು. ನಿಜಕ್ಕೂ ಸೀತಾಪತಿಯವರು ಕೊಡುವ ಅನೇಕ ತರ್ಕಗಳು ಆರ್‌ಎಸ್‌ಎಸ್‌ಗೆ ಅನ್ವಯಿಸುವಷ್ಟೇ ಕಟ್ಟುನಿಟ್ಟಾಗಿ ಭಾಜಪಕ್ಕೆ ಅನ್ವಯಿಸುವುದಿಲ್ಲ. ಆದರೆ ವಿಶ್ಲೇಷಣೆಯ ಮಟ್ಟಿಗೆ ಸೀತಾಪತಿಯವರು ಎರಡೂ ಸಂಸ್ಥೆಗಳನ್ನು ಒಂದೇ ಸಂಸಾರ ಮತ್ತು ವಿಚಾರ ಧಾರೆಯ ಭಾಗವಾಗಿ ನೋಡುತ್ತಾರೆ. ಆದರೆ ಹಾಗೆ ನೋಡುವುದರಲ್ಲಿ ತೊಂದರೆಯಿದೆ. ಸೀತಾಪತಿಯವರೇ ಹೇಳಿದಂತೆ ಭಾಜಪ ಅನೇಕ ಬಾರಿ ಆರ್‌ಎಸ್‌ಎಸ್‌ನ ವಿಚಾರಗಳನ್ನು ಪರಿಗಣಿಸದೇ ಭಿನ್ನ ದಾರಿಯನ್ನು ಹಿಡಿದಿದೆ. ಕನಿಷ್ಟ ಒಂದು ಚುನಾವಣೆಯ ಸಂದರ್ಭದಲ್ಲಂತೂ ಆರ್‌ಎಸ್‌ಎಸ್ ಭಾಜಪಕ್ಕೆ ಸಮರ್ಥನೆ ನೀಡದೇ ಆ ಸಂದರ್ಭದಲ್ಲಿ ಹಿಂದೂ ಪರ ನಿಲುವು ತೆಗೆದುಕೊಳ್ಳುತ್ತಿದ್ದ (ಅಯೋಧ್ಯೆಯ ರಾಮಮಂದಿರದ ಬೀಗ ತೆರೆದು ಪೂಜೆಗೆ ಅನುವು ಮಾಡಿಕೊಟ್ಟ) ಕಾಂಗ್ರೆಸ್ ಪರವಾಗಿ ಕೆಲಸಮಾಡಿದ ಉದಾಹರಣೆಯಿದೆ. ಹೀಗಾಗಿ ನಮಗೆ ಆರ್‌ಎಸ್‌ನಲ್ಲಿರಬಹುದಾದ ಹಿಂದೂ ಪ್ರಾಥಮಿಕತೆಯ ಏಕೋದ್ದೇಶ ಭಾಜಪದಲ್ಲಿ (ವಾಜಪೇಯಿ ಅದ್ವಾನಿಗಳ ಯುಗದಲ್ಲಿ) ಹೇಗೆ ಅಂತರ್ಗತವಾಗಿದೆಯೇ ಎನ್ನುವ ಪ್ರಶ್ನೆ ಉಳಿಯುತ್ತದೆ.



ಹೀಗಾಗಿಯೇ ಆರ್‌ಎಸ್‌ಎಸ್‌ಗೆ ಅನ್ವಯಿಸುವ ಶಿಸ್ತು, ಸಿದ್ಧಾಂತ, ತಾಲೀಮು ಮತ್ತು ಬದ್ಧತೆ ಭಾಜಪಕ್ಕೆ ವರ್ಗಾವಣೆಯಾಗಿದೆಯೇ ಎನ್ನುವ ಪ್ರಶ್ನೆಯಿದೆ. ಸಿದ್ಧಾಂತ ಬದ್ಧತೆಯಿರುವುದರಿಂದ ಪಕ್ಷದಲಿ ್ಲಭಿನ್ನಾಭಿಪ್ರಾಯವಿದ್ದರೂ ಅದನ್ನು ನುಂಗಿ ಒಗ್ಗಟ್ಟಾಗಿರುವುದರಿಂದ ಪಕ್ಷ ಒಡೆಯುವುದಿಲ್ಲವೆಂದು ಸೀತಾಪಾತಿ ವಾದಿಸುತ್ತಾರೆ. ಪಕ್ಷದ ಚರಿತ್ರೆಯಲ್ಲಿ ಒಮ್ಮೆ ಮಾತ್ರ ಒಡಕಾಯಿತೆಂದು ಹೇಳುತ್ತಾರೆ. ಪಕ್ಷ ಹೆಚ್ಚು ಒಡೆದಿಲ್ಲ ಎನ್ನುವುದು ನಿಜವಾದರೂ, ಅವರು ಉದಾಹರಿಸುವ ಗುಜರಾತಿನ ಶಂಕರ್‌ಸಿಂಗ್ ವಾಘೇಲಾರಿಂದ ಆದ ಒಡಕು ಒಂದೇ ಅಲ್ಲ. ಕಲ್ಯಾಣ್ ಸಿಂಗ್ ಕೂಡಾ ಪಕ್ಷವನ್ನು ಒಡೆದು ತೊರೆದಿದ್ದರು. ಯಡ್ಯೂರಪ್ಪನವರು ಕೆಜೆಪಿ ಸ್ಥಾಪಿಸಿದ್ದನ್ನೂ, ಹಾಗೂ ೭೫ರ ವಯೋಮಾನದ ಅವರು ಪಕ್ಷದ ನಿಯಮವನ್ನು ಉಲ್ಲಂಘಿಸಿ ಅಧಿಕಾರದಲ್ಲಿ ಮುಂದುವರೆಯುತ್ತಿರುವುದನ್ನು ಕಂಡಾಗ ಸೀತಾಪತಿಯವರ 'ವಾದದಲ್ಲಿರುವ ತೊಂದರೆಗಳು ಕಾಣಿಸುತ್ತವೆ.

ಈಗ ಪಕ್ಷವನ್ನು ನಡೆಸುತ್ತಿರುವ ಮೋದಿ–ಶಾ ಜೋಡಿ ಈ ಇಡೀ ಚರಿತ್ರೆಯನ್ನು ತಲೆಕೆಳಗು ಮಾಡಿದೆ. ಈ ಜೋಡಿ ನೂರು ವರ್ಷಗಳ ಹಿಂದುತ್ವದ ವಿಚಾರದ ಅಡಿಪಾಯದ ಮೇಲೆ ನಿಂತಿದೆ ಎನ್ನುವುದನ್ನು ಒಪ್ಪಬಹುದಾದರೂ, ಅದರ ನಿರ್ವಹಣಾ ವಿಧಾನ ಸೀತಾಪತಿ ವಿವರಿಸಿದ ನೂರು ವರ್ಷಗಳ ಚರಿತ್ರೆಗಿಂತ ಬಹಳವೇ ಭಿನ್ನವಾಗಿದೆ. ಇಲ್ಲಿ ತಮ್ಮ ವಿಚಾರ, ಅದರ ಹಿಂದಿರಬಹುದಾದ ಸಿದ್ಧಾಂತ ಹಾಗೂ ರಾಜಕೀಯದ ಅಂತರ್ವಿರೋಧವನ್ನು ನಿಭಾಯಿಸುವ ಯಾವುದೇ ಯತ್ನವನ್ನು ಸದರಿ ನಾಯಕತ್ವ ಮಾಡುತ್ತಿಲ್ಲ. ಇದು ಬಹುಮತ ಪಡೆದಿರುವದರಿಂದ ಆಗಿರಬಹುದಾದ ಬದಲಾವಣೆಯೇ? ಈ ರೀತಿಯ ಬಹುಮತವಿದ್ದಿದ್ದರೆ ವಾಜಪೇಯಿ–ಅದ್ವಾನಿಗಳ ಜೋಡಿಯೂಈ ರೀತಿಯ ರಾಜಕೀಯವನ್ನು ಕೈಗೊಳ್ಳುತ್ತಿದ್ದರೆ? ಈ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಈ ಜೋಡಿ ಹಿಂದುತ್ವದ ಮೂಲ ಕಾರ್ಯಸೂಚಿಯನ್ನುಮುಂದುವರೆಸಲು ತೋರುತ್ತಿರುವ ಅವಸರ ಮತ್ತು ಅದಕ್ಕಾಗಿ ಸಂಖ್ಯಾಬಲವನ್ನು ಸೇರಿಸಿಕೊಳ್ಳುವಲ್ಲಿ ಮಾಡಿಕೊಳ್ಳುತ್ತಿರುವ ರಾಜಿ ಎರಡೂ ಹಿಂದುತ್ವ ವಿಚಾರಧಾರೆಯನ್ನು ನಂಬುವವರಲ್ಲಿ ಆತಂಕವನ್ನುಂಟು ಮಾಡಬೇಕು. ಈಗಿನ ಜೋಡಿ ಅಧಿಕಾರ ಕಳೆದುಕೊಂಡ ದಿನ ಸಿದ್ಧಾಂತವಲ್ಲದೇ ಅಧಿಕಾರಕ್ಕಾಗಿ ಆ ಪಕ್ಷವನ್ನು ಸೇರಿ ಸಮರ್ಥಿಸುತ್ತಿರುವ ತಿಲಕಧಾರಿಗಳು ಯಾವ ದಿಕ್ಕಿನಲ್ಲಿ ತಮ್ಮ ಗಾಡಿಯನ್ನು ಓಡಿಸಬಹುದು ಎನ್ನುವ ಯಕ್ಷ ಪ್ರಶ್ನೆಯನ್ನು ಸೀತಾಪತಿಯವರೂ, ಮತ್ಯಾರೂ ಕೇಳುತ್ತಿಲ್ಲ. ಈ ಜೋಡಿ ತಕ್ಷಣಕ್ಕೆ ಅಧಿಕಾರ ಕಳೆದುಕೊಳ್ಳದಿರಬಹುದು. ಆದರೆ ಸದರಿ ಜೋಡಿ ಆರ್‌ಎಸ್‌ಎಸ್ ಕಟ್ಟಿ ತಂದ ತತ್ವಸಿದ್ಧಾಂತದ ಪ್ರಾಥಮಿಕತೆಯ ನಿರ್ಮಿತಿಯನ್ನು ತಮ್ಮ ಅವಸರದಿಂದ ಮುರಿಯುತ್ತಿದ್ದಾರೆಯೇ?.ಗೊತ್ತಿಲ್ಲ.

ಸೀತಾಪತಿಯವರ ವಾದದಲ್ಲಿ ಅನೇಕ ಸಮಸ್ಯೆಗಳಿದ್ದರೂ ವಾಜಪೇಯಿ–ಅದ್ವಾನಿಗಳ ಬಗೆಗಿನ ಒಳನೋಟ ಮತ್ತು ಹಿಂದುತ್ವ ರ ಾಜಕೀಯದ ಬಗ್ಗೆ ಪ್ರಾಮಾಣಿಕವಾಗಿ ವಿಶ್ಲೇಷಣೆ ಮಾಡಲು ಈ ಪುಸ್ತಕ ಒಂದು ಪ್ರವೇಶಿಕೆ ಅನ್ನುವುದರಲ್ಲಿ ಅನುಮಾನವಿಲ್ಲ

ಪ್ರಕಟಿಸಿರುವ ಒಟ್ಟು ೪೭೯ ಪುಟಗಳ ಈ ಪುಸ್ತಕದ ಬೆಲೆ. ರೂ. ೭೯೯/–

**–ಎಂ.ಎಸ್. ಶ್ರೀರಾಮ್.**

ಜನವರಿ, ೩೧, ಬೇಂದ್ರೆ ಜನ್ಮದಿನ

# ದ. ರಾ. ಬೇಂದ್ರೆ: ಕೆಲ ಸವಿ ನೆನಪುಗಳು

–ಹಂಪನಾ



(ಚಿತ್ರ: ಹಜ್ರತ್ ಅಲಿ)

ಬೇಂದ್ರೆಯವರು ಸ್ಫೂರ್ತಿ ಪ್ರತಿಭೆಗಳು ಮಿಂಚಿನ ಗೊಂಚಲು. ಅವರು ಭಾಷಣಕ್ಕೆ ನಿಂತರೆ 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸ.' ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗದಲ್ಲಿ "ಕನ್ನಡ ಸಾಹಿತ್ಯದ ನಾಯಕ ರತ್ನಗಳು" ಕುರಿತ ಉಪನ್ಯಾಸ ಏರ್ಪಾಟಾಗಿತ್ತು . ಕೈಚೀಲದಿಂದ ಸಿದ್ಧಪಡಿಸಿತಂದ ಹಸ್ತಪ್ರತಿಯನ್ನು ಈಚೆಗೆ ತೆಗೆಯುವಾಗ " ಇದು ಹಾವಾಡಿಗ ಬುಟ್ಟಿಯಿಂದ ಹಾವನ್ನು ಹೊರಕ್ಕೆ ಬಿಡವಂತೆ. ಅವನು ಬುಟ್ಟಿ ಮುಚ್ಚಳ ತೆಗೆಯುವ ಹಾಗೆ ಅಭಿನಯಿಸುತ್ತಾನೆ ಅಷ್ಟೆ. ಹಾವನ್ನು ಈಚೆಗೆ ಬಿಡದೆ ಪುಂಗಿ ಊದುತ್ತಾನೆ, ಭಾಷಣ ಮಾಡುತ್ತಿರುತ್ತಾನೆ. ಪ್ರೇಕ್ಷಕರು ಯಾವಾಗ ಹಾವನ್ನು ತೋರಿಸುತ್ತಾನೋ ಅಂತ ಕಾಯ್ತಾ ಇರ್ತಾರೆ. ನಾನು ಈ ಕೈಚೀಲದೊಳಗೆ ಭಾಷಣದ ಪ್ರತಿ ಇಟ್ಟಿದೀನಿ. ಆಮೇಲೆ ತೆಗೀತೀನಿ. ಈಗ ಮೊದಲು ನನ್ನ ಭಾಷಣದ ಪುಂಗಿ ಆಲಿಸ್ರಿ " ಎಂದರು.

ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ನಾಡು ನಲಿಯಿತು.. ದಾವಣಗೆರೆ ಶಾಮನೂರು ಶಿಕ್ಷಣ ಸಂಸ್ಥೆಯ ಆಡಳಿತ ವರ್ಗದವರು ಅರ್ಥಪೂರ್ಣ ಗೌರವನಮನ ಸಮಾರಂಭವನ್ನು ಹಮ್ಮಿದರು. ಬೃಹತ್ ಸನ್ಮಾನ ಕಾರ್ಯಕ್ರಮಕ್ಕೆ ನನ್ನನ್ನು ಅಧ್ಯಕ್ಷನಾಗಲು ಒಪ್ಪಿಸಿದರು. ಸಮಾರಂಭ ಅದ್ದೂರಿಯಾಗಿ ಆರಂಭವಾಯಿತು. 'ರಸವೆ ಜನನ ವಿರಸ ಮರಣ ಸಮರಸವೆ ಜೀವನ' ಊರಿನ ಗಾಯಕಿಯ ಸಿರಿಕಂಠದಲ್ಲಿ ಇನಿದಾಗಿ ನಿನದಿಸಿತು. ಸ್ವಾಗತ ಕಿರು ಪರಿಚಯ ಮುಗಿಸಿ ಕವಿಸಾರ್ವಭೌಮನನ್ನು ಇತೋಪ್ಯತಿಶಯವೆಂಬಂತೆ ಸನ್ಮಾನಿಸಲಾಯಿತು. ಹೂಮಳೆಯಲ್ಲಿ ತೊಯ್ದು ಪರಿಮಳಾಚ್ಛಾದಿತ ಕವಿಯನ್ನು ಕಣ್ತುಂಬಿಕೊಂಡು ಸಭೆ ರಸಪರವಶವಾಯಿತು. ಕವಿವಾಣಿ ಮೊಳಗಿತು . ಬೆರಳುಗಳಲ್ಲಿ ಕಂಗೊಳಿಸುವ ಉಂಗುರದ ಕೈಯನೆತ್ತಿ ಪ್ರತಿಭೆಯ ಲೇಖಣಿಯನ್ನು ಝಳಪಿಸುವಂತೆ ಅಲುಗಾಡಿಸುತ್ತ –" ಜೈನರ ಕಾವ್ಯದ ಶರಣರ ವಚನದ ದಾಸರ ಹಾಡಿನ ಕನ್ನಡ ನಾಡಿದು"– ಎಂದು ಆರಂಭಿಸಿದರು. ಅವರು ನಿಂತ ನಿಲುವು, ಆಡಿದ ಮಾತಿನ ಗತ್ತಿಗೆ ಸಭೆ ರಸಪರವಶಗೊಂಡಿತು.

ಸಭಾಸದರ ಹರ್ಷೋದ್ಗಾರದ ನಡುವೆ ಕೆಲವರು ಶಿಳ್ಳೆ ಹಾಕಿದರು. ರಸಾಭಾಸವಾಯಿತು. ಕವಿಚಿತ್ತ ಚಲಿತವಾಯಿತು. ಬೇಂದ್ರೆ ತಾಳ್ಮೆಗೆಟ್ಟರು. 'ಸಾಹಿತ್ಯ ಶಿಳ್ಳೆಕೇತರಿಗಲ್ಲ' ಎಂದು ರೇಗಿದರು. ಹೆಚ್ಚು ಮಾತಾಡದೆ ಸಿಡಿಮಿಡಿಗೊಂಡು ಕುಳಿತೇಬಿಟ್ಟರು. ಸಭಿಕರು ಬಿಲ್ಲುಂ ಬೆರಗಾದರು. ಸನ್ಮಾನ ಸಮಿತಿಯವರು ಮೂಕವಿಸ್ಮಿತರಾದರು. ಅದರ ಹಿರಿಯರು ನನ್ನ ಕಿವಿಯ ಹತ್ತಿರ ಬಂದು "ಬೇಂದ್ರೆಯವರ ಕಾವ್ಯ ಹೇಗೆ ಕನ್ನಡದ ಸಂಪತ್ತು ಎಂಬುದನ್ನು ಪರಿಚಯಿಸಿ ಸಭೆಯ ಮಹತ್ವವನ್ನು ಮನಗಾಣಿಸ ಬೇಕು "ಎಂದು ಕೋರಿದರು. ನಾನು ಕುವೆಂಪು?ಬೇಂದ್ರೆ ಹೊಸಕಾವ್ಯದ ಶ್ವಾಸಕೋಶಗಳೆಂದು ತಿಳಿದು ಬೆಳೆದವನು. ಅವರ ಕೃತಿಗಳು ಕರತಲಾಮಲಕವೆಂಬಷ್ಟು ವಾಚೋವಿಧೇಯವಾಗಿದ್ದುವು. ಅವರು ತಮ್ಮ ಮೇಘದೂತ ಕನ್ನಡ ಅನುವಾದಕ್ಕೆ ನನ್ನಿಂದ ಹಿನ್ನುಡಿ ಕೂಡ ಬರೆಸಿದಾರೆ. ಅದರಿಂದ ಮೇರು ಪ್ರತಿಭೆಯ ವರಪುತ್ರ ಬೇಂದ್ರೆಯವರ ಬದುಕು–ಬರೆಹ ಮೇಳೈಸಿ ಅವರ ಕಾವ್ಯದ ಸೋಪಜ್ಞತೆ, ಅಪೂರ್ವತೆಯ ನೆಲೆಬೆಲೆಗಳನ್ನು ಕುರಿತು ಮಾತಾಡಿದೆ. ಮುಖ್ಯವಾಗಿ ಬೇಂದ್ರೆಯವರು ಜ್ಞಾನಪೀಠಪ್ರಶಸ್ತಿಗಿಂತ ಮಿಗಿಲಾದ ಶ್ರೇಷ್ಠಕವಿ ಎಂಬುದನ್ನು ಸ್ಥಾಪಿಸಲು ಯಶಸ್ವಿಯಾಗಿದ್ದೆ. ಬೇಂದ್ರೆಯವರಿಗೂ ಖುಷಿ ಆಯಿತು.

೧೯೮೧ರ ನವೆಂಬರು ತಿಂಗಳು ಏಳರಂದು ಬೇಂದ್ರೆಯವರ ಚಿತಾಭಸ್ಮವನ್ನು ಬೆಂಗಳೂರು ರೈಲ್ವೇ ನಿಲ್ದಾಣದಿಂದ ಕನ್ನಡ ಸಾಹಿತ್ಯ ಪರಿಷತ್ತಿನವರೆಗೆ ಅರಳೇಪೇಟೆ ಮೂಲಕ ತೆಗೆದುಕೊಂಡು ಹೋಗಲೂ ಸುಲಲಿತ ಸಂಚಾರಕ್ಕೂ ಧ್ವನಿವರ್ಧಕ ಮತ್ತು ವಾದ್ಯಗಳನ್ನು ನುಡಿಸಲೂ ಸರಕಾರದಿಂದ ಒಪ್ಪಿಗೆ ಪಡೆದು ಸೂಕ್ತ ವ್ಯವಸ್ಥೆ ಮಾಡಿದ್ದೆ. ರೈಲ್ವೇ ನಿಲ್ದಾಣದಲ್ಲಿ ಚಿತಾಭಸ್ಮಕರಂಡವನ್ನು ಸ್ವೀಕರಿಸಿದೆ. ಅನಂತರ ಹೊರಗಡೆಬಂದಾಗ ಅಪಾರ ಕನ್ನಡ ಪ್ರೇಮಿಗಳು ಒಗ್ಗೂರಲಿಂದ 'ಬೇಂದ್ರೆ ಚಿರಾಯು, ಬೇಂದ್ರೆ ಅಮರ' ಇತ್ಯಾದಿ ಘೋಷಣೆಗಳನ್ನು ಕೂಗಿದರು. ಅ ವೇಳೆಗೆ ಆಗಮಿಸಿದ ವೀರಪ್ಪ ಮೊಯಿಲಿಯವರು ಸರಕಾರದ ಪರವಾಗಿ ಗೌರವ ಸೂಚಿಸಿದರು. ವಾಹನಗಳು ನಿಧಾನವಾಗಿ ಚಲಿಸಿದುವು. ಸಂಗೀತಗಾರರು ಅರಳೇಪೇಟೆ, ಚಾಮರಾಜಪೇಟೆ ಮೂಲಕ ಸಾಹಿತ್ಯ ಪರಿಷತ್ತು ತಲುಪುವವರೆಗೂ ಎಡೆಬಿಡದೆ ಬೇಂದ್ರೆಯವರ ಭಾವಗೀತೆಗಳನ್ನು ಹಾಡಿದರು. ಚಿತಾಭಸ್ಮಕರಂಡವನ್ನು ಪರಿಷತ್ತಿನ ಪಡಸಾಲೆಯಲ್ಲಿ ಸಾರ್ಜನಿಕರ ದರ್ಶನಕ್ಕಾಗಿ ಇರಿಸಲಾಯಿತು. ಹಿರಿಯ ಕಿರಿಯ ಸಾಹಿತಿಗಳು ಅಭಿಮಾನಿಗಳೂ ಸಾಲಾಗಿ ನಿಂತು ಗೌರವ ನಮನ, ಅಶ್ರುತರ್ಪಣ ಸಲ್ಲಿಸಿದರು.

ಬೇಂದ್ರೆಯವರ ಜತೆ ಇರೋದು ಅಂದ್ರೆ ಪ್ರತಿಭೆಯ ಮಡಿಲಲ್ಲಿ ಮಲಗಿದಂತೆ. 'ತೇಲಾಡುವಾಗ ಮನಸು ಮೇಲಾಡುತಾವ ಕನಸು.' ೧೯೫೭ರಲ್ಲಿ ಗದಗದಲ್ಲಿ ಅವರ ಮೊದಲ ದರ್ಶನ ಮತ್ತು ಎರಡು ದಿನಗಳ ಒಡನಾಟ ದೊರೆಯಿತು. ನಾನು, ಸುಜನಾರದ್ದು ಬಬಲೇಶ್ವರರ ಮನೆಯಲ್ಲಿ ಬಿಡಾರ. ಬಬಲಾದಿಯವರ ಮನೆಯ ಮಹಡಿಯಲ್ಲಿ ಸತ್ಸಂಗ ಕಾರ್ಯಕ್ರಮ ಮುಗಿಸಿ ವೀರನಾರಾಯಣ ದೇವಾಲಯದ ಇನ್ನೊಂದು ಸಾಹಿತ್ಯ ಸಮಾರಂಭಕ್ಕೆ ಹೊರಟೆವು. ಮಹಡಿ ಇಳಿದು ಕೆಳಗೆ ಬಂದೆವು. ಎಲ್ಲರೂ ಅಲ್ಲಿ ಬಿಟ್ಟಿದ್ದ ಚಪ್ಪಲಿ ಹಾಕಿಕೊಳ್ಳುವಾಗ ಬೇಗ ಹೊರಡುವ ಆತುರದಲ್ಲಿ ಬೇಂದ್ರೆಯವರು ಒಂದು ಕಾಲಿಗೆ ಒಬ್ಬರದು, ಇನ್ನೊಂದು ಕಾಲಿಗೆ ಇನ್ನೊಬ್ಬರದು ಚಪ್ಪಲಿ ಮೆಟ್ಟಿದರು. ಒಡನೆಯೇ ವ್ಯತ್ಯಾಸ ತಿಳಿಯಿತು. ಕಾಲಿಂದ ಅವೆರಡೂ ಚಪ್ಪಲಿ ಬಿಡುವಾಗ " ಇದು ಅರುಳು, ಇದು ಮರುಳು " ಎಂದು ಹೇಳುತ್ತ ಬಿಟ್ಟರು. 'ಅರುಳು ಮರುಳು' ಎಂಬುದು ಅವರ ಕವನ ಸಂಕಲನದ ಹೆಸರು. ಅದನ್ನು ನೆನೆದು ಅವರ ಪ್ರತ್ಯುತ್ಪನ್ನಮತಿಗೆ ಎಲ್ಲರೂ ಘೊಳ್ಳೆಂದು ನಕ್ಕೆವು. ವೀರನಾರಾಯಣ ದೇವರಗುಡಿಯ ವಿಶಾಲ ಪ್ರಾಂಗಣ. ಬಲಭಾಗದ ಹಜಾರದಲ್ಲಿ ಪ್ರಸಿದ್ಧ ಸಂಸ್ಕೃತ ಕವಿ ಜಗನ್ನಾಥನ ಗಂಗಾಲಹರಿಯ ಕನ್ನಡ ಅನುವಾದವನ್ನು ಪಂಡರಿನಾಥಾಚಾರ್ಯ ಗಲಗಲಿಯವರು ಸಿದ್ಧಪಡಿಸಿದ್ದರು. ಬೇಂದ್ರೆಯವರು ಅದನ್ನು ಮಾಡಿದರು.

ಗದಗದಿಂದ ಮರುದಿವಸ ದಾನಚಿಂತಾಮಣಿ ಅತ್ತಿಮಬ್ಬೆಯ ಲಕ್ಕುಂಡಿಗೆ ದೇಗುಲಗಳ ದಾರಿಯಲ್ಲಿ ಪ್ರಯಾಣ. ಅವರ ವೀಕ್ಷಕ ವಿವರಣೆಯ ಝಳಕದಲ್ಲಿ ನಮಗೆ ಪುಳಕ. ಅಲ್ಲಿನ ದೇವಾಲಯದ ಹೊರಭಿತ್ತಿಯಲ್ಲಿ ಶಿವನು ಪಾರ್ವತಿಯನ್ನು ತೊಡೆಯಮೇಲೆ ಕೂಡಿಸಿರುವ ಶಿಲ್ಪವಿತ್ತು. ಅದನ್ನು ನಮಗೆ ತೋರಿಸಿ, "ನಮ್ಮ ರಸಿಕತೆಗೆ ದೇವಾನುದೇವತೆಗಳು ಮಾದರಿ ಆಗಬೇಕು" ಎಂದು ಸರಸವಾಡಿದರು . ಅಲ್ಲಿಂದ ಮುಂದೆ ಹೋಗುವಾಗ ದಾರಿಯಲ್ಲಿ ಒಬ್ಬಾತ ಹೆಂಗಸಿಗೆ ಸಣ್ಣ ಕೋಲಿಂದ ಹೊಡೆಯುತ್ತಿದ್ದ . ಅದಕ್ಕೆ ಬೇಂದ್ರೆ ಸದ್ಯೋಜಾತ ವಿವರಣೆ ನೀಡಿ ನಗಿಸಿದರು – " ನೋಡಿ, ಅವನಿಗೆ ಇಬ್ಬರು ಮಡದಿಯರುಂಟು. ಈಕೆಗೆ ಚಚ್ಚಿದಾನೆ, ಇನ್ನು ಇವಳು ಚೇತರಿಸಿಕೊಳ್ಳಲು ತಿಂಗಳು ಬೇಕು. ಅದುವರೆಗೂ ಈತ ಇನ್ನೊಬ್ಬಳ ಜತೆ ರಮಿಸುತ್ತಾನೆ." ಇದು ಅವರ ಕಲ್ಪನಾ ವಿಲಾಸದ ಲಹರಿ.

ದಾವಣಗೆರೆಯ ಕಾಲೇಜಲ್ಲಿ ೧೯೬೦– ೬೭ರಲ್ಲಿ ಅಧ್ಯಾಪಕನಾಗಿದ್ದೆ. ಬೆಳಗಾವಿ–ಧಾರವಾಡ ಕಡೆಯಿಂದ ಬೆಂಗಳೂರಿಗೆ ಬರುವ ಲಗ್ಸುರಿಬಸ್ಸು ಅರೆ ತಾಸು ದಾವಣಗೆರೆ ಕೃಷ್ಣ ಹೋಟಲ ಬಳಿ ನಿಲ್ಲುತ್ತಿತ್ತು. ಬೇಂದ್ರೆಯವರು ಬರುವಾಗಲೆಲ್ಲ ಮುಂಚಿತವಾಗಿ ತಿಳಿಸುತ್ತಿದ್ದರು. ಅವರೊಂದಿಗೆ ಊಟದ ಸವಿಯೊಂದಿಗೆ ಕಾವ್ಯಾಸ್ವಾದದ ಆನಂದವೂ ಅನುಭವ ಆಗುತ್ತಿತ್ತು. ಇನ್ನೊಮ್ಮೆ ಬೆಳಗಾವಿಯಲ್ಲಿ ಭಾಷಣ ಮುಗಿಸಿ ನಾನು ಕಮಲಾಹಂಪನಾ ಬೆಳಗಾವಿಯಿಂದ ಬೆಂಗಳೂರುವರೆಗೆ ಮದುವೆಯಾದ ಹೊಚ್ಚ ಹೊಸ ಮದುಮಕ್ಕಳ ಮಧುಚಂದ್ರ ಮೆಲಕು ಹಾಕುತ್ತ ಮೈಕೈ ಸೋಕಿಗೆ ಕುಲುಕುಲು ನಗುತ್ತ ಲಕ್ಸುರಿ ಬಸ್ಸಿನಲ್ಲಿ ಪಯಣ ಬೆಳೆಸಿದ್ದೆವು. ಧಾರವಾಡದಲ್ಲಿ ಬೇಂದ್ರೆ ಬಸ್ ಹತ್ತಿದರು. ನಮ್ಮನ್ನು ನೋಡಿ ಹತ್ತಿರ ಬಂದರು. ಆನಂದಾಮೃತಾಸ್ವಾದ ನಿರತರಾಗಿದ್ದ ನಮಗೆ ಅವರು ಕೆಮ್ಮಿದಾಗಲೇ ಭೂಮಿಗೆ ಬಂದದ್ದು. ಥಟ್ಟನೆ ಎದ್ದು ನಿಂತು ನಮಸ್ಕರಿಸಿದೆವು. ಅವರು 'ಭಲೋ ಆಯಿತು' ಎಂದು ಹೇಳಿದರು. ಆದರೆ ತಮ್ಮ ಸೀಟಿಗೆ ಹೋಗಲಿಲ್ಲ. ನಮ್ಮಿಬ್ಬರ ನಡುವೆ ಕೂತುಬಿಟ್ಟರು. ಕನಸೊಡೆದೆದ್ದೆ ಇನ್ನೆಲ್ಲಿಯ ನಿದ್ದೆ! ಎಂಬಂತೆ ಆಗಿತ್ತು. ಅದು ಇಬ್ಬರಿಗಿದ್ದ ಸೀಟು. (ಆಗ)ಮೂವರೂ ತೆಳ್ಳಗಿದ್ದ ಕಾರಣ ಇಕ್ಕಟ್ಟಾಗಲಿಲ್ಲ. ಬೇಂದ್ರೆಯವರಿದ್ದರೆ ಬೇರೆಯವರಿಗೆ ಮಾತಿಗೆ ಅವಕಾಶವೆಲ್ಲಿ? ನಾನ್ ಸ್ಟಾಪ್ ವಾಗ್ ವಿಭವೋನ್ನತಿ. ಧಾರವಾಡದಲ್ಲಿ ಆರಂಭವಾದ ಅವರ ಮಾತು ನಿಂತದ್ದು ಬೆಂಗಳೂರು ಬಂದಾಗ! ಮಿಂಚಿನ ಗೊಂಚಲಲ್ಲಿ ಸಂಚರಿಸಿದ ಕಾವ್ಯೋಲ್ಲಾಸವಾಯಿತು. ಎಂಟುಗಂಟೆ ಅವಧಿಯ ದೀರ್ಘ ದಾರಿ ಸಮೆದದ್ದು ತಿಳಿಯಲೂ ಇಲ್ಲ. ಸಾಹಿತ್ಯಸಲ್ಲಾಪದಿಂದಾಗಿ ಪ್ರಯಾಣಸುಖ ಇಮ್ಮಡಿ ಆಯಿತು. "ನೀವು ನವ ದಂಪತಿಗಳು, ರತ್ನಾಕರವರ್ಣಿಯ ಭ ರತೇಶ ವೈಭವದಲ್ಲಿ ಭೋಗಸಂಧಿ ತಪ್ಪದೆ ಓದಿ" ಎಂದು ಉಪದೇಶಿಸಿದರು.

ಬೇಂದ್ರೆಯವರು ಅಸಾಧಾರಣ ಪ್ರತ್ಯುತ್ಪನ್ನಮತಿ, ಅವರ ಸಮಯಸ್ಫೂರ್ತಿಯ ಪ್ರಖರತೆಗೊಂದು ಉದಾಹರಣೆ– ಕರ್ನಾಟಕ ವಿಶ್ವವಿದ್ಯಾಲಯ ತನ್ನ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಕೊಟ್ಟಾಗ ಬೇಂದ್ರೆ ಉತ್ತರದಲ್ಲಿ ಪ್ರತಿಭೆಯ ಪ್ರಕಾಶವಿತ್ತು , ಅವರು ಇಂತು ಉಲಿದರು " ನೀವೇನ್ರೋ ಈಗ ಡಾಕ್ಟರೇಟ್ ಕೊಡೋದು, ನಾನು ಹುಟ್ಟುವಾಗಲೇ ಡಾಕ್ಟರ್, ನಾನು ಡಿಆರ್ (Dr) ಬೇಂದ್ರೆ"!



(ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು ಹಿರಿಯ ವಿದ್ವಾಂಸರು ಮತ್ತು ಗ್ರಂಥಕರ್ತರು)

# ಕನ್ನಡದ ಬ್ರಹ್ಮ ಪುರಾಣ

## ನಂ ಮೇಷ್ಟ್ರು ಜಿ. ಬ್ರಹ್ಮಪ್ಪನವರ ರಸ ಪ್ರಸಂಗಗಳು

ಸಂಗ್ರಹ ಮತ್ತು ನಿರೂಪಣೆ: **ಡಿಎಸ್ಸೆನ್**
ರೇಖಾಚಿತ್ರಗಳು: **ಗುಜ್ಜಾರ್**



**ಜಿ.**ಬ್ರಹ್ಮಪ್ಪ ಕಳೆದ ತಲೆಮಾರಿನ ಕನ್ನಡ ಅಧ್ಯಾಪನ ಮತ್ತು ಸಾಹಿತ್ಯ ಕ್ಷೇತ್ರದ ಒಂದು ಗಮನಾರ್ಹ ಹೆಸರು. ಅವರು ಜೈನ ಧರ್ಮ ವಿದ್ವಾಂಸರೂ ಹೌದು ಮತ್ತು ಈ ಸಂಬಂಧವಾಗಿ ಅವರು ಹಲವು ಪುಸ್ತಕಗಳನ್ನೂ ರಚಿಸಿದ್ದಾರೆ. ಆದರೆ ಬ್ರಹ್ಮಪ್ಪನವರು ಇವೆಲ್ಲಕ್ಕಿಂತ ಹೆಚ್ಚಾಗಿ ಗಮನಾರ್ಹವೆನಿಸಿದ್ದುದು ಅವರ ವಿಶಿಷ್ಟ ವಿನೋದ ಪ್ರಜ್ಞೆಗಾಗಿ.

ಸದಾ ಕಚ್ಚೆ ಪಂಚೆ, ಮೇಲೊಂದು ಜುಬ್ಬ ಮತ್ತು ತಲೆಯ ಮೇಲೊಂದು ಖಾದಿ ಟೋಪಿ ಧರಿಸುತ್ತಿದ್ದ ಕೋಲು ಮುಖದ ಅವರು ೧೯೬೬ರಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ನನಗೆ ಪಿಯುಸಿಯಲ್ಲಿ ಮೇಷ್ಟ್ರು. ಅವರು ಬರೆದ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂಬ ಕಾದಂಬರಿಯು ನಮಗೆ ಆಗ ಪಠ್ಯವಾಗಿದ್ದುದರಿಂದ ಲೇಖಕ ಎಂಬ ಕಾರಣಕ್ಕಾಗಿ ಅವರ ಬಗ್ಗೆ ನಮಗೆಲ್ಲ ಹೆಚ್ಚಿನ ಕುತೂಹಲ. ಅವರು ನಮಗೆ ಪಾಠ ಮಾಡುತ್ತಿದ್ದ ಪ್ರಭುಶಂಕರ ಅವರ 'ನಿವೇದಿತಾ' ಎಂಬ ಪುಸ್ತಕ ನಮ್ಮ ಆಗಿನ ವಯಸ್ಸನ್ನು ಮೀರಿದ ಅಧ್ಯಾತ್ಮಿಕ ವಾಸನೆ ಹೊಡೆಯುತ್ತಿದ್ದುದರಿಂದ ಅದರ ಪಾಠವೂ ಒಣಕಲಾಗಿದ್ದು ತರಗತಿಯಲ್ಲಿ ವಿದ್ಯಾರ್ಥಿಗಳ ಗಲಾಟೆ ಜಾಸ್ತಿಯಿರುತ್ತಿತ್ತು. ಆದರೆ ಬ್ರಹ್ಮಪ್ಪನವರು ಇದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ವಣವಣವೆಂದು ಮಂತ್ರ ಹೇಳಿದಂತೆ ಪಾಠ ಮಾಡುತ್ತಲೇ ಹೋಗುತ್ತಿದ್ದರು. ಯಾರಾದರೂ ವಿದ್ಯಾರ್ಥಿಗಳು 'ಜೋರಾಗಿ ಪಾಠ ಹೇಳಿ ಸಾರ್, ಕೇಳಿಸುವುದಿಲ್ಲ!' ಎಂದರೆ 'ನೀವೆಲ್ಲ ಗಲಾಟೆ ನಿಲ್ಲಿಸಿದರೆ ಅದು ಕೇಳಿಸುತ್ತದೆ' ಎಂಬ ಎರಡು ವಾಕ್ಯದ ಉತ್ತರವನ್ನು ಮಾತ್ರ ನೀಡಿ ತಮ್ಮ ವಣವಣವನ್ನು ಮುಂದುವರೆಸುತ್ತಿದ್ದರು. ಪಾಠ ಕುರಿತ ಅವರ ಈ ನಿಲುವಿಗೆ ಸಂಬಂಧಿಸಿದಂತೆ ಅವರ ಕಿರಿಯ ಸಹೋದ್ಯೋಗಿ ಮಿತ್ರರೊಬ್ಬರು ಹೇಳಿದ ಪ್ರಸಂಗ ಸ್ವಾರಸ್ಯಕರವಾಗಿದೆ:



ಬ್ರಹ್ಮಪ್ಪ ಪ್ರಾಂಶುಪಾಲರಾಗಿದ್ದ ಕಾಲೇಜೊಂದರಲ್ಲಿ ಹೊಸದಾಗಿ ನೇಮಕವಾಗಿದ್ದ ಮೇಷ್ಟ್ರೊಬ್ಬರು ತರಗತಿಯೊಂದಕ್ಕೆ ಪಾಠ ಮಾಡಲು ಹೋದ ಹತ್ತೇ ನಿಮಿಷಗಳಲ್ಲೇ ವಾಪಸ್ ಬಂದು 'ನಾನಿನ್ನು ಆ ತರಗತಿಗೆ ಪಾಠ ಮಾಡಲು ಹೋಗುವುದಿಲ್ಲ' ಎಂದರಂತೆ. ತರಗತಿಯಲ್ಲಿ ಏನು ಅನಾಹುತವಾಯಿತೋ ಎಂದು ಗಾಬರಿಯಾದ ಬ್ರಹ್ಮಪ್ಪನವರು 'ಏನು ತೊಂದರೆಯಾಯಿತಯ್ಯಾ?' ಎಂದು ಕೇಳಲು ಆ ಮೇಷ್ಟ್ರು 'ನಾನು ಹೋಗಿ ಸೀರಿಯಸ್ಸಾಗಿ ಪಾಠ ಮಾಡುತ್ತಿದ್ದೇನೆ ಸಾರ್. ಎದುರಿಗೆ ನೋಡಿದರೆ ಒಬ್ಬ ಡೆಸ್ಕ್ ಮೇಲೆ ತಲೆ ಇಟ್ಟು ನಿದ್ದೆ ಮಾಡುತ್ತಿದ್ದಾನೆ ಸಾರ್! ಇದು ಎಂತಹ ತರಗತಿ ಸಾರ್' ಎಂದು ವ್ಯಗ್ರರಾದರಂತೆ. ದೀರ್ಘ ನಿಟ್ಟುಸಿರು ಬಿಟ್ಟ ಬ್ರಹ್ಮಪ್ಪನವರು ಮೆಲ್ಲಗೆ 'ನಿನಗೆ ಸೀರಿಯಸ್ಸಾಗಿ ಪಾಠ ಮಾಡಲು ಯಾರು ಹೇಳಿದರಯ್ಯ? ಇರಲಿ, ಅವನೇನಾದರೂ ಗೊರಕೆ ಹೊಡೆಯುತ್ತಿದ್ದನೇನಯ್ಯ?' ಎಂದು ಕೇಳಿದರಂತೆ. ಅದಕ್ಕೆ ಆ ಮೇಷ್ಟ್ರು 'ಅದೇನು ಕೇಳಿಸಲಿಲ್ಲ' ಎಂದಾಗ ಸಣ್ಣಗೆ ನಕ್ಕು, 'ಹಾಗಿದ್ದರೆ ಅವನಿಂದ ನಿನಗೇನು ತೊಂದರೆ? ಅದರಿಂದ ತರಗತಿಯ ಗಲಾಟೆ ಆ ಮಟ್ಟಿಗೆ ಕಡಿಮೆಯೇ ಆಯಿತು. ಸುಮ್ಮನೆ ಹೋಗಿ ಸುಖವಾಗಿ ಪಾಠ ಮುಗಿಸಿ ಬಾ!' ಎಂದು ಅವರು ಆ ಹೊಸ ಮೇಷ್ಟ್ರಿಗೆ ಅಧ್ಯಾಪನದ ಪ್ರಾಥಮಿಕ ಪಾಠ ಹೇಳಿ ಕಳಿಸಿದರಂತೆ! ಮೇಷ್ಟ್ರು ಹೋದ ನಂತರ ಅವರು 'ನಿಜವಾಗಿ ಬಂದು ದೂರು ಹೇಳಬೇಕಾದವನು ಫೀಜು ಕೊಟ್ಟು ಕಾಲೇಜಿಗೆ ಬರುತ್ತಿರುವ ಆ ವಿದ್ಯಾರ್ಥಿ, ಈ ಮೇಷ್ಟ್ರ ಪಾಠದಿಂದ ತನ್ನ ನಿದ್ದೆಗೆ ತೊಂದರೆಯಾಗುತ್ತಿದೆ ಎಂದು. ಆದರೆ ನೋಡಿ, ಅವನ ಫೀಜಿನಿಂದ ಸಂಬಳ ತಿನ್ನುವ ಈ ಮೇಷ್ಟ್ರು ಬಂದಿದ್ದಾನೆ ದೂರು ತೆಗೆದುಕೊಂಡು!' ಎಂದು ಅಲ್ಲಿ ಕುಳಿತಿದ್ದ ಇನ್ನೊಬ್ಬ ಮೇಷ್ಟ್ರಿಗೆ ಹೇಳಿದರಂತೆ!:

***

ಬ್ರಹ್ಮಪ್ಪ ಕವಿ ಜಿ.ಎಸ್ ಶಿವರುದ್ರಪ್ಪನವರ ಸಹಪಾಠಿ. ಈ ಬಗ್ಗೆ ಜಿಎಸ್ಸೆಸ್ 'ಚತುರಂಗ' ಎಂಬ ತಮ್ಮ ಕೆಲ ನೆನಪುಗಳ ಪುಸ್ತಕದಲ್ಲಿ ವಿವರವಾಗಿ ಬರೆದಿದ್ದಾರೆ. ಅದನ್ನು ಒಂದಿಷ್ಟು ಸಂಕ್ಷಿಪ್ತಗೊಳಿಸಿ ಹೇಳುವುದಾದರೆ–

ಪರಸ್ಪರ ಏಕವಚನದ ಈ ಗೆಳೆಯರು ಪರಸ್ಪರ ಪರಿಚಯವಾದ ಬಗೆ ಹೀಗೆ. ತುಮಕೂರಿನ ಇಂಟರ್‌ಮೀಡಿಯೇಟ್ ಕಾಲೇಜಿನ ಕರ್ನಾಟಕ ಸಂಘದ ಚುನಾವಣೆಗಳ ಸಂದರ್ಭ. ಆಗ ಜಿಎಸ್ಸೆಸ್ ಕೈಗೆ 'ಸನ್ನಿವೇಶವಿಲ್ಲದ ಕುನ್ನಿ' ಎಂಬ ಶೀರ್ಷಿಕೆಯ ಕರಪತ್ರವೊಂದು ಸಿಕ್ಕಿತು. ಕುತೂಹಲಗೊಂಡ ಅವರು ಅದನ್ನು ವಿವರವಾಗಿ ಓದಿ ಅದನ್ನು ಬರೆದವನ ಸಾಹಿತ್ಯ ಪ್ರತಿಭೆ ಕಂಡು ಗಾಬರಿಗೊಂಡು ಆತನ ಪರಿಚಯಕ್ಕೆ ಹಾತೊರೆದರು. ಆತನೇ ಬ್ರಹ್ಮಪ್ಪ. ಆ ಕರಪತ್ರದಲ್ಲಿ ಶೀರ್ಷಿಕೆಯ ವಿವರಣೆ ಹೀಗಿತ್ತು. ಹೌದು ಈಗ ನಾನೊಬ್ಬ ಬಡ ಕುನ್ನಿಯೇ. ಆದರೆ ಸನ್ನಿವೇಶ ದೊರೆತರೆ ನಾನೂ ನನ್ನ ಶಕ್ತಿಮೀರಿ ಬೊಗಳುವ ನಾಯಿಯಾಗಿ ನಿಮ್ಮ ಮತ್ತು ಕನ್ನಡದ ಸೇವೆ ಮಾಡುವೆ. ಆದ್ದರಿಂದ ನಿಮ್ಮ ಮತ ನನಗಿರಲಿ!' ತಮ್ಮ ಮತ ಅವರಿಗೆ ಬಿತ್ತೋ ಇಲ್ಲವೋ ಎಂಬುದನ್ನು ಜಿಎಸ್ಸೆಸ್ ಹೇಳದಿದ್ದರೂ ಅವರಿಬ್ಬರ ಸ್ನೇಹವಂತೂ ಆ ಘಳಿಗೆಯಲ್ಲೇ ಗಟ್ಟಿಯಾಯಿತು!

****

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಬಿಎ ಆನರ್ಸ್‌ನಲ್ಲಿ ಮತ್ತೆ ಬ್ರಹ್ಮಪ್ಪ ಮತ್ತು ಜಿಎಸ್ಸೆಸ್ ಸಹಪಾಠಿಗಳು. ಎರಡನೇ ಆನರ್ಸಿನಲ್ಲಿದ್ದಾಗ ಇವರಿಬ್ಬರೂ ಸೇರಿದಂತೆ ಕೆಲವು ವಿದ್ಯಾರ್ಥಿಗಳು ಗುರುಗಳಾದ ರಾಘವಾಚಾರ್ಯರ ಮಾರ್ಗದರ್ಶನದಲ್ಲಿ ಹಂಪೆ–ಬಾದಾಮಿ–ಐಹೊಳೆ–ಪಟ್ಟದಕಲ್ಲುಗಳ ಪ್ರವಾಸ ಹೊರಟರು. ರೈಲು ಹತ್ತಿದೊಡನೆ ಕಿಟಕಿಯ ಮೂಲಕ ಪಶ್ಚಿಮದ ದಿಗಂತದತ್ತ ಕಣ್ಣು ಕೀಲಿಸಿ ಕಾವ್ಯ ಸಮಾಧಿಗೆ ಸಂದ ಬ್ರಹ್ಮಪ್ಪ ಹಂಪೆ ಪ್ರವಾಸದುದ್ದಕ್ಕೂ ಹಾಗೇ ಇದ್ದುಬಿಟ್ಟರು! ಇದರ ಪರಿಣಾಮವಾಗಿ ಹೊಸಪೇಟೆಯಿಂದ ಮುಂದುವರೆಯಲು ರೈಲು ಹತ್ತುವಾಗ ರಾಘವಾಚಾರ್ಯರು ತಮ್ಮಿಬ್ಬರು ಶಿಷ್ಯರನ್ನು ಅಟ್ಟಿ ಯಾವುದೋ ಹಾಳು ಮಂಟಪದಲ್ಲಿ ಏಕಾಗ್ರತೆಯಿಂದ ಕಾವ್ಯ ರಚನೆಯಲ್ಲಿ ತೊಡಗಿದ್ದ ಬ್ರಹ್ಮಪ್ಪನವರನ್ನು ಎಬ್ಬಿಸಿ ಕರೆತಂದು ರೈಲು ಹತ್ತಿಸಬೇಕಾಯಿತಂತೆ! ಗೆಳೆಯರಿಗೆಲ್ಲ ಬ್ರಹ್ಮಪ್ಪ ಎಂತಹ ಮಹಾಕಾವ್ಯ ರಚನೆಯಲ್ಲಿ ತೊಡಗಿದ್ದಾನೋ ಎಂಬ ಸೋಜಿಗ!

ಮಾರನೆಯ ದಿನ ಬಾದಾಮಿ ನೋಡಿ ರಾತ್ರಿ ಪಟ್ಟದಕಲ್ಲು ಸೇರಿ ಊಟ ಮಾಡಿ ಯಾರದೋ ಒಂದು ಮುರುಕಲು ಮನೆಯಲ್ಲಿ ನಿದ್ರೆಗೆ ಸಿದ್ಧವಾಗುತ್ತಿರುವ ಹೊತ್ತಿನಲ್ಲಿ ಯಾರೋ ಹೊರಗೆ ಸುರಿಯುತ್ತಿದ್ದ ಬೆಳುದಿಂಗಳನ್ನು ನೋಡಿ ತಮ್ಮ ಗುರುಗಳಿಗೆ, 'ಸಾರ್ ಕಾವ್ಯ ಕೇಳಲು ಇದು ಪ್ರಶಸ್ತ ಕಾಲ. ನಮ್ಮ ಬ್ರಹ್ಮಪ್ಪ ಹಂಪೆ ಕುರಿತು ಒಂದು ಮಹಾಕಾವ್ಯ ರಚಿಸುತ್ತಿದ್ದಾನೆ. ಕೇಳೋಣ ಸಾರ್' ಎಂದದ್ದೇ ತಡ ಬ್ರಹ್ಮಪ್ಪ ಎದ್ದು ಕೂತರು. ರಾಘವಾಚಾರ್ಯರೂ, 'ಅದೇನು ಬರೆದಿದ್ದೀಯೋ ಬ್ರಹ್ಮಪ್ಪ, ಓದೋಣವಾಗಲಿ' ಎಂದು ಅಪ್ಪಣೆ ಕೊಡಿಸಿದರು. ತಡಮಾಡದ ಕವಿವರನು ಮೂಗಿಗೆ ಒಂದು ಚಿಟಿಕೆ ನಶ್ಯ ಏರಿಸಿ ನೋಟ್‌ಬುಕ್‌ನಿಂದ ಕಾವ್ಯಧಾರೆ ಹರಿಸಲು ಶುರು ಮಾಡಿದನು:

**ಹಂಪೆಯ ಬಳಿ ಹರಿಯುತ್ತಿದೆ ತುಂಗಭದ್ರೆ**
**ಇದ ನೋಡಿ ನನಗೆ ಬರುತಿದೆ ಗಾಢ ನಿದ್ರೆ!**

ಕಾವ್ಯರಸಿಕ ಸಮೂಹ ಒಮ್ಮೆಗೇ 'ಹೋ' ಎಂದು ಚಪ್ಪಾಳೆ ತಟ್ಟಿತು. ಇದರಿಂದ ಮತ್ತಷ್ಟು ಉತ್ತೇಜಿತರಾದ ಕವಿವರ್ಯರು ತಮ್ಮ ಕಾವ್ಯ ಪ್ರವಾಹವನ್ನು ಮುಂದುವರೆಸಿದರು:

**ರಾಣಿವಾಸದ ರಾಗದ ರಾಟೆ ತಿರುವಿದ ತಾಣದಲಿ**
**ಲದ್ದಿಯನಿಕುತ್ತಿವೆ ಕತ್ತೆಗಳು ಬಹು ಸೋಗಿನಲಿ!**

ಈ ಉಪಮಾತೀತ ಕಾವ್ಯರಚನಾ ಸಾಮರ್ಥ್ಯವನ್ನು ಕಂಡು ಇಡೀ ಸಭೆ ಮೌನವಿಸ್ಮಿತವಾಯಿತು. ಗುರುಗಳೂ ಕುತೂಹಲಭರಿತರಾಗಿ ಕೇಳಿದರು: 'ಅಲ್ಲ ಬ್ರಹ್ಮಪ್ಪ, ಕತ್ತೆಗಳಾದರೂ ಸೋಗಿನಲ್ಲಿ ಲದ್ದಿಯಿಕ್ಕುವುದು ಹೇಗೆ ಹೇಳಯ್ಯ! ತಕ್ಷಣವೇ ಬಂತು ಉತ್ತರ: ಪದ್ಯದ ಪ್ರಾಣವಿರುವುದು ಪ್ರಾಸದಲ್ಲಲ್ಲವೇ ಸಾರ್? ಹಿಂದಿನ ಸಾಲಿನಲ್ಲಿನ 'ತಾಣದಲಿ' ಎಂಬುದಕ್ಕೆ 'ಸೋಗಿನಲಿ' ಎಂಬುದು ಒಂದು ಘನವಾದ ಪ್ರಾಸವಾಗುತ್ತದಲ್ಲವಾ ಸಾರ್?'

ಮತ್ತೆ 'ಹೋ' ಅಬ್ಬರ ಅದರಲ್ಲಿ ಈಗ ಗುರುಗಳೂ ಸೇರಿಕೊಂಡರು!

******



ಜಿಎಸ್ಸೆಸ್–ಬ್ರಹ್ಮಪ್ಪನವರ ನಂಟು ವಿದ್ಯಾರ್ಥಿ ಜೀವನವನ್ನೂ ಹಾದು ಅಧ್ಯಾಪನ ಜೀವನಕ್ಕೂ ವಿಸ್ತರಿಸಿತು. ದಾವಣಗೆರೆ ಕಾಲೇಜಿನಲ್ಲಿ ಇಬ್ಬರೂ ಕನ್ನಡ ಮೇಷ್ಟ್ರುಗಳಾದರು, ಅಷ್ಟು ಹೊತ್ತಿಗೆ ಬ್ರಹ್ಮಪ್ಪ 'ಭರತೇಶನ ಬಾಳ್ಗಬ್ಬಂ' ಎಂಬ ನಾಟಕವನ್ನು ರಚಿಸಿ ಅಚ್ಚು ಹಾಕಿಸಿದ್ದರು, ಆದರೆ ಅವನ್ನು ಮಾರುವ ಪರಿ ಎಂತು? ಅದನ್ನೂ ಜಿಎಸ್ಸೆಸ್ 'ನಭೂತೋ ನಭವಿಷ್ಯತಿ' ಎಂದು ಮೆಚ್ಚುಬಿದ್ದಂತೆ ವಿವರಿಸಿದ್ದಾರೆ. ಆಗ

ದಾವಣಗೆರೆಯಲ್ಲಿ ಜೈನ ಶೆಟ್ಟರ ಅಂಗಡಿಗಳು ಸಾಕಷ್ಟಿದ್ದವು. ಬ್ರಹ್ಮಪ್ಪನವರ ಮನೆಗೆ ಹುಣಿಸೆ ಹಣ್ಣು ಬೇಕಾಯಿತು ಎನ್ನಿ, ಅವರು ನೇರವಾಗಿ ಜೈನಶೆಟ್ಟರೊಬ್ಬರ ಅಂಗಡಿಗೆ ಹೋಗಿ ಎಷ್ಟು ಬೇಕೋ ಅಷ್ಟು ಹುಣಿಸೆ ಹಣ್ಣು ಹೇಳಿ ಕಟ್ಟಿಸಿಕೊಂಡು 'ಇದರ ಬೆಲೆ ಎಷ್ಟು?' ಎಂದು ಕೇಳುವರು. ಶೆಟ್ಟರು ಎರಡು ರೂಪಾಯಿ ಎಂದರೆನ್ನಿ, ಬ್ರಹ್ಮಪ್ಪ ತಣ್ಣಗೆ, 'ಅಷ್ಟೇನಾ?' ಎನ್ನುತ್ತಾ ನಿಧಾನವಾಗಿ ಹುಣಿಸೆಹಣ್ಣು ಪೊಟ್ಟಣವನ್ನು ತಮ್ಮ ಕೈಚೀಲದೊಳಗಿರಿಸಿ, ಅದೇ ಚೀಲದಿಂದ ತಮ್ಮ ನಾಟಕದ ಪ್ರತಿಯೊಂದನ್ನು ತೆಗೆದು ಶೆಟ್ಟರ ಕೈಗಿಟ್ಟು 'ನೋಡಿ ಧರ್ಮಾತ್ಮರೇ, ಇದು ಪ್ರಥಮ ತೀರ್ಥಂಕರರ ಮಗ ಭರತ ಚಕ್ರವರ್ತಿಯ ಬಾಳ ಮಹಿಮೆಯ ಕಥೆ. ಇದರ ಬೆಲೆ ಎರಡೋ ಮೂರೋ ರೂಪಾಯಿ ಎಂದು ಅದರ ಮೇಲೆ ನಮೂದಿಸಿದೆಯಾದರೂ, ಧರ್ಮದ ದೃಷ್ಟಿಯಿಂದ ಇದು ಬೆಲೆ ಕಟ್ಟಲಾಗದ್ದು, ದಿನವೂ ಪಠಣ ಮಾಡಿ ಪುಣ್ಯ ಸಂಪಾದಿಸಿಕೊಳ್ಳಿ' ಎಂಬ ಸಣ್ಣ ಪ್ರವಚನ ಮಾಡುವರು. ಶೆಟ್ಟರು ಸೊಟ್ಟ ಮೋರೆ ಮಾಡಿಕೊಂಡು ಬೆಪ್ಪಾಗಿ ನಿಂತಿರುವಂತೆಯೇ ಬ್ರಹ್ಮಪ್ಪನವರು ಮನೆಗೆ ಇನ್ನೇನು ಬೇಕು ಎಂದು ನೆನಪಿಸಿಕೊಂಡು ಇನ್ನೊಂದು ಜೈನ ಶೆಟ್ಟರ ಅಂಗಡಿಯತ್ತ ಧಾವಿಸುವರು!

******



ದಾವಣಗೆರೆ ಕಾಲೇಜಿಗೆ ಸುಪ್ರಸಿದ್ಧ ವಿನೋದ ಸಾಹಿತಿ 'ಅನರ್ಥಕೋಶ'ದ ಅಧಿಪತಿಗಳಾದ ನಾ. ಕಸ್ತೂರಿ ಅಧೀಕ್ಷಕರು. ಅಂದರೆ ಆಡಳಿತಾಧಿಕಾರಿ. ಕ್ರಿಸ್‌ಮಸ್ ರಜೆಯ ನಂತರ ಕಾಲೇಜು ಪುನರಾರಂಭವಾಗುವ ದಿನ ಎಲ್ಲ ಮೇಷ್ಟ್ರುಗಳೂ ಬೆಳಿಗ್ಗೆ ಹತ್ತೂವರೆ ಹೊತ್ತಿಗೆ ಕಾಲೇಜಿಗೆ ಹಾಜರಾಗಿ ಸಹಿ ಹಾಕುವುದು ಆಗ ಕಡ್ಡಾಯ. ಆದರೆ ಆ ದಿನ ಆ ಹೊತ್ತಿಗೆ ಬ್ರಹ್ಮಪ್ಪ ಬರಲೇ ಇಲ್ಲ. ಹತ್ತೂವರೆಯೇನು, ಹನ್ನೆರಡೂವರೆಯಾದರೂ ಅವರ ಪತ್ತೆ ಇಲ್ಲ. ಒಂದೂವರೆಯಾಗುತ್ತಿದ್ದಂತೆ ಕಸ್ತೂರಿಯವರು ಹಾಜರಿ ಪುಸ್ತಕ ತೆಗೆದು ಬ್ರಹ್ಮಪ್ಪನವರ ಗೈರು ಹಾಜರಿಯನ್ನು ದಾಖಲಿಸಿ ವಿಶ್ವವಿದ್ಯಾನಿಲಯಕ್ಕೆ ವರದಿ ಕಳಿಸಲು ಸಿದ್ಧರಾಗುತ್ತಿರುವಂತೆ ಬ್ರಹ್ಮಪ್ಪ ಏದುಸಿರು ಬಿಡುತ್ತಾ ಓಡೋಡಿ ಬಂದು ಕಸ್ತೂರಿಯವರ ಎದುರು ನಿಂತರು. ಕಸ್ತೂರಿಯವರು 'ಏನು ಬ್ರಹ್ಮಪ್ಪ, ನಿಮಗೆ ನಿಯಮ ಗೊತ್ತಿಲ್ಲವೆ? ವರದಿ ತಯಾರಾಗುತ್ತಿದೆ, ನೋಡಿ' ಎಂದು ರೇಗಾಡತೊಡಗಿದಾಗ ಬ್ರಹ್ಮಪ್ಪ ಕೈಜೋಡಿಸಿ ವಿನೀತರಾಗಿ 'ಬಸ್ ಕೆಟ್ಟು ಲೇಟಾಯ್ತು ಸಾರ್! ಆದರೂ ಮರೆಯದೆ ನಿಮ್ಮ ಮನೆಗೆ ಹೋಗಿ ಇಟ್ಟು ಬಂದಿದ್ದೇನೆ ಸಾರ್!' ಎಂದು ವಿವರಣೆಗೆ ತೊಡಗಿದರು. ಕಸ್ತೂರಿಯವರಿಗೆ ಇದೇನೆಂದು ಆರ್ಥವಾಗದೆ ಕಣ್ಣು ಕಣ್ಣು ಬಿಡುತ್ತಾ, 'ರೀ ಬ್ರಹ್ಮಪ್ಪ ಏನು ಬಡಬಡಿಸುತ್ತಿದ್ದೀರಿ? ಅರ್ಥವಿಲ್ಲದ ಮಾತಾಡಿ ನನ್ನ ದಾರಿ ತಪ್ಪಿಸಲಾರಿರಿ!' ಎಂದು ಮತ್ತಷ್ಟು ಏರಿದ ದನಿಯಲ್ಲಿ ಕೂಗತೊಡಗಿದರು. ಬ್ರಹ್ಮಪ್ಪ ಇದರಿಂದ ಕೊಂಚವೂ ವಿಚಲಿತರಾಗದೆ, 'ಸಂಜೆಗೆ ಮನೆಗೆ ಹೋಗಿ ನಿಮ್ಮ ಮನೆಯವರನ್ನೇ ಕೇಳಿ ನೋಡಿ ಸಾರ್, ಸತ್ಯವಾಗಿಯೂ ಇಟ್ಟು ಬಂದಿದ್ದೇನೆ' ಎಂದಾಗ ದಿಕ್ಕೇ ತೋಚದಂತಾದ ಕಸ್ತೂರಿಯವರು 'ಬ್ರಹ್ಮಪ್ಪ ಅದೇನು ನಿನ್ನ ಅಸಂಬದ್ಧವಾದ ಮಾತು... ನೀನು ತಡವಾಗಿ ಬರಲು ಕಾರಣವೇನು, ನೇರವಾಗಿ ಹೇಳು. ಇಲ್ಲದಿದ್ದರೆ ಈ ವರದಿಯನ್ನು ಯೂನಿವರ್ಸಿಟಿಗೆ ಕಳಿಸುತ್ತೇನೆ' ಎಂದು ಬೆದರಿಸಿದಾಗ ಬ್ರಹ್ಮಪ್ಪ ಹೇಳಿದ್ದು ಇಷ್ಟು: 'ಮಧುಗಿರಿ ಬಸ್ ಕೆಟ್ಟು ಲೇಟಾದ್ರೂ ನಮ್ಮ ತೋಟದಿಂದ ಇಳಿಸಿಕೊಂಡು ಬಂದಿದ್ದ ಸಕತ್ತಾದ ಹಲಸಿನ ಹಣ್ಣನ್ನು ನಾನೇ ಬಸ್ಸಿನಿಂದಿಳಿಸಿ ಹೊತ್ತುಕೊಂಡು ಹೋಗಿ ನಿಮ್ಮ ಮನೆಯಲ್ಲಿ ಇಟ್ಟು ಬರಲು ಇಷ್ಟು ತಡವಾಯಿತು ಅಷ್ಟೇ ಸಾರ್!'

ಬಿಗಿದುಕೊಂಡಿದ್ದ ಕಸ್ತೂರಿಯವರ ಮುಖ ನಿಧಾನವಾಗಿ ಸಡಿಲವಾಯಿತು. 'ಅಯ್ಯೋ ನಿಮ್ಮ! ಇಲ್ಲಿ ಸಹಿ ಹಾಕಿ ಸುಮ್ಮನೆ ಕ್ಲಾಸ್‌ಗೆ ಹೋಗಿ!' ಎಂದು ಆಜ್ಞಾಪಿಸಿದರು.

******



ಇಂತಹವು ಎಷ್ಟೋ ರಸಗುಳಿಗೆಗಳು ಈ ಬ್ರಹ್ಮಪುರಾಣದಲ್ಲಿ. ಕೊನೆಯಲ್ಲಿ ಹಂಪನಾ ಅವರು ನನಗೆ ತಿನ್ನಿಸಿದ ಒಂದು ಗುಳಿಗೆಯನ್ನು ಬ್ರಹ್ಮಪ್ಪನವರ ಹಾಸ್ಯ ಕೀರ್ತಿ ಪತಾಕೆ ಆಕಾಶದಲ್ಲಿ ಇನ್ನಷ್ಟು ಎತ್ತರದಲ್ಲಿ ಹಾರಾಡಲಿ ಎಂದು ಆಶಿಸುತ್ತಾ ಆ ಗುಳಿಗೆಗೆ ಇನ್ನಷ್ಟು ಸ್ವಾರಸ್ಯದ ಲೇಪ ಹಚ್ಚಿ ನಿರೂಪಿಸಿ ಈ ಪುರಾಣ ಪಾರಾಯಣವನ್ನು ಕೊನೆಗೊಳಿಸಬಹುದು:

ಒಮ್ಮೆ ದೆಹಲಿಯಲ್ಲಿ ಆಚಾರ್ಯ ವಿದ್ಯಾನಂದರ ಜೈನಧರ್ಮ ಪ್ರವಚನದ ಸಭೆ ಏರ್ಪಾಡಾಗಿತ್ತು. ಕನ್ನಡಿಗರಾಗಿದ್ದ ಆಚಾರ್ಯರು ಪ್ರವಚನಕ್ಕೆ ಮುನ್ನ ಅಲ್ಲಿದ್ದ

# ನವಿಲುಗರಿ

## ಪ್ರೇಯಸಿಯ ಮುಂದೆ ಪ್ರಿಯಕರನ ಕವಿತೆ



ಅಪ್ಪಿಕೊಳ್ಳುವ,ಲಲ್ಲೆಯಾಡುವ ಬದಲು
ಪ್ರೇಯಸಿಯ ಬಳಿ ಬಂದ ಪ್ರಿಯಕರ
ಓದಲಾರಂಭಿಸಿದ ಪ್ರೇಮ ಕವಿತೆಗಳ
ಕಿಸೆಯಿಂದ ಒಂದೊಂದಾಗಿ ತೆಗೆದು,
ವರ್ಣಿಸಿದ ವಿಧವಿಧವಾಗಿ
ಅವಳ ಸೌಂದರ್ಯ,ವೈಯಾರ,ಹಾವಭಾವ
ನಿವೇದಿಸಿದ ಆ ಮೂಲಕವೇ
ಅವಳ ಮೇಲಿನ ತನ್ನ ಅಮರ ಪ್ರೇಮ.

ಹೇಳಿದಳಾಕೆ:
ನೀನಿರುತ್ತ ನನ್ನೆದುರೇ
ಈ ಕವಿತೆ ,ಕಾವ್ಯದ ವಿವಿಧ ಅಲಂಕಾರ,ನಿಟ್ಟು
ಎಲ್ಲ ವ್ಯರ್ಥ.ಹಾಗೇ ಸಮಯವೂ.
ಕಳೆಯಲಾರ ಕಾಲವನು
ಒಬ್ಬ ನಿಜ ಪ್ರೇಮಿ. ಅಂದರೆ ಅರ್ಥ
ನಾನಲ್ಲ ನಿನ್ನ ನಿಜ ಪ್ರೇಯಸಿ.ಅವಳೇ ಬೇರೆ.
ಪ್ರೇಮಿಸುತಿರುವೆ ನೀನು
ಕೇವಲ ನಿನ್ನ ಭ್ರಮೆಯ.

ಚಿತ್ರ: ವಿಜಯಶ್ರೀ ಹಾಲಾಡಿ



ನನಗೀಗ ಬೇಕಿರುವುದು
ಕವಿತೆಯಲ್ಲ;ಪ್ರೇಮಜಲ.–ಅದನೆಲ್ಲೋ
ಬಚ್ಚಿಟ್ಟಿರುವೆ ನೀನು.
ನಾನಿಲ್ಲಿ;ನೀನೆಲ್ಲೋ ಬೇರೆಡೆಯಲ್ಲಿ.
ಪ್ರೀತಿಸಿದ್ದು ನೀನು ಕೇವಲ
ನಿನ್ನ ಮಾತ್ರ.ಅಪ್ಪಿಕೊಂಡಿರುವೆ ನಿನ್ನದೇ
ಭ್ರಮೆಗಳ ಹಾಗೂ ತೆವಲುಗಳ
ನನ್ನಲ್ಲಿ ಒಂದಾಗದೆ.

(ಮೂಲ :**ರೂಮಿ,** ಪರ್ಷಿಯನ್ ಸೂಫಿ ಕವಿ)

ಕನ್ನಡಕ್ಕೆ: **ಸುಬ್ರಾಯ ಚೊಕ್ಕಾಡಿ**

---

ಹಿಂದಿ ಜನಕ್ಕೆ ಕನ್ನಡದ ಮಹಿಮೆಯನ್ನು ವಿವರಿಸುವ ಅಭಿಲಾಷೆಯುಂಟಾಗಿ, ಸಮೀಪದಲ್ಲೇ ಆಸೀನರಾಗಿದ್ದ ಬ್ರಹ್ಮಪ್ಪನವರಿಗೆ, 'ಸುಲಿದ ಬಾಳೆಯ ಹಣ್ಣಿನಂದದಿ ಪದ್ಯದ ಮೂಲಕ ಕನ್ನಡದ ಮಹಿಮೆಯನ್ನು ಈ ಜನಕ್ಕೆ ವಿವರಿಸಿ ಬ್ರಹ್ಮಪ್ಪ' ಎಂದು ಅಪ್ಪಣೆ ಕೊಡಿಸಿದರು. ಗಾಬರಿಯಾದ ಬ್ರಹ್ಮಪ್ಪ, 'ಇಲ್ಲ ಸ್ವಾಮೀಜಿ ನನಗೆ ಅಷ್ಟು ಹಿಂದಿ ಬರುವುದಿಲ್ಲ' ಎಂದು ಹಿಂಜರಿದರು. ಆದರೆ ಆಚಾರ್ಯರು ಬಿಡದೆ, 'ನಿಮಗೆ ಎಷ್ಟು ಗೊತ್ತಿದೆಯೋ ಅಷ್ಟು ಹಿಂದಿಯಲ್ಲಿಯೇ ವಿವರಿಸಿ. ಈ ಜನ ಜಾಣರು, ಅರ್ಥ ಮಾಡಿಕೊಳ್ಳುತ್ತಾರೆ' ಎಂದು ಪ್ರೋತ್ಸಾಹಿಸಿದರು. ಇದರಿಂದ ಉತ್ತೇಜಿತರಾದ ಬ್ರಹ್ಮಪ್ಪ ಎದ್ದು ನಿಂತರು. ಎದುರಿಗೆ ಮೇಜಿನ ಮೇಲಿಟ್ಟಿದ್ದ ಬಾಳೆ ಹಣ್ಣಿನ ಚಿಪ್ಪೊಂದರಿಂದ ಒಂದು ಹಣ್ಣು ಕಿತ್ತು ಕನ್ನಡ ಪದ್ಯದ ಲಯಗಾರಿಕೆಗೆ ಅನ್ಯಾಯ ಮಾಡದಂತೆ ಎಚ್ಚರಿಕೆ ವಹಿಸಿ ಕನ್ನಡದ ಮಹಿಮಾಗಾಥೆಯನ್ನು ಶುರು ಮಾಡಿದರು: **'ಐಸಾ ಬಾಳೇ ಕಿ ಹಣ್ಣು ಉಠ್ಕೋ! ಇಸ್ಕಿ ಚಮಡಾ ಐಸೆ ನಿಕಾಲ್ಕೋ! ಬಾಯಿ ಮೆ ರಖ್ಖೋ.. ರುಚಿಕೋ ದೇಖೋ, ಹಾ ಸುಂದರ್ ಕನ್ನಡಾ... ಓ ಸುಂದರ್ ಕನ್ನಡಾ ಐಸೆ ಬೊಮ್ಡಾ ಭಜಾಕೋ!!'**

ಅಚಾರ್ಯರು ಸೇರಿದಂತೆ ಇಡೀ ಸಭೆ ಕನ್ನಡದ ಕೀರ್ತಿ ಪತಾಕೆ ಪಟಪಟನೆ ಎತ್ತರೆತ್ತರಕ್ಕೆ ಹಾರಿ ಹಾರಿ ಆಕಾಶದಲ್ಲಿ ಅಂತರ್ಧಾನವಾದದ್ದನ್ನು ಕಂಡು ದಿಗ್ಮೂಢವಾಗಿ ಕೂತಿತು.

---

### ನಮ್ಮ ಹತ್ತನೇ ವರ್ಷದ ಮೊದಲ ಸಂಚಿಕೆಗಾಗಿ

**ಮುಂದಿನ (ಫೆಬ್ರುವರಿ) ಸಂಚಿಕೆ ನಮ್ಮ ಹತ್ತನೇ ವರ್ಷದ ಮೊದಲ ಸಂಚಿಕೆಯಾಗಲಿದ್ದು ನಮ್ಮ ಓದುಗರು ತಮ್ಮ ಪತ್ರಿಕೆ ಓದಿನ ಅನುಭವದ ಬಗ್ಗೆ ಚುಟುಕಾಗಿ ಎರಡರಿಂದ ಮೂರು ಸಾಲುಗಳಲ್ಲಿ ತಮ್ಮ ಅಭಿಪ್ರಾಯವನ್ನು ಬರೆದು ಕಳಿಸಿ ಪತ್ರಿಕೆಗೆ ಶುಭ ಹಾರೈಸಬಹುದು–ಸಂ.**

೪ನೇ ಪುಟದಿಂದ}

ಸಂಪಾದಕೀಯ, ಸರಿಯಾಗಿ ನಿರ್ವಹಿಸದಿದ್ದಲ್ಲಿ, ಇನ್ನು ಮುಂದೆ ತರಬೇಕಾಗಿರುವ ಸುಧಾರಣೆಗಳಿಗೂ ಇದರಿಂದ ತೊಂದರೆಯಾದೀತು ಎಂದು ಎಚ್ಚರಿಸುತ್ತದೆ! ಇನ್ನು 'ಟೈಮ್ಸ್ ಆಫ್ ಇಂಡಿಯಾ'ದ ಪ್ರಕಾರ "ಕೇಂದ್ರದ ಸುಧಾರಣಾ ಪ್ಯಾಕೇಜ್, ಜಮೀನು ವ್ಯಾಪಾರದಲ್ಲಿ ಖಾಸಗಿ ಸಹಭಾಗಿತ್ವವನ್ನು ಉತ್ತಮಪಡಿಸುವ ಪ್ರಾಮಾಣಿಕ ಪ್ರಯತ್ನ"; ಕೃಷಿ ಆದಾಯವನ್ನು ದುಪ್ಪಟ್ಟು ಮಾಡುವುದು ಈ ಸುಧಾರಣೆಗಳ ಯಶಸ್ಸನ್ನು ಅವಲಂಬಿಸಿದೆ. ಈ ಸುಧಾರಣೆಗಳು ಮಾತ್ರವೇ ಭಾರತದ ಅಹಾರ ಮಾರುಕಟ್ಟೆಯಲ್ಲಿ ಕೆಡುಕುಂಟುಮಾಡುತ್ತಿರುವ ದೋಷಗಳನ್ನು ನಿವಾರಿಸಬಲ್ಲವು. ಹಾಗಾಗಿ, ಬೆಂಬಲ ಬೆಲೆಯ ಯುಗ ಮುಗಿಯಿತೆಂಬ ರೈತರಲ್ಲಿನ ತಪ್ಪು ಅಭಿಪ್ರಾಯವನ್ನು ನಿವಾರಿಸಿ ಈ ಪ್ರತಿಭಟನೆಯನ್ನು ಅಂತ್ಯಗೊಳಿಸುವುದು ಸರ್ಕಾರದ ಆದ್ಯ ಕರ್ತವ್ಯ. 'ಹಿಂದುಸ್ಥಾನ್ ಟೈಮ್ಸ್', ರೈತರು ತೀವ್ರ–ಅಸ್ಮಿತೆಯ ಸಮಸ್ಯೆಯ ಜೊತೆ ಸರಸವಾಡುತ್ತಿದ್ದಾರೆ, ತೀವ್ರವಾದಿಗಳ ಜೊತೆ ಶಾಮೀಲಾಗಿದ್ದಾರೆಂದು ಆರೋಪಿಸುತ್ತದೆ.

ರೈತರು ಅರಿವಿಲ್ಲದೆ ಯಾವ ಪಿತೂರಿಕೋರರ ಗುಂಪನ್ನು ಪ್ರತಿನಿಧಿಸುತ್ತಿದ್ದಾರೆ, ಯಾರ ಚಿತಾವಣೆಯಿಂದ ಹೋರಾಟ ಮಾಡುತ್ತಿದ್ದಾರೆ ಎಂಬುದು ತಿಳಿಯದೆ ಸರ್ಕಾರವೇ ತಿಣುಕಾಡುತ್ತಿರಬಹುದು. ಆದರೆ ಈ ಸಂಪಾದಕೀಯಗಳ ಬರಹಗಾರರಿಗೆ ರೈತರು ಯಾರನ್ನು ಪ್ರತಿನಿಧಿಸುತ್ತಿದ್ದಾರೆ ಎಂಬ ಬಗ್ಗೆ ಬಹಳ ಸ್ಪಷ್ಟತೆ ಇದೆ. ತಮ್ಮನ್ನು ಪೊರೆಯುತ್ತಿರುವ ಕಾರ್ಪೊರೇಟ್ ಕೈಗಳನ್ನು ಅವು ಕಚ್ಚಲಾರವು.

ಹಿಂದೆಂದೂ ಕಂಡಿರದ ರೀತಿಯ ಆತುರದಲ್ಲಿ ಕಾರ್ಮಿಕ ಕಾನೂನುಗಳನ್ನು ಮಾರ್ಪಾಡು ಮಾಡಲಾಯಿತು. ಕರೋನಾ ಪಿಡುಗು ಅತಿ ಹೆಚ್ಚು ಇರುವಾಗಲೇ ಕೃಷಿ ಕಾಯ್ದೆಗಳನ್ನು ಹೇರಲಾಗುತ್ತಿದೆ. ಈ ಕಾಯ್ದೆಗಳನ್ನು ಹೇರಲು ಸರಿಯಾದ ಸಮಯ ಎಂದು ಬಿಜೆಪಿ, ಸರ್ಕಾರಕ್ಕೆ ಅನಿಸಿದ್ದು ಏಕೆ? ಕರೋನಾ ಪಿಡುಗಿನಿಂದ ರೈತರು, ಕಾರ್ಮಿಕರು ಕಂಗೆಟ್ಟಿರುವಾಗ ಈ ಕಾಯ್ದೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಅವರು ವಿರೋಧಿಸಲಾರರು ಎಂಬುದೇ ಅದರ ಲೆಕ್ಕಾಚಾರ. ಕಾಯ್ದೆಗಳು ಅಸಾಂವಿಧಾನಿಕವಾಗಿರುವ ಮುಖ್ಯ ಪ್ರಶ್ನೆಯ ಬಗ್ಗೆ ಹಾರಿಕೆಯ, ಅಪ್ರಾಮಾಣಿಕ ಉತ್ತರ ನೀಡುವ ಕೇಂದ್ರ ಸರ್ಕಾರವು ತನಗೆ ಹಕ್ಕೇ ಇಲ್ಲದ ರಾಜ್ಯ ಪಟ್ಟಿಯಲ್ಲಿ ಬರುವ ವಿಚಾರಗಳ ಮೇಲೆ ಕಾಯ್ದೆಗಳನ್ನು ಮಾಡಿ ದಬ್ಬಾಳಿಕೆ ನಡೆಸುತ್ತಿದೆ.

ಸರ್ಕಾರದ ಪ್ರಸ್ತಾವಗಳನ್ನು ರೈತರು ಅಷ್ಟೊಂದು ತಿರಸ್ಕಾರದಿಂದ ಏಕೆ ವಿರೋಧಿಸುತ್ತಿದ್ದಾರೆ ಎಂಬ ಬಗ್ಗೆ ಯಾವ ಚರ್ಚೆಯೂ ಇಲ್ಲ. ದೇಶದಾದ್ಯಂತ ರೈತರು ತಿಳಿದಿರುವ, ಜಾರಿಯಾಗಬೇಕೆಂದು ಒತ್ತಾಯಿಸುವ ಒಂದು ಆಯೋಗದ ವರದಿ ಇದ್ದರೆ ಅದು ಸ್ವಾಮಿನಾಥನ್ ವರದಿ. ಕಾಂಗ್ರೆಸ್ ಮತ್ತು ಬಿಜೆಪಿ, ಎರಡೂ ಪಕ್ಷಗಳು ಈ ವರದಿಯನ್ನು ಜಾರಿಗೊಳಿಸುವ ಆಶ್ವಾಸನೆ ನೀಡುತ್ತಲೇ ಅದನ್ನು ಮುಚ್ಚಿ ಹಾಕಲು ಪ್ರಯತ್ನಿಸಿವೆ. ೨೦೧೮ರ ನವಂಬರ್ ನಲ್ಲಿ ಸಂಸತ್ತಿನ ಬಳಿ ಒಂದು ಲಕ್ಷಕ್ಕೂ ಹೆಚ್ಚು ರೈತರು ಸೇರಿ ಸ್ವಾಮಿನಾಥನ್ ವರದಿಯ ಮುಖ್ಯ ಅಂಶಗಳನ್ನು ಜಾರಿ ಮಾಡಬೇಕೆಂದು, ಸಾಲ ಮನ್ನಾ ಮಾಡಬೇಕೆಂದು ಮತ್ತು ಕನಿಷ್ಟ ಬೆಂಬಲ ಬೆಲೆ ಖಾತರಿ ಬೇಕೆಂದು ಒತ್ತಾಯಿಸಿದ್ದರು, ಒಂದು ವಿಶೇಷ ಸಂಸತ್ ಅಧಿವೇಶನ ಕರೆದು ರೈತರ ಸಮಸ್ಯೆಗಳನ್ನು ಚರ್ಚಿಸಬೇಕೆಂದು ಒತ್ತಾಯಿಸಿದ್ದರು. ಈ ಯಾವ ಬೇಡಿಕೆಗಳೊಂದಿಗೆ ದಿಲ್ಲಿ ದರ್ಬಾರ್‌ಗೆ ರೈತರು ಈಗ ಸವಾಲ್ ಹಾಕುತ್ತಿದ್ದಾರೋ ಅವುಗಳಲ್ಲೂ ಒಳಗೊಂಡಿದ್ದು ಅವೆಲ್ಲವೂ ತುರ್ತು ಗಮನ ನೀಡಬೇಕಾದಂತಹವು. ಅಂದು ನೆರೆದಿದ್ದ ರೈತರು ೨೨ ರಾಜ್ಯಗಳಿಂದ ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳಿಂದ ಬಂದವರು. ಕೇವಲ ಪಂಜಾಬಿಗಳಲ್ಲ.

ಈ ಹೋರಾಟ ನಿರತ ಸಮೂಹದ ರೈತರು 'ಮುಖ್ಯವಾಹಿನಿ' ಅವಗಣನೆಯ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದಾರೆ, ಆಹಾರದ ಮೇಲೆ ಕಾರ್ಪೊರೇಟ್ ನಿಯಂತ್ರಣ ಬಂದರೆ ದೇಶಕ್ಕೆ ಏನಾಗಬಹುದು ಎಂಬುದರ ಬಗ್ಗೆ ಹೇಳುತ್ತಿದ್ದಾರೆ. ಅವರಲ್ಲಿ ಎಷ್ಟೋ ಜನಕ್ಕೆ ತಿಳಿದಿದೆ, ತಾವು ಹೋರಾಡುತ್ತಿರುವುದು ಈ ಮೂರು ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದಕ್ಕಾಗಿ, ತಮಗಾಗಿ, ಪಂಜಾಬ್‌ಗಾಗಿ ಮಾತ್ರವಲ್ಲ ಎಂದು. ಈ ಕಾಯ್ದೆಗಳನ್ನು ಹಿಂತೆಗೆದುಕೊಂಡರೂ ನಾವು ಈ ಹಿಂದೆ ಇದ್ದ ಸ್ಥಿತಿಗೆ ತಲುಪುತ್ತೇವಷ್ಟೇ, ಅದೇನೂ ಉತ್ತಮವಾದ ಸ್ಥಿತಿಯಲ್ಲ. ಆದರೆ ಅದು ಕೃಷಿ ಸಂಕಷ್ಟಕ್ಕೆ ಈಗ ಆಗುತ್ತಿರುವ ಹೊಸ ಸೇರ್ಪಡೆಯನ್ನು ತುಸು ಕಡಿಮೆ ಮಾಡಬಹುದು, ನಿಧಾನಗೊಳಿಸಬಹುದಷ್ಟೇ. ಮುಖ್ಯವಾಹಿನಿ ಮಾಧ್ಯಮಗಳಂತಲ್ಲದೆ ಈ ಕಾಯ್ದೆಗಳು ನಾಗರೀಕರಿಗೆ ಇರುವ ಕಾನೂನಿನ ಪರಿಹಾರದ ಸಾಧ್ಯತೆಗಳನ್ನೇ ನಾಶಮಾಡಿ ನಮ್ಮ ಹಕ್ಕುಗಳನ್ನು ತಿಂದು ಹಾಕುತ್ತಿರುವುದನ್ನು ಈ ರೈತರು ಕಾಣಬಲ್ಲವರಾಗಿದ್ದಾರೆ. ಆದರೆ ಅದನ್ನು ಅವರು ಸ್ಪಷ್ಟ ಮಾತುಗಳಲ್ಲಿ ಹೇಳದಿರಬಹುದು. ಅಲ್ಲಿ ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಚನೆಯ ರಕ್ಷಣೆ ಕೂಡ ಇದೆ ಎಂಬುದನ್ನು ನಾವು ಅರಿಯಬೇಕು.



(ಲೇಖಕರು ಖ್ಯಾತ ಎಡಪಂಥಿಯ ಚಿಂತಕರು ಮತ್ತು ನಮ್ಮ ಗ್ರಾಮೀಣ ಆರ್ಥಿಕತೆ ಕುರಿತ ಪರಿಣತ ವಿಶ್ಲೇಷಕರು)

(ಕೃಪೆ: ಜನತಾ, ೨೩. ೧೨. ೨೦೨೦

ಕನ್ನಡಕ್ಕೆ: ಎಂ. ರಾಜು)

೫ನೇ ಪುಟದಿಂದ)

ಸ್ಥಾನ ಕುಸಿದರೆ, ಆರ್ಥಿಕ ಅಭಿವೃದ್ಧಿಯ ದರವೂ ಕುಸಿಯುತ್ತದೆ ಎನ್ನುವುದು ತಿಳಿಯುತ್ತದೆ.

ನಮ್ಮ ಆರ್ಥಿಕತೆಯ ಇತ್ತೀಚಿನ ನಿರ್ಣಾಯಕ ಹಿಂಜರಿತಕ್ಕೆ ಮೂಲ ಕಾರಣವಾದ ಮೋದಿಯವರ ನೋಟು ರದ್ದತಿಯ ಏಕ ವ್ಯಕ್ತಿ ನಿರ್ಧಾರದ ಕುರಿತು ಮುಕ್ತ ಚರ್ಚೆಯಾಗಿದ್ದರೆ, ಸ್ವಲ್ಪ ಕಡಿಮೆ ಹಾನಿಕರವಾದ ಪರಿಣಾಮವಾಗುತ್ತಿತ್ತೇನೋ. ಅವರು ಭಾರತದ ಆರ್ಥಿಕತೆಯ ಆವೇಗವನ್ನು ಬಲವಾಗಿ ತಡೆದರು. ಈಗ ನಾವು ಅದನ್ನು ಸರಿದೂಗಿಸಲು ಪ್ರಯತ್ನಿಸುತ್ತಿದ್ದೇವೆ. ಹಾಗಾದರೆ ಒಳ್ಳೆಯದೇನೂ ಆಗುತ್ತಿಲ್ಲ ಎಂದು ಹೇಳುತ್ತಿಲ್ಲ. ಮೋದಿ ಸರ್ಕಾರ ದಿವಾಳಿತನದ ಕಾನೂನು, ಜಿಎಸ್‌ಟಿ, ಮತ್ತಿತರ ವಿಷಯಗಳಲ್ಲಿ ಮತ್ತು ಕರೋನಾ ಬಿಕ್ಕಟ್ಟಿನ ಪ್ರಯೋಜನ ಪಡೆದು ಕಾರ್ಮಿಕ ಮತ್ತು ಕೃಷಿ ಸುಧಾರಣೆಗಳನ್ನು ಜಾರುಗೆ ತಂದಿದೆ. ಇದರ ಪರಿಣಾಮಗಳನ್ನು ಕಾದು ನೋಡಬೇಕಾಗಿದೆಯಾದರೂ ಈ ಸುಧಾರಣೆಗಳ ಮೌಲಿಕ ಪ್ರಯೋಜನವನ್ನು ಪಡೆಯಲು ರಾಜಕೀಯ ಆರ್ಥಿಕತೆಯ ಬಗೆಗಿನ ತನ್ನ ಧೋರಣೆ–ಮಾರ್ಗವನ್ನು ಸರ್ಕಾರ ಬದಲಾಯಿಸಿಕೊಳ್ಳಬೇಕಾಗುತ್ತದೆ. ಇಂದು ಜನತೆ ಆರ್ಥಿಕ ಮಾನದಂಡಗಳನ್ನು ನಿರ್ಲಕ್ಷಿಸಿ ಮೋದಿಯವರಿಗೆ ಮತ ಹಾಕಲು ಚಾರಿತ್ರಕವಾದ ಹಲವು ಕಾರಣಗಳಿರಬಹುದು. ಆದರೆ ಪರಿಸ್ಥಿತಿ ಹೀಗೇ ಇರಲು ಸಾಧ್ಯವಿಲ್ಲ.. ಜಾಗತಿಕ ಪರಿಪ್ರೇಕ್ಷ್ಯವೂ ಬದಲಾಗುತ್ತಾ ಒತ್ತಡಗಳನ್ನು ಹೇರುತ್ತದೆ.



(ಲೇಖಕರು ಹಿರಿಯ ಆಂಗ್ಲ ಪತ್ರಕರ್ತರು ಮತ್ತು ಅಂಕಣಕಾರರು)

(ಕೃಪೆ: ದ ಪ್ರಿಂಟ್, ನ್ಯಾಷನಲ್ ಇಂಟೆರೆಸ್ಟ ಅಂಕಣ((೨೦.೧೨. ೨೦೨೦) ಸಂಗ್ರಹಾನುವಾದ: ಕೆ. ಪದ್ಮಾಕ್ಷಿ)

---

೭ನೇ ಪುಟದಿಂದ)

ಊಹಿಸಲೂ ಇಲ್ಲ. ಈಗ ಸಂವಿಧಾನಕ್ಕೆ ಅಪಚಾರವಾಗುವಂತ ರಾಜಕೀಯ ಸೂತ್ರಗನ್ನು ರೂಪಿಸುವವರು ಸಂವಿಧಾನ ನಿರ್ಮಾತೃಗಳು ಅವರ ಮೇಲೆ ಇರಿಸಿದ್ದ ನಂಬಿಕೆಗೆ ದ್ರೋಹ ಎಸಗುತ್ತಿದ್ದಾರೆ. ನಮ್ಮಂತೆಯೇ ಇರುವ ಅಥವಾ ನಮಗಿಂತ ಉತ್ತಮರಾದವರು ಮುಂದಿನ ತಲೆಮಾರಿಗಳಲ್ಲಿ ಹುಟ್ಟಬಹುದು ಅಂತ ಸಂವಿಧಾನ ನಿರ್ಮಾತೃಗಳು ಅಂದುಕೊಂಡಿದ್ದರು. ಅದು ಬಹುಮಟ್ಟಿಗೆ ಹುಸಿಯಾಗಿದೆ.

ಅಂಬೇಡ್ಕರ್ ಆಗಲೇ ಹೇಳಿದ್ದ ಹಾಗೆ ಸಂವಿಧಾನ ಉಳಿಯುವುದು ಅದನ್ನು ಬಳಸಿಕೊಳ್ಳುವವರ ಒಳ್ಳೆಯತನದ ಆಧಾರದಲ್ಲಿ. ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಅದನ್ನು ಬಳಸುವವರು ಕೆಟ್ಟುಹೋದರೆ ಯಾವ ಸಂವಿಧಾನವೂ ಉಳಿಯುವುದಿಲ್ಲ, ಸಂವಿಧಾನಕ್ಕೆ ದೇಶವನ್ನು ಉಳಿಸುವುದಕ್ಕೂ ಆಗುವುದಿಲ್ಲ. ಸಂವಿಧಾನವನ್ನು ವಿಪರೀತವಾಗಿ ಆರಾಧಿಸುವವರು ಮತ್ತು ಸಂವಿಧಾನದ ಮೇಲೆ ನಡೆಯುತ್ತಿರುವ ಎಲ್ಲಾ ರೀತಿಯ ಸವಾರಿಗಳನ್ನೂ ನೋಡಿ ಮೌನ ವಹಿಸುವವರು ಅಂಬೇಡ್ಕರ್ ಅವರ ಈ ಮಾತುಗಳನ್ನು ನೆನಪಿಸಿಕೊಳ್ಳಬೇಕು.

**ಬಲಿಷ್ಠ ರಾಜ್ಯಗಳ ಅಗತ್ಯವೇಕೆ?**

ಚರಿತ್ರೆಯ ಯಾವುದೋ ಒಂದು ಕಾಲ ಘಟ್ಟದಲ್ಲಿ ನಿಂತು ಭವಿಷ್ಯದ ಎಲ್ಲಾ ಅಗತ್ಯಗಳನ್ನು, ಕಾಲದ ಆಳದಲ್ಲಿ ಹುದುಗಿರಬಹುದಾದ ಎಲ್ಲಾ ಸವಾಲುಗಳನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಆದ ಕಾರಣ ಒಂದು ದೇಶದ ಚರಿತ್ರೆಯ ಒಂದು ಘಟ್ಟದಲ್ಲಿ ನಿರ್ಮಾಣವಾಗುವ ಸಂವಿಧಾನದಲ್ಲಿ ಕೆಲ ಮೌನಗಳು, ಕೆಲ ಅಸಮತೋಲನಗಳು, ಕೆಲ ವಿರೋಧಾಭಾಸಗಳೆಲ್ಲಾ ಸೇರಿ ಹೋಗುವುದು ಸಹಜ. ಸಂವಿಧಾನ ಪ್ರತಿಪಾದಿಸುವ ಮೌಲ್ಯಗಳು ಶಾಶ್ವತ. ಹಾಗೆಂದು ಅದು ಮುಂದಿಡುವ ಆಡಳಿತಕ್ಕೆ ಸಂಬಂಧಿಸಿದ ಪ್ರಾಯೋಗಿಕ ಸೂತ್ರಗಳು ಕಾಲಾತೀತವೇನೂ ಅಲ್ಲ. ಅವುಗಳನ್ನು ಸರಿಪಡಿಸಿಕೊಳ್ಳದೆ ಇದ್ದರೆ ಅವುಗಳು ಸಂವಿಧಾನಕ್ಕೆ ಹೊರೆಯಾಗುವ ಸಾಧ್ಯತೆಯೇ ಹೆಚ್ಚು. ಆದುದರಿಂದ ಭಾರತದ ಸಂವಿಧಾನದಲ್ಲೂ ಕೂಡಾ ಇರಬಹುದಾದ ಮೌನಗಳನ್ನು, ವಿರೋಧಾಭಾಸಗಳನ್ನು ಮತ್ತು ಅಸಮತೋಲನಗಳನ್ನು ಒಮ್ಮೆ ನಿರ್ಭಾವುಕವಾದ ರೀತಿಯಲ್ಲಿ ಪರಿಶೀಲಿಸುವ ಅಗತ್ಯವಿದೆ. ಅದರಲ್ಲಿ ಬಹುಮುಖ್ಯವಾಗಿ ಕಾಣಿಸುವುದು ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದ ಸಂವಿಧಾನದ ವಿರೋಧಾಭಾಸ. ಇದನ್ನು ಸರಿಪಡಿಸಿಕೊಳ್ಳಬೇಕಾಗಿರುವ ಅಗತ್ಯ ಕಾಣಿಸಿಕೊಂಡಿರುವುದು ಕೇವಲ ರಾಜ್ಯಗಳ ಸ್ವಾಯತ್ತತೆಯನ್ನು ಮತ್ತು ಸ್ವಾಭಿಮಾನವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಮಾತ್ರವಲ್ಲ. ಸ್ವತಃ ಸಂವಿಧಾನವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದಲೂ ಇದು ಅಗತ್ಯ. ಯಾಕೆಂದರೆ, ಕೇಂದ್ರದಲ್ಲಿ ಅಧಿಕಾರ ನಡೆಸುವವರು ಸಂವಿಧಾನದ ಮೇಲೆಯೇ ಸವಾರಿ ಮಾಡಲು ಹೊರಟರೆ ಅದಕ್ಕೆ ನಿಯಂತ್ರಣ ಹೇರುವುದಕ್ಕೋಸ್ಕರ ಕೂಡಾ ದೇಶಕ್ಕೆ ಬಲಿಷ್ಠ ರಾಜ್ಯಗಳ ಅಗತ್ಯವಿದೆ.



(ಲೇಖಕರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರು ಮತ್ತು ಖ್ಯಾತ ಅಂಕಣಕಾರರು)

ಜನವರಿ೧೨, ಸ್ವಾಮಿ ವಿವೇಕಾನಂದರ ಜನ್ಮದಿನ

ಧರ್ಮವಿಚಾರ ಪುಟ

# ವಿವೇಕಾನಂದವಾಣಿ



ವಿಜ್ಞಾನಕ್ಕೂ, ಸಾಮಾನ್ಯ ಜ್ಞಾನಕ್ಕೂ ಇರುವ ಭೇದವೇನು? ಏನಾದರೂ ಅಪೂರ್ವ ಘಟನೆ ಸಂಭವಿಸಿದಾಗ ಹಳ್ಳಿಯವನೊಬ್ಬನನ್ನು ಅದಕ್ಕೆ ಕಾರಣವೇನು ಎಂದು ಕೇಳಿದರೆ ಅವನು ಯಾವುದಾದರೂ ಪಿಶಾಚಿಯ ಹೆಸರು ಹೇಳುತ್ತಾನೆ. ಏಕೆಂದರೆ ಘಟನೆಗಳ ಅಥವಾ ಕಾರ್ಯಗಳ ಹೊರಗೆ ಕಾರಣಗಳನ್ನು ಹುಡುಕುವುದು ಅಜ್ಞಾನದ ಸ್ವಭಾವ. ಕಲ್ಲು ಕೆಳಗೆ ಬಿದ್ದರೆ ಯಾವುದೋ ಭೂತ ಎಸೆಯಿತೆಂದು ಭಾವಿಸುತ್ತಾನೆ; ಆದರೆ ವಿಜ್ಞಾನಿ ಭೂಮಿಯಲ್ಲಿರುವ ಆಕರ್ಷಣ ಶಕ್ತಿಯೇ ಅದಕ್ಕೆ ಕಾರಣವಾಯಿತೆಂದು ತಿಳಿಯುತ್ತಾನೆ.

ಮತಗಳಿಗೆ ಮತ್ತು ವಿಜ್ಞಾನಿಗಳಿಗೆ ನಡೆಯುವ ದ್ವಂದ್ವ ಯುದ್ಧಕ್ಕೆ ಈ ಭಿನ್ನ ದೃಷ್ಟಿಯೇ ಕಾರಣವಾಗಿದೆ. ಮತಗಳೆಲ್ಲ ಪ್ರಾಕೃತ ಘಟನೆಗಳಿಗೆ ಅಪ್ರಾಕೃತ ಅಥವಾ ಅತಿಪ್ರಾಕೃತ ಕಾರಣಗಳನ್ನು ಉಪಪತ್ತಿಯಾಗಿ ಒಡ್ಡಿವೆ. ಅವು ಸೂರ್ಯ ಚಂದ್ರ ಗಾಳಿ ಬೆಂಕಿ ಎಲ್ಲವುಗಳಲ್ಲಿಯೂ ಒಂದೊಂದು ದೇವತೆ ಕಲ್ಪಿಸಿವೆ. ಎಂದರೆ ಹೆಚ್ಚು ಕಡಿಮೆ ಪ್ರಕೃತಿಯ ಜೀವನದಲ್ಲಿ ಪ್ರಾಪ್ತವಾಗುವ ಒಂದೊಂದು ವಿಕೃತಿ–ವ್ಯತ್ಯಾಸಗಳಿಗೂ ಒಂದೊಂದು ಉದ್ದೇಶವೇನೋ ಕಾರಣಾನ್ವೇಷಣೆ; ಬಹಿಃ ಕಾರಣಾನ್ವೇಷಣೆ. ಆದರೆ ವಿಜ್ಞಾನವೆಂದರೆ ವಸ್ತುವಿನ ಅಥವಾ ಘಟನೆಯ ಒಳಗಡೆಯೇ ಎಂದರೆ ಸ್ವಭಾವದಲ್ಲಿಯೇ ಕಾರಣವನ್ನು ಹುಡುಕುವುದು. ವಿಜ್ಞಾನಶಾಸ್ತ್ರವು ಮುಂದುವರಿದ ಹಾಗೆಲ್ಲಾ ಹೆಜ್ಜೆ ಹೆಜ್ಜೆಗೂ ವಸ್ತುಗಳಿಗೆ ಮತ್ತು ಘಟನೆಗಳಿಗೆ ಸ್ವಾಭಾವಿಕವಾದ ಕಾರಣಗಳನ್ನು ಹುಡುಕಿ ಹುಡುಕಿ ಹೇಳುತ್ತಿದೆ. ಅದ್ವೈತವೊಂದೇ ವೈಜ್ಞಾನಿಕ ವಿಧಾನವನ್ನು ಅಂಜದೆ ಗ್ರಹಿಸಬಲ್ಲುದು. ಏಕೆಂದರೆ ಅದ್ವೈತ ಮತ ಸರ್ವಶ್ರೇಷ್ಠವಾದ ವೈಜ್ಞಾನಿಕ ಮತ. ಅದು ಹೇಳುತ್ತದೆ: ಈ ಜಗತ್ತು ವಿಶ್ವದ ಹೊರಗಿರುವ ಯಾವ ದೇವರಿಂದಾಗಲೀ, ಅಥವಾ ಯಾವ ಅತಿ ಪ್ರಾಕೃತ ಭೂತದಿಂದಾಗಲೀ ಸೃಷ್ಟಿಯಾಗಿಲ್ಲ. ಇದು ಸ್ವಯಂ ಸೃಷ್ಟಿಯಾಗುತ್ತದೆ. ಸ್ವಯಂ ಲಯವಾಗುತ್ತದೆ. ಸ್ವಯಂ ಪ್ರಕಾಶಿತವಾಗುತ್ತದೆ. ಇದು ಅನಂತವಾದುದು. ಇದು ಪರಬ್ರಹ್ಮ, "ತತ್ವ ಮಸಿ" □"ನೀನೇ ಅದು". ಇದೇ ಅದ್ವೈತಿಯ ಸಿದ್ಧಾಂತ. ವಿಚಾರಿಸಿ ನೋಡಿ, ಇದೊಂದೇ ನಿಜವಾದ ವೈಜ್ಞಾನಿಕ ಮತವಾಗಲು ಅರ್ಹವಾಗಿದೆ. ಈ ಭರತಖಂಡದಲ್ಲಿ ಅರ್ಧ ವಿದ್ಯಾವಂತರಾದವರಲ್ಲಿ ನಡೆಯುತ್ತಿರುವ ವಿಜ್ಞಾನ ಶಾಸ್ತ್ರದ ಹರಟೆಯನ್ನು ಕೇಳಿದರೆ ಪ್ರತಿದಿನವೂ ನನ್ನ ಕಿವಿಗೆ ಬೀಳುತ್ತಿರುವ ವಿಚಾರವಾದ ಯುಕ್ತಿವಾದ ಮೊದಲಾದವುಗಳ ಗಲಭೆಯನ್ನು ಕೇಳಿದರೆ, ನೀವೆಲ್ಲರೂ ಧೈರ್ಯದಿಂದಲೂ ಸಾಹಸದಿಂದಲೂ ಅದ್ವೈತಿಗಳಾಗಿ ಬಹುಜನರ ಹಿತಕ್ಕಾಗಿಯೂ ಆ ತತ್ತ್ವಗಳನ್ನು ಜನರಿಗೆ ಅಂಜದೆ ಬೋಧಿಸುತ್ತೀರೆಂದು ಹಾರೈಸುತೇನೆ. ಹಾಗೆ ಮಾಡದೇ ಇದ್ದರೆ ನೀವೆಲ್ಲರೂ ಹೇಡಿಗಳೆಂದು ಭಾವಿಸುತ್ತೇನೆ. ನಿಮ್ಮ ಹೇಡಿತನವನ್ನು ಬಿಡಲಾಗದಿದ್ದರೆ, ಕ್ಲೈಬ್ಯವೇ ನಿಮಗೆ ನೆರವಾಗುವ ಪಕ್ಷದಲ್ಲಿ ಇತರರಿಗೂ ಅದೇ ಸ್ವಾತಂತ್ರ್ಯವನ್ನು ಬಿಟ್ಟುಕೊಡಿ. ಬಡ ಮೂರ್ತಿ ಪೂಜಕನನ್ನು ಏಕೆ ಭಂಗಿಸುತ್ತೀರಿ? ಅವನನ್ನೇಕೆ ಪಿಶಾಚಿ ಎಂದು ಕರೆಯುತ್ತೀರಿ? ನಿಮಗಿಂತಲೂ ಭಿನ್ನಾಭಿಪ್ರಾಯ ಉಳ್ಳವರಿಗೆಲ್ಲ ನಿಮ್ಮ ಅಭಿಪ್ರಾಯವನ್ನೇ ಬಲಾತ್ಕಾರದಿಂದ ಬೋಧಿಸುತ್ತ ಹೋಗಬೇಡಿ. ವಿದ್ಯಾರ್ಜನೆ ಮಾಡಿರುವ ನೀವೇ ಹೇಡಿಗಳಾಗಿರುವಾಗ, ನೀವೇ ಸಮಾಜಕ್ಕೆ ಹೆದರಿ ನಡೆಯುವಾಗ, ನಿಮ್ಮ ಪುರಾತನ ಮೌಢ್ಯಗಳು ನಿಮ್ಮನ್ನೇ ಬೆದರಿಸುತ್ತಿರುವಾಗ, ಏನೂ ತಿಳಿಯದ ಬಡ ಜನರನ್ನು ಎಷ್ಟರ ಮಟ್ಟಿಗೆ ಬೆದರಿಸುತ್ತಿರಬೇಕು? ಇನ್ನೆಷ್ಟರ ಮಟ್ಟಿಗೆ ಬಂಧಿಸಿರಬೇಕು? ಆದಕಾರಣ ಇತರರ ಮೇಲೆ ಕರುಣೆ ಇರಲಿ. ದೇವರ ದಯೆಯಿಂದ ನಾಳೆಯೇ ಎಲ್ಲರೂ ಅದ್ವೈತಿಗಳಾದರೆ! ಮಾತಿನಲ್ಲಲ್ಲ, ಕಾರ್ಯದಲ್ಲಿ. ಆದರೆ ಅದು ಸಾಧ್ಯವಿಲ್ಲ. ಆದಕಾರಣ ದ್ವಿತೀಯೋತ್ತಮವಾದುದನ್ನು ಕೈಗೊಳ್ಳುವ;

****

" ಎಲೈ ಅರ್ಜುನ, ಯಾವಾಗ ಧರ್ಮದ ಅವನತಿಯಾಗುವುದೋ, ಅಧರ್ಮದ ಉನ್ನತಿಯಾಗುವುದೋ, ಆಗ ನಾನು ಅವತಾರ ಮಾಡುತ್ತೇನೆ. "

ಇದರ ಪರಿಣಾಮ ಏನಾಯಿತು? ಸನಾತನ ತತ್ತ್ವ ಸ್ವತಃಸಿದ್ಧವಾದುದು. ಅದು ಯಾವ ಯುಕ್ತಿಯ ಆಸರೆಯ ಮೇಲೂ ನಿಂತಿಲ್ಲ. ಅಥವಾ ಎಷ್ಟೇ ಮಹಾಪುರುಷರಾದ ಋಷಿಗಳಾಗಲೀ, ಮಹಿಮಾಸಂಪನ್ನ ಅವತಾರಗಳಾಗಲೀ ಅವರ ಅಧಿಕಾರದ ಮೇಲೂ ನಿಂತಿಲ್ಲ. ಇದು ಭಾರತ ಧರ್ಮದ ಒಂದು ವೈಶಿಷ್ಟ್ಯ. ಆದಕಾರಣವೇ ವೇದಾಂತಕ್ಕೆ ಮಾತ್ರ ವಿಶ್ವಧರ್ಮವಾಗುವ ಹಕ್ಕಿದೆ. ಇದಾಗಲೇ ಪ್ರಪಂಚದಲ್ಲಿ ಅದು ವಿಶ್ವಧರ್ಮವಾಗಿದೆ. ಏತಕ್ಕೆಂದರೆ ಇದು ವ್ಯಕ್ತಿಯನ್ನು ಬೋಧಿಸುವುದಿಲ್ಲ. ತತ್ತ್ವವನ್ನು ಬೋಧಿಸುವುದು. ಯಾವುದಾದರೂ ಒಂದು ವ್ಯಕ್ತಿಯ ಮೇಲೆ ನಿಂತ ಧರ್ಮವನ್ನು ಪ್ರಪಂಚದಲ್ಲಿರುವವರೆಲ್ಲ ಸಾರ್ವತ್ರಿಕವಾಗಿ ಸ್ವೀಕರಿಸಲಾರರು. ನಮ್ಮ ದೇಶದಲ್ಲೇ ಎಷ್ಟೋ ಪ್ರಖ್ಯಾತ ವ್ಯಕ್ತಿಗಳಿರುವರು. ಒಂದು ಸಣ್ಣ ಊರಿನಲ್ಲೇ ಎಷ್ಟೋ ಜನರನ್ನು ಆದರ್ಶ ವ್ಯಕ್ತಿಗಳನ್ನಾಗಿ ಆರಿಸಿಕೊಳ್ಳುವರು. ಇಡಿಯ ವಿಶ್ವಕ್ಕೇ ಒಬ್ಬ ಮಹಮ್ಮದ, ಕ್ರಿಸ್ತ ಅಥವಾ ಬುದ್ಧ ಒಂದು ಆದರ್ಶವೆಂದು ಹೇಗೆ ಒಪ್ಪಿಕೊಳ್ಳುವುದು? ಆ ಒಂದು ವ್ಯಕ್ತಿಯ ಪ್ರಮಾಣದ ಮೇಲೆ ಮಾತ್ರ ಎಲ್ಲಾ ನೀತಿ ಧರ್ಮ ಆಧ್ಯಾತ್ಮ ಹೇಗೆ ಇರಬಹುದು? ವೇದಾಂತ ಧರ್ಮಕ್ಕೆ ಅಂತಹ ಯಾವ ವ್ಯಕ್ತಿಯ ಪ್ರಮಾಣವೂ ಅನಾವಶ್ಯಕ. ಮನುಷ್ಯನಲ್ಲಿರುವ ಶಾಶ್ವತ ಸ್ವರೂಪವೇ ಇದಕ್ಕೆ ಪ್ರಮಾಣ. ಇದರ ನೀತಿ ಮಾನವ ಜಾತಿಯ ಸನಾತನ ಆಧ್ಯಾತ್ಮಿಕ ಏಕತ್ವದ ಮೇಲೆಯೇ ನಿಂತಿದೆ. ಈ ಏಕತ್ವ ಹೊಸದಾಗಿ ಪಡೆಯುವಂತಹುದಲ್ಲ, ಇದಾಗಲೇ ನಮ್ಮದಾಗಿದೆ.

ಆದರೆ ನಮ್ಮ ಋಷಿಗಳು ಅತ್ಯಂತ ಪ್ರಾಚೀನಕಾಲದಿಂದಲೂ ಮುಕ್ಕಾಲು ಪಾಲು ಮಾನವರಿಗೆ, ವ್ಯಕ್ತಿಯ ಆಸರೆ ಅವಶ್ಯಕವೆಂಬುದನ್ನು ಮನಗಂಡರು. ಒಂದಲ್ಲ ಒಂದು ವಿಧದಲ್ಲಿ ಅವರಿಗೆ ಸಾಕಾರದೇವರು ಬೇಕು. ಸಗುಣ ದೇವರಿಗೆ ವಿರೋಧವಾಗಿ ಬೋಧಿಸಿದ ಬುದ್ಧ ಕಾಲವಾಗಿ ಐವತ್ತು ವರುಷ ಆಗಲಿಲ್ಲ. ಆಗಲೇ ಅವನ ಶಿಷ್ಯರು ಅವನನ್ನೇ ಸಾಕಾರ ದೇವರನ್ನಾಗಿ ಮಾಡಿದರು. ಈ ಸಗುಣದೇವರು ಅವಶ್ಯಕ. ನೂರಕ್ಕೆ ತೊಂಬತ್ತೊಂಬತ್ತು ಮಂದಿ ಪೂಜೆಗೆ ಅಯೋಗ್ಯರಾದ ಭ್ರಾಂತಿಜನಿತ, ಕಾಲ್ಪನಿಕ ದೇವರುಗಳಿಗಿಂತ ನಮ್ಮ ಸಂಗಡವೇ ಸಂಚರಿಸುತ್ತಿರುವ ಜೀವಂತ ದೇವರುಗಳ ಮಧ್ಯೆ ಮಧ್ಯೆ ಸಿಕ್ಕುವರು. ನಮ್ಮ ಭ್ರಾಂತಿಜನಿತ, ಕಾಲ್ಪನಿಕ ದೇವರಿಗಿಂತ ಇವರು ಪೂಜಾಯೋಗ್ಯರು. ನೀವು ಅಥವಾ ನಾವು ಕಲ್ಪಿಸಿಕೊಳ್ಳುವ ಭಗವಂತನ ಭಾವನೆಗಿಂತ ಶ್ರೀಕೃಷ್ಣ ಮೇಲು. ನಾವು, ನೀವು ಮನಸ್ಸಿನಲ್ಲಿ ಭಾವಿಸುವ ಉಚ್ಚ ಆದರ್ಶಕ್ಕಿಂತ ಬುದ್ಧದೇವ ಉಚ್ಚತರ ಆದರ್ಶವಾಗಿರುವನು; ಸಚೇತನ ಪರಮ ಆದರ್ಶವಾಗಿರುವನು. ಆದಕಾರಣವೇ ಕಾಲ್ಪನಿಕ ದೇವರನ್ನೆಲ್ಲಾ ಪದಚ್ಯುತನ್ನಾಗಿ ಮಾಡಿ, ಇಂತಹ ಮಹಾಮಹಿಮರನ್ನು ಅವರ ಸ್ಥಳದಲ್ಲಿ ಗೌರವಿಸುವುದು. ಇದು ನಮ್ಮ ಋಷಿಗಳಿಗೆ ತಿಳಿದಿತ್ತು. ಇಂತಹ ಅವತಾರ ವ್ಯಕ್ತಿಗಳನ್ನು, ಮಹಾಪುರುಷರನ್ನು ಪೂಜಿಸುವುದಕ್ಕೆ ಭಾರತೀಯರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದು ಮಾತ್ರವಲ್ಲ, ನಮ್ಮ ಸರ್ವ ಶ್ರೇಷ್ಠ ಅವತಾರ ಹೀಗೆ ಹೇಳುವನು : "ಎಲ್ಲಿ ಅದ್ಭುತ ಆಧ್ಯಾತ್ಮಿಕ ಶಕ್ತಿ ಪ್ರಕಾಶಿಸುತ್ತಿದೆಯೋ, ಅಲ್ಲೆಲ್ಲ ನಾನಿರುವೆನು ಎಂದು ಭಾವಿಸು; ಅದು ನನ್ನಿಂದ ಪ್ರಕಾಶಿಸುತ್ತಿದೆ ಎಂದು ತಿಳಿ."

ಆದಕಾರಣವೇ ಹಿಂದೂಗಳಿಗೆ ಪ್ರಪಂಚದ ಎಲ್ಲಾ ಅವತಾರಗಳನ್ನೂ ಪೂಜಿಸುವುದಕ್ಕೆ ಸ್ವಾತಂತ್ರ್ಯವಿದೆ. ಹಿಂದೂಗಳು ಯಾವ ದೇಶಕ್ಕೆ ಸೇರಿದ ಸಾಧುವನ್ನಾದರೂ ಋಷಿಯನ್ನಾದರೂ ಪೂಜಿಸಬಹುದು. ಅನೇಕ ವೇಳೆ ನಾವು ಕ್ರೈಸ್ತರ ಚರ್ಚಿಗೆ ಹೋಗುತ್ತೇವೆ. ಮಹಮ್ಮದೀಯರ ಮಸೀದಿಗೆ ಹೋಗುತ್ತೇವೆ. ಇದು ಒಳ್ಳೆಯದು. ನಾವು ಏತಕ್ಕೆ ಹೀಗೆ ಮಾಡಬಾರದು? ನಮ್ಮದು ವಿಶ್ವ ಧರ್ಮ. ಇದು ಎಲ್ಲವನ್ನೂ ಅಳವಡಿಸಿಕೊಳ್ಳುವಷ್ಟು ವಿಶಾಲವಾಗಿದೆ. ಇದುವರೆಗೆ ಪ್ರಪಂಚದಲ್ಲಿರುವ ಧಾರ್ಮಿಕ ಭಾವನೆಗಳನ್ನೆಲ್ಲಾ ಅದರಲ್ಲಿ ಸೇರಿಸಬಹುದು. ಭವಿಷ್ಯದಲ್ಲಿ ಬರುವ ವಿಭಿನ್ನ ಧರ್ಮಗಳಿಗಳಿಗೆಲ್ಲ ಹೀಗೆಯೇ ಸಾವಧಾನದಿಂದ ಕಾಯುವೆವು. ಅವುಗಳನ್ನು ಹೀಗೆಯೇ ಸ್ವಾಗತಿಸುವೆವು. ವೇದಾಂತ ತನ್ನ ವಿಶಾಲ ಬಾಹುಗಳಿಂದ ಇವುಗಳನ್ನೆಲ್ಲಾ ಪ್ರೀತಿಯಿಂದ ಆಲಂಗಿಸುವುದು.

***

"ಬುದ್ಧನೊಬ್ಬನೇ ಜಾತಿಯನ್ನು ಒಪ್ಪಿಕೊಳ್ಳದ ಭರತಖಂಡದ ಶ್ರೇಷ್ಠ ತತ್ತ್ವಜ್ಞಾನಿ. ಬುದ್ಧ ವೇದಕ್ಕಾಗಲೀ, ಜಾತಿಗಾಗಲೀ, ಪುರೋಹಿತರಿಗಾಗಲೀ, ಆಚಾರಕ್ಕಾಗಲೀ ತಲೆಬಾಗಲಿಲ್ಲ. ವಿಚಾರವು ನಮ್ಮನ್ನು ಒಯ್ಯುವವರೆಗೆ ನಿರ್ಭಯವಾಗಿ ಅದನ್ನು ಅನುಸರಿಸಿದನು. ಸತ್ಯಾನ್ವೇಷಣೆಯಲ್ಲಿ ಇಂತಹ ದಿಟ್ಟತನ ಮತ್ತು ಸರ್ವಜೀವಿಗಳ ಮೇಲೆಯೂ ಪ್ರೇಮ ಇದ್ದಂತಹ ವ್ಯಕ್ತಿಯನ್ನು ಜಗತ್ತು ಕಂಡಿಲ್ಲ."

"ನಾನು ಬುದ್ಧನ ಸೇವಕರ ಸೇವಕ. ಅವನಂತೆ ಯಾರು ಹಿಂದೆ ಇದ್ದರು? ಬುದ್ಧ ತನ್ನ ಸ್ವಂತಕ್ಕಾಗಿ ಏನನ್ನೂ ಮಾಡಿದವನಲ್ಲ. ಇಡೀ ಪ್ರಪಂಚವನ್ನು ಬಾಚಿ ತಬ್ಬುವಂಥ ಅನುಕಂಪ. ಎಂತಹ ಕರುಣೆ ಆ ಯತಿರಾಜನಿಗೆ, ಒಂದು ಕುರಿಮರಿಗಾಗಿ ತನ್ನ ಪ್ರಾಣವನ್ನೇ ಕೊಡಲು ಸಿದ್ಧನಾಗಿದ್ದ. ಒಂದು ಹಸಿದ ಹುಲಿಗಾಗಿ ತನ್ನನ್ನೇ ಅರ್ಪಿಸಿಕೊಳ್ಳುವುದರಲ್ಲಿದ್ದ. ಚಂಡಾಲನ ಆತಿಥ್ಯವನ್ನು ಒಪ್ಪಿಕೊಂಡು ಅವನನ್ನು ಹರಸಿದ. ಬುದ್ಧ, ಖಂಡಿತವಾಗಿಯೂ ಈ ಭೂಮಿಯ ಮೇಲೆ ಬಾಳಿ ಬದುಕಿದ ಮಾನವರಲ್ಲೆಲ್ಲ ಅತ್ಯಂತ ಶ್ರೇಷ್ಠನಾಗಿದ್ದವನು. ಅವನು ತನಗಾಗಿ ಏನನ್ನೂ ಮಾಡಿಕೊಂಡವನಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವನು ತನ್ನ ಆರಾಧನೆಯನ್ನೆ ಎಂದಿಗೂ ಒಪ್ಪಲಿಲ್ಲ."

**(ಮೈಸೂರಿನ ರಾಮಕೃಷ್ಣಾಶ್ರಮ ಪ್ರಕಟಿಸಿರುವ ವಿವೇಕಾನಂದರ ಕೃತಿ ಶ್ರೇಣಿಯಿಂದ)**

# ನಾಟಕ, ಸಿನಿಮಾ, ಪತ್ರಿಕೆ ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

## ಭರವಸೆ ಹುಟ್ಟಿಸಿದ ಶಿವಮೊಗ್ಗ ರಂಗಾಯಣದ ಹೊಸ ರೆಪರ್ಟರಿ



ಶಿವಮೊಗ್ಗದ ರಂಗಾಯಣದ ಹೊಸ ರೆಪರ್ಟರಿ ಆಡಿದ ಮೊದಲ ನಾಟಕ 'ಚಾಣಕ್ಯ ಪ್ರಪಂಚ'ದ ಮೊದಲೆರಡು ಪ್ರಯೋಗಗಳು ಕಳೆದ ನವೆಂಬರ್ ೩೦ ಮತ್ತು ೩೧ರಂದು ಸುವರ್ಣ ಸಾಂಸ್ಕೃತಿಕ ಭವನದಲ್ಲಿ ಪ್ರದರ್ಶಿತವಾದವು. ಹೊಸ ರೆಪರ್ಟರಿ ಎಂದರೆ ಹೊಸ ನಟ-ನಟಿ-ತಂತ್ರಜ್ಞರ ತಂಡ. ಜೊತೆಗೆ ಈ ಪ್ರಯೋಗದ ನಿರ್ದೇಶಕ ಗೆಳೆಯ ವೆಂಕಟರಮಣ ಐತಾಳ ಬಹು ನಿರೀಕ್ಷೆಯನ್ನಿಟ್ಟುಕೊಂಡು ಪ್ರದರ್ಶನಕ್ಕೆ ಬರಬೇಡಿ ಎಂಬ ಎಚ್ಚರಿಕೆ ನೀಡಿದ್ದರು. ಈ ಅನುಮಾನ-ಎಚ್ಚರಿಕೆಗಳ ನಡುವೆಯೇ ನಾಟಕವನ್ನುವೀಕ್ಷಿಸಿದ ನನ್ನಿಂದ ಎಲ್ಲ ಅನುಮಾನಗಳನ್ನೂ ದೂರಮಾಡುವಷ್ಟು ಪ್ರದರ್ಶನ ಯಶಸ್ವಿಯಾಗಿತ್ತು.. ಈ ಭಾವನೆಯ ಹಿಂದೆ ಇದೊಂದು ಹೊಸ ತಂಡ ಮತ್ತು ಪ್ರಯೋಗಕ್ಕೆ ಆರಿಸಿಕೊಂಡ ನಾಟಕ ತುಂಬಾ ಜಟಿಲವಾದದ್ದು ಮತ್ತು ನಟ-ನಟಿಯರಿಂದ ಬಹು ವೇಷಗಳನ್ನು ಹಾಕಿಸುವಂಥದ್ದೂ ಆಗಿದೆ ಎಂಬ ರಿಯಾಯಿತಿಗಳೂ ಕೆಲಸ ಮಾಡಿರಬಹುದು. ಆದರೆ ಒಟ್ಟು ಪ್ರಯೋಗ ಈ ತಂಡದ ಬಗ್ಗೆ ಭರವಸೆ ಹುಟ್ಟಿಸಿದ್ದಂತೂ ನಿಜ.

'ಚಾಣಕ್ಯ ಪ್ರಪಂಚ' ಕ್ರಿ.ಶ. ಆರನೇ ಶತಮಾನದ ವಿಶಾಖದತ್ತನೆಂಬ ನಾಟಕಕಾರ ಬರೆದ 'ಮುದ್ರಾರಾಕ್ಷಸ' ಎಂಬ ಸಂಸ್ಕೃತ ನಾಟಕವನ್ನು ಆಧರಿಸಿ ಕೆ.ವಿ. ಸುಬ್ಬಣ್ಣನವರು ಕನ್ನಡದಲ್ಲಿ ರಚಿಸಿದ ಮತ್ತು ಹೆಚ್ಚು ಪ್ರಯೋಗ ಕಾಣದ ನಾಟಕ. ಇದು ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ನಂದ ವಂಶದ ಮೇಲಿನ ಸೇಡಿನಿಂದಾಗಿ ಅವರ ಮಗಧ ರಾಜ್ಯದ ವಿರುದ್ಧ ಅದೇ ವಂಶದ ದಾಸಿಪುತ್ರ ಚಂದ್ರಗುಪ್ತನನ್ನು ಎತ್ತಿಕಟ್ಟುವ ಮೂಲಕ ಅದನ್ನು ಬುಡಮೇಲುಗೊಳಿಸಿ, ಅದರ ಸಿಂಹಾಸನದ ಮೇಲೆ ಚಂದ್ರಗುಪ್ತನನ್ನು ಕೂರಿಸಿ ಮೌರ್ಯ ವಂಶದ ಸಾಮ್ರಾಜ್ಯವನ್ನಾಗಿ ಪರಿವರ್ತಿಸಿ ಅದರ ಸುಭದ್ರತೆಗಾಗಿ ತಾನು ಮೆಚ್ಚಿದ್ದ;ಆದರೆ ಈಗ ಶತ್ರುಪಾಳೆಯದಲ್ಲಿದ್ದು ತನ್ನ ಮೇಲೆ ವೈರ ಸಾಧಿಸುತ್ತಿರುವ ನಂದರಾಜ್ಯದ ಮಂತ್ರಿ ಅಮಾತ್ಯ ರಾಕ್ಷಸನನ್ನೇ ಮಂತ್ರಿಯನ್ನಾಗಿ ಮಾಡಲು ವಿಷ್ಣುಶರ್ಮನೆಂಬ ಮೂಲ ಹೆಸರಿನ ಚಾಣಕ್ಯನೆಂಬ ಬ್ರಾಹ್ಮಣನ ರಾಜಕೀಯ ತಂತ್ರಗಳ ವ್ಯೂಹಾತಿವ್ಯೂಹಗಳನ್ನು ನಿರೂಪಿಸುವ ಅತಿ ಸಂಕೀರ್ಣವಾದ ನಾಟಕ.

ಈ ಸಂಕೀರ್ಣತೆಯನ್ನು ಪ್ರೇಕ್ಷಕರಿಗೆ ಎರಡು-ಎರಡೂವರೆ ತಾಸುಗಳ ಅವಧಿಯಲ್ಲಿ ಮೂರ್ನಾಲ್ಕು ಪ್ರಮುಖ ಪಾತ್ರಗಳ, ಹತ್ತಾರು ಕಿರುಪಾತ್ರಗಳ ಮೂಲಕ ಸರಳವಾಗಿ ತಲುಪಿಸುವ ಈ ನಾಟಕದ ಶಿಲ್ಪ ನಿಜವಾಗಿಯೂ ಅಧ್ಯಯನಯೋಗ್ಯವಾಗಿದ್ದು, ನಿರ್ದೇಶಕ ವೆಂಕಟರಮಣ ಐತಾಳರು ಅದನ್ನು ಬಹು ಯಶಸ್ವಿಯಾಗಿಯೇ ನಿರ್ವಹಿಸಿದ್ದಾರೆಂದು ಹೇಳಬಹುದು. ಅದಕ್ಕೆ ನೆರವಾಗಿರುವುದು ಮುಖ್ಯವಾಗಿ ಮಹಾ ಸಾಮ್ರಾಜ್ಯವೊಂದು ಬೇಡುವ ಅಧಿಕಾರ ಶ್ರೇಣಿಯನ್ನು ಸಂಕೇತಿಸುವಂತಿರುವ ಒಂದು ಸೋಪಾನ ಶ್ರೇಣಿ ಮತ್ತೊಂದೆಡೆ ಸುಳ್ಳು, ವಂಚನೆ, ಪಿತೂರಿ, ಹತ್ಯೆಗಳನ್ನು ಒಳಗೊಂಡ; ಅಂತರಂಗವೇ ಇಲ್ಲದ ಈ ಅಧಿಕಾರ ರಾಜಕಾರಣಕ್ಕೆ ಸಂವಾದಿ ಹಿನ್ನೆಲೆಯಾಗಿ ಬರುವ ನವೋದಿತ ಬೌದ್ಧ ಧರ್ಮವನ್ನು ಸಂಕೇತಿಸುವ ಬೌದ್ಧ ಸ್ತೂಪದ ಪ್ರತಿಕೃತಿ ಮತ್ತು ಇವುಗಳ ಮಧ್ಯೆ ರಾಜಕೀಯ ಚದುರಂಗದಾಟದ ಕಾಯಿಗಳಾಗಿರುವ ವಿವಿಧ ಪಾತ್ರಗಳು ಚಲಿಸುವ ಹಾಸುಗಳಂತಿರುವ ವೇದಿಕೆಗಳಿಂದ ಕೂಡಿದ ಸರಳ ವಿನ್ಯಾಸದ ರಂಗ ಸಜ್ಜಿಕೆ, ಬಹು ಬದಲಾವಣೆಗಳ ಕಸರತ್ತಿಲ್ಲದ ಸರಳ ಬೆಳಕಿನ ವ್ಯವಸ್ಥೆ, ಚಾಣಕ್ಯ ಮತ್ತು ಚಂದ್ರಗುಪ್ತರ ಪಾತ್ರ ವಹಿಸಿದ್ದ ನಟರ ನಿಯಂತ್ರಿತ ಅಭಿನಯ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಐತಾಳರ ದೃಶ್ಯ ಸಂಯೋಜನೆ ಮತ್ತು ರಂಗ ಚಲನೆಗಳ ಸರಳ ಮತ್ತು ದಕ್ಷ ತಂತ್ರ. ಈ ಪ್ರಯೋಗದಲ್ಲಿ ಎದ್ದು ಕಂಡು ಅದರ ಬಗ್ಗೆ ಒಂದಷ್ಟು ಅತೃಪ್ತಿ ಉಂಟು ಮಾಡಿದ ಎರಡು ಅಂಶಗಳೆಂದರೆ, ನಟವರ್ಗದ ಅಪಕ್ವ ಅಭಿನಯ ಮತ್ತು ಸಂಗೀತ ಹಾಗೂ ಗಾಯನದ ಹವ್ಯಾಸಿತನ.

ನಾಟಕದ ಕಥೆಯನ್ನು ಹೇಳುವ ದುಸ್ಸಾಹಸ ಮಾಡಿ ಅದರ ಸಿಕ್ಕುಗಳ ಮಧ್ಯೆ ಸಿಕ್ಕಿ ಹಾಕಿಕೊಳ್ಳ ಬಯಸದ ನಾನು ಸರ್ವಾಹುತಿ ಬೇಡುವ ಇಲ್ಲಿನ ರಾಜಕಾರಣದಲ್ಲಿ ತನ್ನ ಪ್ರೇಮಿಯ ಜೊತೆಗೆ ತನ್ನೆರಡೂ ಕಣ್ಣುಗಳನ್ನು ಬಲಿ ನೀಡಬೇಕಾಗಿ ಬಂದು ಬೌದ್ಧ ಸಂನ್ಯಾಸಿನಿಯಾದ ಅರಮನೆಯ ಮುಗ್ಧ ಸೇವಕಿಯೊಬ್ಬಳು ಚಾಣಕ್ಯನನ್ನು, ಪ್ರೇಮವನ್ನು ವಧಿಸಿ ಅಲ್ಲಿ ಅರ್ಥವನ್ನು ತಂದುಕೂಡಿಸಿದ ಧೂರ್ತನೆಂದೂ, ಮಾನವ ಹಂತಕನೆಂದೂ ಶಪಿಸುವ ದೃಶ್ಯದೊಂದಿಗೆ ಅಂತ್ಯಗೊಳ್ಳುವ ಈ ನಾಟಕ ಬಲಿಷ್ಠ ಕೇಂದ್ರದ ಮಹಾಸಾಮ್ರಾಜ್ಯ ಪರಂಪರೆಯ ಹಿಂದಿನ ನಿರ್ಮಮ ರಾಜಕಾರಣವನ್ನು ಬಹು ಪರಿಣಾಮಕಾರಿಯಾಗಿ ಬಿಂಬಿಸುತ್ತಾ ಸಮಕಾಲೀನ ರಾಜಕಾರಣದ ಬಗ್ಗೆ ನಮಗೆ ಕೆಲವು ಎಚ್ಚರಿಕೆಗಳನ್ನೂ ನೀಡುವಂತೆ ಪ್ರಯೋಗವನ್ನು ವಿನ್ಯಾಸಗೊಳಿಸಿರುವ ನಿರ್ದೇಶಕರ ಪ್ರತಿಭೆಗೆ ಅಭಿನಂದನೆ ಹೇಳಬಯಸುವೆ.

ಆದರೆ ನಾಟಕವನ್ನು ಆಧುನಿಕ ಭಾರತದ ರಾಜಕರಣದ ಇತಿಹಾಸದ ಸಾಕ್ಷ್ಯಚಿತ್ರಗಳ ತುಣುಕುಗಳ ಸರಮಾಲೆಯ ಪ್ರದರ್ಶನದೊಂದಿಗೆ ಆರಂಭಿಸುವ ತಂತ್ರ ಒಟ್ಟು ನಾಟಕದ ಪರಿಣಾಮಕ್ಕೆ ಯಾವ ಹೊಸ ಆಯಾಮವನ್ನೂ ನೀಡುವುದಿಲ್ಲ ಎಂಬುದನ್ನೂ ಇಲ್ಲಿ ಹೇಳಬೇಕು. ಅದೇನೇ ಇರಲಿ, ಹೊಸ ತಂಡ ಭರವಸೆ ಹುಟ್ಟಿಸುತ್ತಲೇ ತನ್ನ ವೃತ್ತಿಪಯಣವನ್ನು ಆರಂಭಿಸಿದೆ. ಅದಕ್ಕೆ ಶುಭವಾಗಲಿ. ಹಾಗೇ ಇದಕ್ಕೆ ಪೂರಕವಾಗಿ ಆಡಳಿತ ತತ್ಕಾಲೀನ ರಾಜಕೀಯ ವರಸೆಗಳಿಗೆ ಬಲಿ ಬೀಳದೆ ಜನರ ಮನಸ್ಸುಗಳನ್ನು ವಿಸ್ತರಿಸಬಲ್ಲ ನಾಟಕಗಳನ್ನೂ, ಅದಕ್ಕೆ ತಕ್ಕ ಯೋಗ್ಯ ನಿರ್ದೇಶಕರನ್ನೂ ಆಯ್ದು ಈ ಪಯಣವನ್ನು ದಡ ಮುಟ್ಟಿಸಲಿ ಎಂದು ಹಾರೈಸುವೆ.

## ನಮ್ಮ ರಾಜ್‌ಕುಮಾರ್ ಪ್ರಪಂಚ!



ಇತ್ತೀಚೆಗೆ ಪ್ರತಿರಾತ್ರಿ ಯೂ-ಟ್ಯೂಬ್‌ನಲ್ಲಿ 'ಕಲಾ ಮಾಧ್ಯಮ' ಎಂಬ ವಾಹಿನಿ ಪ್ರಸಾರ ಮಾಡುತ್ತಿರುವ ನಟ ರಾಜ್‌ಕುಮಾರ್ ಚಿತ್ರ ಜೀವನ ಕುರಿತ ಹಲವರ ನಿರೂಪಣೆಗಳನ್ನು ಕೇಳಿ/ನೋಡಿಯೇ ಮಲಗುವುದು ನನ್ನ ರೂಢಿಯಾಗಿಬಿಟ್ಟಿದೆ. ಬಾಲ್ಯದಿಂದಲೂ ಅವರ ಚಿತ್ರಗಳನ್ನು ನೋಡುತ್ತಾ, ಬದುಕಿನ ಹಲವು ಪಾಠಗಳನ್ನು ಕಲಿಯುತ್ತಾ ಅವರ ಅಭಿಮಾನಿಯಾಗಿ ಬೆಳೆದ ನಾನು ಈಗ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ನೋಡಿರುವೆನಾದರೂ, ಈಗಲೂ ರಾಜ್‌ಕುಮಾರ್ ಚಿತ್ರಗಳನ್ನು-ವಿಶೇಷವಾಗಿ ಅವರ ಕಪ್ಪು ಬಿಳುಪು ಚಿತ್ರಗಳನು-, ನೋಡಿದಾಗ ದೊರೆಯುವ ಆನಂದವೇ ಬೇರೆ. ಆದರೆ ನಮ್ಮ ತಲೆಮಾರಿನವರಿಗೆ ರಾಜ್‌ಕುಮಾರ್ ಅಂದರೆ ರಾಜ್‌ಕುಮಾರ್ ಮಾತ್ರವಲ್ಲ; ಅಲ್ಲಿ ಲೀಲಾವತಿ, ನರಸಿಂಹರಾಜು, ,ಬಾಲಕೃಷ್ಣ, ಉದಯಕುಮಾರ್, ರಾಜಾಶಂಕರ್,. ಅಶ್ವಥ್, ಪಂಡರೀಬಾಯಿ, ಲಕ್ಷ್ಮೀದೇವಿ, ರಮಾದೇವಿ, ರಾಮಚಂದ್ರ ಶಾಸ್ತ್ರಿ, ಹನುಮಂತಾಚಾರ್ ಮುಂತಾದವರು ಇದ್ದೇ ಇರುವರು. ಹಾಗಾಗಿ 'ಕಲಾ ಮಾಧ್ಯಮ'ದವರು ಆ ಕಾಲದ ಭಗವಾನ್ ಮತ್ತು ಅವರ ತಲೆಮಾರಿನವರು ಕಣ್ಮರೆಯಾಗುವ ಮುನ್ನ ರಾಜ್‌ಕುಮಾರ್ ಅವರ ಈ ಇಡೀ ಪ್ರಪಂಚದ ನೆನಪುಗಳ ಬುತ್ತಿಯನ್ನು ಬಿಚ್ಚಿಡುವಂತೆ ಮಾಡಿದರೆ ನಮ್ಮಂಥವರು ಅವರಿಗೆ ಋಣಿಯಾಗಿರುವರು ಮತ್ತು ಅದೊಂದು ಐತಿಹಾಸಿಕ ದಾಖಲೆಯಾದೀತು.

## ಪ್ರಜಾವಾಣಿ'ಯನ್ನು ಉಳಿಸಿ!

ಒಂದು ಕಾಲದಲ್ಲಿ ತಮ್ಮ ಪ್ರಬುದ್ಧ ರಾಜಕೀಯ ಪ್ರಜ್ಞೆ ಮತ್ತು ಸಾಹಿತ್ಯ-ಸಂಸ್ಕೃತಿಗಳ ಪ್ರೀತಿಗೆ ಹೆಸರಾಗಿದ್ದ ಕನ್ನಡದ ಜನತೆ ಜಾಗತೀಕರಣದ ಕ್ಷಿಪ್ರ ಫಲಗಳ ಆಮಿಷಕ್ಕೀಡಾಗಿ ತಾನು ಏನೆಲ್ಲವನ್ನು ಕಳೆದುಕೊಳ್ಳುತ್ತಿದ್ದೇನೆಂಬ ಪರಿವೆಯೇ ಇಲ್ಲದಂತೆ ವರ್ತಿಸುತ್ತಿರುವುದನ್ನು ಕಂಡು ವಿಷಾದವಾಗುತ್ತಿದೆ. ಕನ್ನಡದಲ್ಲಿ ಓದಬಹುದಾದ ಒಂದೂವರೆ ಪತ್ರಿಕೆಗಳಲ್ಲಿ ಒಂದಾದ 'ಪ್ರಜಾವಾಣಿ' ಕರೋನಾದ ಈ ದಿನಗಳಲ್ಲಿ ಉಳಿದುಕೊಳ್ಳಲು ನಡೆಸಿರುವ ಹರಸಾಹಸದ ಸೂಚನೆಗಳನ್ನು ಕಂಡು ನಾನು ಈ ಮಾತನಾಡುತ್ತಿದ್ದೇನೆ. ಕನ್ನಡ-ಕರ್ನಾಟಕ ಎಂದರೆ ಏನೆಲ್ಲ ಎಂಬ ಅರಿವನ್ನೇ ಕಳೆದುಕೊಂಡಂತಿರುವ ಹೊಸ ತಲೆಮಾರು 'ಪ್ರಜಾವಾಣಿ'ಯಂತಹ ಆಧುನಿಕ ಕರ್ನಾಟಕದ ಒಳ್ಳೆಯದೆಲ್ಲದರ ಸ್ಮೃತಿಕೋಶದಂತಿರುವ ಪತ್ರಿಕೆಯನ್ನು ಇಂದು ಎಂತಹ ಸ್ಥಿತಿಗೆ ತಲುಪಿಸಿದೆ ಎಂದರೆ, ಅದು ಈಗ ಉಳಿದುಕೊಳ್ಳಲು ತನ್ನ ಡಿಜಿಟಲ್ ಆವೃತ್ತಿಯಲ್ಲಿ ವಿವಿಧ ವಿನೋದಾವಳಿಯನ್ನು ನಡೆಸಬೇಕಾಗಿದೆಯಲ್ಲದೆ ತನ್ನ ಮುದ್ರಿತ ಆವೃತ್ತಿಯಲ್ಲಿ ಹಿಂದೆ 'ಪ್ರಜಾಮತ' ಎಂಬ ಪತ್ರಿಕೆ ಜನಪ್ರಿಯವಾಗಲು ಆರಂಭಿಸಿದ್ದ 'ಗುಪ್ತ ಸಮಾಲೋಚನೆ', 'ದಾಂಪತ್ಯ ಸಮಸ್ಯೆ' ಮಾದರಿಯ ಅಂಕಣಕ್ಕೆ ಕೈಹಾಕಿ ತನ್ನ ಘನತೆಯನ್ನು ಕಳೆದುಕೊಂಡಿದೆ. ಇದಕ್ಕೆ ಲೈಂಗಿಕ ಆರೋಗ್ಯದ ಚೆಡ್ಡಿಯನ್ನು ನೆಪವಾಗಿ ಮಾತ್ರ ತೊಡಿಸಲಾಗಿದ್ದು, ಇಲ್ಲಿ ಪತ್ರಿಕೆ ಕಾಣಬೇಕೆಂದು ಬಯಸಿದ್ದೆಲ್ಲ ಕಾಣುತ್ತಿದೆ!

–ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು: **ಬೇಟೆಯಲ್ಲ ಆಟವೆಲ್ಲ** (ಕಥಾಕಾದಂಬರಿ) ಲೇ: **ಎಂ.ಎಸ್. ಶ್ರೀರಾಮ್** ಪ್ರ : **ಅಕ್ಷರ ಪ್ರಕಾಶನ**, ಹೆಗ್ಗೋಡು(೦೮೧೮೩೨೬೫೬೪೬) ಪು:೧೭೬ ಬೆ: **ರೂ.೧೮೦/-**

## ಕನ್ನಡ ಸಾಹಿತ್ಯಕ್ಕೊಂದು ಹೊಸ ಲೋಕ, ಹೊಸ ರೋಚಕತೆ




**ಈ** ಕೃತಿಯನ್ನು ಕಥಾ ಸಂಕಲನವನ್ನಾಗಿಯೂ ಓದಬಹುದು ಅಥವಾ ಒಂದು ಕಾದಂಬರಿಯನ್ನಾಗಿ ಕೂಡ ಓದಬಹುದೆಂದು ಲೇಖಕ ಶ್ರೀರಾಮ್ ಹೇಳುತ್ತಾರೆ. ಈ ಮಾತಿನ ಬಗ್ಗೆ ಆಮೇಲೆ ಮಾತನಾಡಬಹುದು. ಅದಕ್ಕೆ ಮೊದಲು ಈ ಕೃತಿಯನ್ನು ಲೇಖಕರ ಯಾವುದೇ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸುಮ್ಮನೆ ಓದಿದ ನಂತರ ಇದನ್ನು ಇನ್ನೂ ಎರಡು ರೀತಿಯಲ್ಲಿ ಓದಬಹುದು ಎಂದು ನನಗನ್ನಿಸಿದೆ. ಒಂದು, ಈ ಕೃತಿ ಒಟ್ಟಾರೆ ನಮ್ಮ ಮುಂದೆ ತೆರೆದಿಡುವ ಹೊಸ ಲೋಕವೊಂದರ ಗತಿ ಲಯಗಳು ಒತ್ತಾಯಿಸುವ ಹೊಸ ತರಹದ ಬರವಣಿಗೆಂಯು ಮರುಳುಗೊಳಗಾಗಿಸುವ ರೋಚಕತೆಗಾಗಿ ಮಾಡುವ ಓದು. ಇನ್ನೊಂದು ಹೀಗೆ ತೆರೆದುಕೊಂಡು ಹೊಸದೊಂದು ತೆರನ ಓದಿನ ರೋಚಕತೆಯಿಂದ ಬಿಡಿಸಿಕೊಂಡು ಅದು ಸೃಷ್ಟಿಸುವ ಈ ಹೊಸ ಲೋಕ ಎಷ್ಟರಮಟ್ಟಿಗೆ ತನ್ನ ಕಾಲುಗಳ ಮೇಲೆ ತಾನು ನಿಂತಿದೆ ಎಂದು ನೋಡಲು ಮಾಡುವ ಓದು. ಮೊದಲ ತೆರನ ಓದು ಈ ಕೃತಿಯ ಶಕ್ತಿಯಾಗಿದ್ದರೆ, ಎರಡನೆಯ ಉದ್ದೇಶದ ಓದು ಅದರ ದೌರ್ಬಲ್ಯವನ್ನು ತೆರೆದಿಡುತ್ತದೆ. ಹಾಗೇ ಇಂತಹ ಎರಡು ಓದುಗಳ ಮಧ್ಯವೇ ಈ ಕೃತಿಯನ್ನು ಲೇಖಕರು ಹೇಳುವ ಹಾಗೆ ಎರಡು ರೀತಿಯಲ್ಲಿ ಓದುವುದು ಕಷ್ಟವೆಂದು ಗೊತ್ತಾಗುತ್ತದೆ. ಏಕೆಂದರೆ ಮೂಲತಃ ಒಂದು ಕಾದಂಬರಿಯಂತೆ ಎಲ್ಲೂ ಪೂರ್ಣವಾಗದಂತೆ ಕಟ್ಟಿಕೊಳ್ಳುವ ಈ ಕಥನ (ಹಾಗೆ ನೋಡಿದರೆ ಇದು ಕಾದಂಬರಿಯಾಗಿಯೂ ಪೂರ್ಣಗೊಳ್ಳುವುದಿಲ್ಲ) ಒಂದರೊಳಗೊಂದು ಹಾಸುಹೊಕ್ಕಾದ ಸಂಗತಿಗಳನ್ನು ಒಳಗೊಂಡಿದ್ದು, ಅದರ ಅಧ್ಯಾಯಗಳನ್ನು ಸ್ವತಂತ್ರ ಕಥೆಗಳಂತೆ ಓದಲು ತೊಡಗಿದಾಗ ಕಥನಕ್ರಮದಲ್ಲಿ ಸೃಷ್ಟಿಯಾಗಿ ಅದರ ಬಂಧದ ಮತ್ತು ಭಾವಾರೋಹಣದ ಇಡಿತನ ಮುಕ್ಕಾಗಿ ಓದಿನ ಬಿಕ್ಕಳಿಕೆಗಳನ್ನುಂಟು ಮಾಡುತ್ತದೆ. ಇದನ್ನು ತಪ್ಪಿಸಲು ಲೇಖಕರು ಕೆಲವು ಅಧ್ಯಾಯಗಳಲ್ಲಿ ಮಾಡುವ ಪುನರಾವರ್ತನೆಗಳು ಮತ್ತು ಕೊಂಡಿ ನಿರ್ಮಾಣದಂತಹ ರಿಪೇರಿ ಕೆಲಸಗಳು ಕಥನದ ಬಂಧದ ಹೊರಗೇ ನಿಂತು ಅದರ ಮೇಲಿನ ಬೊಬ್ಬೆಗಳಂತೆ ಕಂಡು ಕೃತಿಯ ಸೌಂದರ್ಯದ ಸಮಗ್ರತೆಯನ್ನು ಕೆಡಿಸುತ್ತದೆ. ಕಥನ ಒಳಗಿಂದ ಬೆಳೆಯದೆ ಹೊರಗಿಂದ ಕಟ್ಟಲ್ಪಟ್ಟಿರುವುದರ ಸಾಕ್ಷಿಯಂತೆ ಲೇಖಕನ ಕೈ ಚಳಕ ಕಾಣತೊಡಗುತ್ತದೆ. ಈ ಕೈ ಚಳಕ ಅಧ್ಯಾಯಗಳ ನಡುವಿನ ಕೊಂಡಿ ನಿರ್ಮಿಸುತ್ತಾ ಒಟ್ಟು ಕಥನಕ್ರಮಕ್ಕೂ ವಿಸ್ತರಿಸಿ ಕೃತಿಯ ಓದು ಸೃಷ್ಟಿಸುವ ರೋಚಕತೆ ಮತ್ತು ಅದನ್ನು ಬರೀ ರೋಚಕತೆಯಿಂದ ಮೇಲೆತ್ತುವ ಮೂಲಕ ಅದು ಹೇಳುವ ದುರಂತದ ಆಳವನ್ನು ಕುಗ್ಗಿಸುತ್ತದೆ,

ಈ ಮೇಲಿನ ನನ್ನ ಮಾತುಗಳು ಯಾರನ್ನೂ ಈ ಕೃತಿಯನ್ನು ಓದಲು ಹಿಂದೆಗೆಯಲು ಕಾರಣವಾಗಬಾರದೆಂದೂ ನಾನು ಇಲ್ಲಿ ಹೇಳಬಯಸುವೆ. ಏಕೆಂದರೆ ಕನ್ನಡ ಸಾಹಿತ್ಯ ಲೋಕಕ್ಕೆ ಹಚ್ಚ ಹೊಸದೊಂದು-ಅದು ಹಾದು ಹೋಗುವ ಭೌತಿಕ ಆವರಣಗಳೂ ಸೇರಿ-ಲೋಕವನ್ನು ಪರಿಚಯಿಸುವ ಈ ಪ್ರಯೋಗ ಇಂತಹ ತೊಡಕುಗಳನ್ನು ದಾಟಿಯೇ ಹೋಗಬೇಕಾದ್ದು ಸಹಜ. ಆದರೆ ಈ ದಾಟುವ ಅನುಭವ ಬರೀ ಕಾಫಿ-ಚಹಾ ಕುಡಿಯುತ್ತಿರುವವನು ಹೊಸ ಸಮಾಜಕ್ಕೆ ಸೇರುವ'ಆಸೆ'ಯಿಂದ ಬಿಯರ್ ಕುಡಿಯಲು ಹೋಗಿ ದಾಟಬೇಕಾದ ಅನುಭವದಂತೆ ಕಂಡು, ಇದು ಕಥನದ ತೊಡಕೇ ಅಥವಾ ಕಥೆ ಕೊಡುವ ಮಜಾದ ಹೊಸತನವನ್ನು ಅರಿಯಲಾಗದ ತೊಡಕೇ ಎಂಬ ಗೊಂದಲ ಇಲ್ಲಿ ಉಂಟಾಗದಿರದು. ಇನ್ನೂ ಮುಂದುವರೆದು ಹೇಳುವುದಾದರೆ, ಇಲ್ಲಿ ಬರುವ ಲೋಕ ಕನ್ನಡ ಓದುಗ ವರ್ಗಕ್ಕೆ ಇನ್ನೂ ಪೂರ್ಣವಾಗಿ ಪರಿಚಯವಾಗದ ಬಿಯರನ್ನೂ ಬಹಳ ಹಿಂದೆ ಬಿಟ್ಟು, ಅದು ಕಂಡು ಕೇಳರಿಯದ ಮದ್ಯ ವೈವಿಧ್ಯದ ಮತ್ತು ಅವುಗಳ ಬಳಕೆಯ ರೀತಿ ನೀತಿಗಳ ವಿವಿಧೋದ್ದೇಶಗಳನ್ನು ಬಲ್ಲ ಗ್ರಾಹಕ ಲೋಕವಾಗಿದ್ದು ಅದರ ಪಂಚತಾರಾ ಭೌತಿಕ ಆವರಣಗಳ ವರ್ಣನೆ ಸೇರಿ ಅದು ನಿರ್ಮಿಸುವ ಹೊಸ ತೆರನ 'ಕಿಕ್ಕೇ'(ಈ ಪ್ರಯೋಗದಲ್ಲಿ ಕನ್ನಡ ಅನುಭವಿಸುತ್ತಿರುವ ಸಂಕಟವನ್ನು ಗಮನಿಸಿ!) ತೊಡಕುಗಳನ್ನು ಸೃಷ್ಟಿಸುತ್ತಿರಲೂಬಹುದು ಎಂಬ ಅನುಮಾನವೂ ಉಂಟಾಗದಿರದು! ಜಾಗತೀಕರಣ ತನ್ನ 'ಗ್ರೋ ಆರ್ ಪೆರಿಶ್' ಎಂಬ ತನ್ನ ಹೊಸ ಸ್ಲೋಗನ್‌ನ ಪರಿಣಾಮವಾದ 'ಗ್ರೋತ್ ಸ್ಟೋರಿ'ಗಳ ರೂಪದಲ್ಲಿ ಅಲ್ಲಲ್ಲಿ ಅತಿ ಶ್ರೀಮಂತಿಕೆಯ ದ್ವೀಪಗಳನ್ನು ಸೃಷ್ಟಿಸಿರುವುದಲ್ಲದೆ ಅದರೊಳಕ್ಕೆ ಪ್ರವೇಶವನ್ನು ಪ್ರಜಾಸತ್ತೀಕರಿಸಿದೆ. ಅಂದರೆ ಹಳೆಯ ನಿಷೇಧಗಳಿಲ್ಲದ ತೆರೆದ ಲೋಕವದು. ಹಾಗಾಗಿ ಅಗತ್ಯ 'ಸಂಸ್ಕಾರ'ಗಳಿಲ್ಲದೆ ಅದನ್ನು ಪ್ರವೇಶಿಸುವವರು ಒಳಗಾಗುವ ಬಿಕ್ಕಟ್ಟುಗಳು ಮತ್ತು ಅವು ತರುವ ಸಾಮಾಜಿಕ ಮತ್ತು ವೈಯಕ್ತಿಕ ಸಂಕಟ-ದುರಂತಗಳನ್ನು ಒಂದು ಕಡೆ ಚಿತ್ರಿಸುತ್ತಾ, ಅದಕೆ ಮುಖಾಮುಖಿಯಾಗಿ ಆ ಲೋಕದ ಪ್ರವೇಶದ ಆಕರ್ಷಣೆಯಿದ್ದೂ, ಹಳೆಯ ಸಾಮಾಜಿಕ ಮಡಿ ಮೈಲಿಗೆಗಳನ್ನು ಬಿಡಲಾಗದೆ ಮಧ್ಯ ದಾರಿಯಲ್ಲಿರುವ ಒಂದು ಲೋಕ; ಮತ್ತೊಂದೆಡೆ ಆ ತೆರೆದ ಲೋಕದ ಮುಕ್ತತೆಯ ಅಪಾಯಗಳನ್ನು ತನ್ನ ಪರಂಪರಾಗತ ಸಂಸ್ಕಾರ ಬಲದಿಂದ ಅರಿತು ಅದರ ಆಕರ್ಷಣೆಗೆ ಬೀಳದೆ ಅದರಲ್ಲಿ ಸಿಕ್ಕಿಹಾಕಿಕೊಂಡವರ ಬಗ್ಗೆ ಸಹಾನುಭೂತಿಯಿಂದ ಅವರನ್ನು ಅದರಿಂದ ಪಾರುಮಾಡುವ ಆಧ್ಯಾತ್ಮಿಕ ಬಲವುಳ್ಳ ಒಂದು ಲೋಕವನ್ನು ಪಕ್ಕಪಕ್ಕದಲ್ಲೇ ಚಿತ್ರಿಸುವ ಈ ಕೃತಿ, ಕೊನೆಗೆ ತುಂಬ ನಾಟಕೀಯವಾಗಿ ಮುಗಿಯಲೇ ಬೇಕಾಗುವುದು ಅದರ ಕಥನದ ದುರ್ಬಲ ಕಾಲುಗಳು ಸೋತು ಬೀಳುವುದರಿಂದಾಗಿ. ಮುಖ್ಯವಾಗಿ ಈ ಕಥನ ತನ್ನ ಆತ್ಯಂತಿಕ ಪರಿಣಾಮಕ್ಕಾಗಿ (ಕೃಥಾರಿಸಿಸ್?) ಮುಖಾಮುಖಿಗೊಳಿಸುವ ಎರಡು ಪಾತ್ರಗಳಾದ ಶಿವಾನಿ ಮತ್ತು ಸುಜಾತಾರಲ್ಲಿ, ಶಿವಾನಿಯು

ಕಥನದ ಭಾಗವಾಗಿ ಬೆಳೆಯುವಷ್ಟು ಸಹಜವಾಗಿ ಮತ್ತು ಸಶಕ್ತವಾಗಿ ಸುಜಾತಾ ಬೆಳೆಯದೆ ಅವಳ ಕಥನ ಬಹುಪಾಲು ಲೇಖಕ ಹೇಳುವ ಕಥೆಯಾಗಿ ಮಾತ್ರ ಉಳಿಯುತ್ತದೆ. ಈ ಕಥನವನ್ನು ಗಮನಾರ್ಹಗೊಳಿಸುವ ಅವಳ ದುರಂತವನ್ನು ನಿಜಗೊಳಿಸಬಹುದಾಗಿದ್ದ ಅವಳ ಒಳತೋಟಿಗಳಿಗೆ, ಕಥನವು ಅಂತಿಮವಾಗಿ ಕಣ್ಣಿಟ್ಟಿರುವಂತೆ ತೋರುವ ರೋಚಕತೆಯ ಮಧ್ಯೆ, ಅವಕಾಶವೇ ಇಲ್ಲದಂತಾಗಿದೆ. ಹಾಗೇ ಕಥನದ ಸೌಲಭ್ಯಕ್ಕಾಗಿ ಈ ದುರಂತಕ್ಕೆ ಕಾರಣನಾಗಿ ಅದರ ಹಲವು ವಿವರಗಳಿಗೆ ಉತ್ತರದಾಯಿಯಾದ ಅವಳ ಗಂಡ ಮುಕುಂದ ಸಾಗರನ ಪಾತ್ರ ಕಣ್ಣಿಗೆ ಬೀಳದಷ್ಟು ನಗಣ್ಯವಾಗಿ ಚಿತ್ರಿತವಾಗಿದ್ದರೆ, ಅವಳಿಗೆ ನೈತಿಕ ಬೆಂಬಲವಾಗಿ ನಿಲ್ಲಬಯಸುವ ಚಿನ್ಮಯನ ಪಾತ್ರವನ್ನು ಮಾನಸಿಕವಾಗಿ ದುರ್ಬಲವಾಗಿ ಚಿತ್ರಿಸಿದಂತಿದೆ. ಇನ್ನು ಕಥನಕ್ಕೊಂದು ಸಂವಾದಿ ಸಂಕಥನ ಸೃಷ್ಟಿಸಲೆಂದೇ ರೂಪಿಸಲಾಗಿರುವಂತೆ ತೋರುವ ಅಖ್ತರ್ ಹುಸೇನನ ಕಥೆ ಮುಖ್ಯ ಕಥೆಗೆ ಅನುಬಂಧವಾಗಿ ಮಾತ್ರ ಇದ್ದಂತಿದ್ದು ಅತನ ಪಾತ್ರ ತೀರಾ ಆದರ್ಶಮಯವಾಗಿದ್ದು ಈ ಬಗ್ಗೆ ಲೇಖಕರು ಕಥನದ ಭಾಗವಾಗಿ ನೀಡುವ ವಿವರಣೆ ಅಧ್ಯಾತ್ಮವನ್ನು ಧಾರ್ಮಿಕತೆ ಎಂದು ನಂಬಿದಂತಿದೆ. ಹಾಗಾಗಿಯೇ ಕಥನಕ್ಕೊಂದು ಅಧ್ಯಾತಿಕ ಲೇಪ ನೀಡುವ ಉದ್ದೇಶದಿಂದ ಬೆಳದಂತಿರುವ ಅದರ ಶಿಖರ ಭಾಗದಲ್ಲಿನ ಅಖ್ತರ್-ಸುಜಾತಾ ನಡುವಣ ಮಾತುಕತೆಯಲ್ಲಿ ಬರುವ ಶರಣಾಗತಿ, ತ್ಯಾಗ, ವೈರಾಗ್ಯಗಳ ಮಾತು ಬರೀ ಬಣಗು ಎನಿಸುತ್ತದೆ. ಅಖ್ತರನ ಬಂಧನದ ಸೂಚನೆಯಂತೂ ಆತನ ಹವ್ಯಾಸಿ ಧಾರ್ಮಿಕತೆಯಂತೆಯೇ ಕಥನ ಕ್ರಮದಲ್ಲಿ ಕಾಣುವ ಒಂದು ಹವ್ಯಾಸಿ ಧಾರೆಯ ತಾರ್ಕಿಕ ಅಂತ್ಯದಂತಿದೆ.

ಆದರೆ ಇಷ್ಟೆಲ್ಲ ಮಿತಿಗಳ ನಡುವೆಯೂ ಈ ಕಥನ ನಮ್ಮನ್ನು ಸೆರೆಹಿಡಿದಿಡುವಂತಿದ್ದರೆ ಅದಕ್ಕೆ ಕಾರಣ ಲೇಖಕ ಈ ಇಡೀ ದುರಂತವನ್ನು ನೋಡುವ ಮತ್ತು ಹೇಳುವ ರೀತಿ ಮತ್ತು ಹದ. ಅದಕ್ಕಾಗಿ ಆತ ರೂಪಿಸಿಕೊಂಡಿರುವ ಹೊಸ ನುಡಿಗಟ್ಟು ಮತ್ತು (ಇಂಗ್ಲಿಷ್ ಸಂಭಾಷಣೆಯ) ಭಾಷೆ, ಇವುಗಳನ್ನು ಶ್ರೀರಾಮ್ ಹೇಗೆ ಸಜ್ಜುಗೊಳಿಸಿದ್ದಾರೆಂದರೆ ಇಡೀ ಕಥನಕ್ರಮದ ಕೆಳಗೆ ಒಂದು ವ್ಯಂಗ್ಯದ ಝರಿ ಕಂಡೂ ಕಾಣದಂತೆ ಹರಿಯುತ್ತಾ (ಈ ಕೃತಿಯನ್ನು ಶ್ರೀರಾಮ್ ವರ್ಣಿಸಿರುವುದು 'ಆಧುನಿಕೋತ್ತರ ಅಪ್ವರ್ಡಲೀ ಮೊಬೈಲ್ ಮಿಡ್ಲ್ ಕ್ಲಾಸ್ ಕಥೆಗಳ ಕಾದಂಬರಿ!) ಕಥನದ ದುರಂತಕ್ಕೆ ವಿಶಿಷ್ಟ ಚೂಪೊಂದನ್ನು ಒದಗಿಸುತ್ತದೆ.

**-ಡಿ.ಎಸ್. ನಾಗಭೂಷಣ**

ಪು: **ಪ್ಲೇಗ್**(ಕಾದಂಬರಿ) ಇಂಗ್ಲಿಷ್ ಮೂಲ;**ಜಾಕ್ ಲಂಡನ್** ಕನ್ನಡಕ್ಕೆ:**ಚನ್ನಪ್ಪ ಕಟ್ಟಿ** ಪ್ರ:**ಪಲ್ಲವ ಪ್ರಕಾಶನ**, ಚನ್ನಪಟ್ಟಣ(೮೮೮೦೦೮೭೨೩೫) ಪು:೧೪೦ ಬೆ:**ರೂ.೧೨೦/-**

## ಅರ್ಥದ ಹುಡುಕಾಟ



**ಎ**ಂತಹ ಕಷ್ಟದ ಸಂದರ್ಭಕ್ಕೂ ಒಬ್ಬರು ಮತ್ತೊಬ್ಬರಿಗೆ ಒದಗಿ ಬರಲಾಗದ ಸಾರ್ವತ್ರಿಕ ಅಸಹಾಯಕತೆಯನ್ನು 'ಕೊರೋನ'ವು ತಂದೊಡ್ಡಿದೆ. ಈ ರೋಗವನ್ನು ನೋಡುವ, ಅನುಭವಿಸುವ, ಅದರಿಂದ ಅಳಿಂುುವ ಅಥವಾ ಹೇಗೋ ಬದುಕುಳಿಂುುವ, ನಿಂುಂತ್ರಿಸುವ, ಅದು ಉಂಟುಮಾಡುವ ಪರಿಣಾಮುಗಳನ್ನು ಸರಿಪಡಿಸಿಕೊಳ್ಳುವ ಮಾತು ಒಂದೆಡೆಯಾದರೆ, ಒಂದು ಸಮುದಾಯವಾಗಿ ಮತ್ತು ಒಬ್ಬ ವ್ಯಕ್ತಿಯಾಗಿ, ಉಳಿಯದ ಬಾಳನ್ನು ಉಳಿಯುವ ಭಾಷೆಯಲ್ಲಿ ಕಾಪಾಡಿಕೊಳ್ಳುವ ಬರವಣಿಗೆಯೆಂಬ ಹುಡುಕಾಟದ ಹೊಸಬಗೆಗಳನ್ನು ಕಂಡುಕೊಳ್ಳಬೇಕಾದ ಸಾಧ್ಯತೆಯನ್ನೂ ಈ ಕಾಲ ಒಳಗೊಂಡಿದೆ.

ಇಂತಹ ಹುಡುಕಾಟದ ಒಂದು ಸಾಧ್ಯತೆಯನ್ನು ಆಗು ಮಾಡಿರುವ ಕೃತಿ 1912ರಲ್ಲಿ ಪ್ರಕಟವಾದ ಅಮೆರಿಕದ ಲೇಖಕ, ಕವಿ, ಪತ್ರಕರ್ತ ಜಾಕ್ ಲಂಡನ್‌ನ ಕಾದಂಬರಿ 'ಸ್ಕಾರ್ಲೆಟ್ ಪ್ಲೇಗ್'. ನಮ್ಮ ಕಾಲದ 'ಕೊರೋನ' ತಲ್ಲಣಗಳಿಗೆ ಹಿಡಿದ ಕನ್ನಡಿಯಂತಿರುವ ನೂರು ವರ್ಷಗಳ ಹಿಂದಿನ ಈ ಕೃತಿಯನ್ನು ಕತೆಗಾರ ಚನ್ನಪ್ಪ ಕಟ್ಟಿ ಅವರು 'ಲಾಕ್‌ಡೌನ್' ಅವಧಿಯಲ್ಲಿ ಅನುವಾದದ ಮೂಲಕ ಸಾಧ್ಯವಾಗಿಸಿರುವುದು ಸಮಕಾಲೀನ ಸಂದರ್ಭಕ್ಕೆ ಅವರ ಸ್ಪಂದನವಾಗಿಯೂ ಕಾಣುತ್ತದೆ. ಪ್ಲೇಗ್‌ನಿಂದಾಗಿ ತನ್ನ ಸುತ್ತಲಿನ ಜನ ಇದ್ದಕ್ಕಿದ್ದಂತೆ ಇಲ್ಲವಾಗುವ ಕಾಲದ ಆಗುಹೋಗು ಮೂಡಿಸುವ ತಲ್ಲಣಗಳು; ಮನುಷ್ಯನ ಮೂಲಭೂತ ಭಾವಗಳಲ್ಲಿ ಒಂದಾದ ಭಯವು ಸ್ವಭಾವದೊಳಗೆ ಮುಸುಗು ಹಾಕಿಕೊಂಡಿರುವ ಸ್ವಾರ್ಥ, ನೀಚತನಗಳನ್ನು ಮುನ್ನೆಲೆಗೆ ತರುವ ರೀತಿ; ಬೇರೆಯವರನ್ನು ಕೊಲ್ಲಲು ಸದಾ ಸಿದ್ಧನಿರುವ, ಅದಕ್ಕೆಂದೇ ಹತ್ತು ಹಲವು ಆಯುಧಗಳು ಮತ್ತು ಮಾರ್ಗಗಳನ್ನು ರೂಪಿಸುವ ಮನುಷ್ಯನಿಗೆ, ತನ್ನನ್ನು ಕೊಲ್ಲುವ ಆದರೆ ತಾನು ಸುಲಭವಾಗಿ ಮಣಿಸಲಾಗದ, ಕೊಲ್ಲಲಾಗದ ಈ ರೋಗವು ವರ್ತನೆಯ ಮೇಲೆ ಬೀರುವ ಪ್ರಭಾವಗಳು; ನಾಗರಿಕತೆಯ ಅಳಿವಿನ ಒಳಗೆ ಪುಟಿಯುವ ಜೀವಚೈತನ್ಯ; ಭಾಷೆಯಲ್ಲಿ ಉಂಟಾಗುವ ಪಲ್ಲಟಗಳು– ಇತ್ಯಾದಿ ಹಲವು ವಸ್ತುಗಳು ಕಾದಂಬರಿಯಲ್ಲಿ ಹೆಣೆದುಕೊಂಡಿವೆ.

ಮೂಲ ಕಥೆಯನ್ನು ಅರ್ಥ ಮಾಡಿಸುವಲ್ಲಿ ಚನ್ನಪ್ಪ ಕಟ್ಟಿ ಅವರ ಅನುವಾದ ಸಫಲವಾಗಿದೆ. ಆದರೆ, ಇಂಗ್ಲಿಷಿನ ವಾಕ್ಯ ರಚನೆಗಳನ್ನು ಯಥಾವತ್ತು ಕನ್ನಡಕ್ಕಿಳಿಸದೆ, ಪೂರ್ತಿ ಮುರಿದು ಕನ್ನಡಕ್ಕೆ ಒಗ್ಗಿಸಿದ್ದರೆ ಅನುವಾದವು ಸುಗಮಗೊಂಡು, ಅದು ಅರ್ಥದ ಪರಿಧಿಯನ್ನು ದಾಟಿ ಅನುಭವವಾಗುತ್ತಿತ್ತು. "**ಅವನು** ದೇಹವನ್ನು ನಡುಗಿಸುತ್ತ **ನಡೆಯುತ್ತಿದ್ದ. ಅವನು** ತನ್ನ ಕೈಕೋಲಿನ...**ನಡೆಯುತ್ತಿದ್ದ. ಅವನು** ಮೇಕೆಯ ಕಚ್ಚಾಚರ್ಮದಿಂದ ತಯಾರಿಸಿದ...**ಈ** ಮುಖಕವಚವನ್ನು ಅತ್ಯಂತ ಕುಶಲತೆಯಿಂದ...**ಈ** ಮುಖಕವಚದೊಳಗಿನಿಂದ..." (ಒತ್ತನ್ನು ಹಾಕಲಾಗಿದೆ) ಒಂದೇ ಪ್ಯಾರಾದಲ್ಲಿ ಬಂದಿರುವ ಈ ಬಗೆಯ ಯಾಂತ್ರೀಕೃತ ಭಾಷಾಪ್ರಯೋಗ ಕೂಡ ಓದಿಗೆ ತಡೆಯೊಡ್ಡಿದೆ.

ಎಸ್.ದಿವಾಕರ್ ಅವರ ದೀರ್ಘ ಪ್ರಸ್ತಾವನೆಯು ಕಾದಂಬರಿಯ ಓದಿಗೆ ಪೂರಕವಾಗಿದೆ. ಕಾದಂಬರಿ ಮತ್ತು ಅನುವಾದವು ಬಿಟ್ಟುಕೊಟ್ಟ ಹಲವು ಭಾವ, ಸಂಗತಿಗಳನ್ನು ಟಿ.ಎಫ್.ಹಾದಿಮನಿ ಅವರ ಚಿತ್ರಗಳು ಅದ್ಭುತವಾಗಿ ಸೆರೆಹಿಡಿದಿವೆ.

ಪು: **ಅಧೋಲೋಕದ ಟಿಪ್ಪಣಿಗಳು** ಮೂಲ ರಷ್ಯನ್ **ಫ್ಯೊದರ್ ದಾಸ್ತೋವಸ್ಕಿ** ಕನ್ನಡಕ್ಕೆ: **ಗೌತಮ್ ಜ್ಯೋತ್ಸ್ನಾ** ಪ್ರ: **ಕುವೆಂಪು ಭಾಷಾ ಪ್ರಾಧಿಕಾರ,** ಬೆಂಗಳೂರು(೦೮೦–೨೩೧೮೩೩೧೧) **ಪು: ೧೪೫ ಬೆ: ರೂ. ೮೦/–**

## ಹೊಸಭಾಷೆಯ ನಿವೇದನೆ



ಇಪ್ಪತ್ತನೇ ಶತಮಾನದ ಚಿಂತನಾ ಕ್ರಮವನ್ನು ಪ್ರಭಾವಿಸಿದ ಪ್ರಮುಖ ಲೇಖಕರಲ್ಲಿ ಫ್ಯೋದರ್ ದಾಸ್ತೋವ್‌ಸ್ಕಿ ಒಬ್ಬರು. ಹಾಗೆ ನೋಡಿದರೆ ದಾಸ್ತೋವ್‌ಸ್ಕಿಯು ಕನ್ನಡಕ್ಕೆ ಸಮರ್ಥವಾಗಿ ಬಂದಿರುವುದು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಈ ಖಾಲಿಯನ್ನು ತುಂಬುವಂತೆ ಗೌತಮ ಜ್ಯೋತ್ಸ್ನಾ ಅನುವಾದಿಸಿರುವ ದಾಸ್ತೋವ್‌ಸ್ಕಿಯ 'ಅಧೋಲೋಕದ ಟಿಪ್ಪಣಿಗಳು' ಅನುವಾದ ಕೃತಿ ಕಾಣುತ್ತದೆ. 1864ರಲ್ಲಿ ಪ್ರಕಟಗೊಂಡ ದಾಸ್ತೋವ್‌ಸ್ಕಿಯವರ 'ನೋಟ್ಸ್ ಫ್ರಮ್ ಅಂಡರ್‌ಗ್ರೌಂಡ್' ಕಾದಂಬರಿಯ ಅನುವಾದ ಇದು.

ದಾಸ್ತೋವ್‌ಸ್ಕಿಯ 'ಕ್ರೈಂ ಅಂಡ್ ಪನಿಷ್‌ಮೆಂಟ್', 'ಬ್ರದರ್ಸ್ ಕರಮಝೋವ್' ಇತ್ಯಾದಿ ಅತ್ಯದ್ಭುತ ಕಾದಂಬರಿಯ ಬೀಜಗಳು 'ನೋಟ್ಸ್ ಫ್ರಮ್ ಅಂಡರ್‌ಗ್ರೌಂಡ್' ಕೃತಿಯಲ್ಲಿ ಕಾಣುತ್ತವೆ. ಈ ಕಾದಂಬರಿಯ ನಿರೂಪಕನಿಗೆ ಹೆಸರಿಲ್ಲ. ನಿವೃತ್ತ ಸರ್ಕಾರಿ ನೌಕರನಾಗಿರುವ ಈತ, ಬದುಕಿನ ಹತಾಷೆ, ಅವಮಾನ, ನೀಚತನಗಳಿಂದ ಕಂಗೆಟ್ಟು ನೆಲಮಾಳಿಗೆಯಲ್ಲಿ ಬಂಧಿಯಾಗಿದ್ದಾನೆ. ಅವನು ನಂಬಿದ ತತ್ವ, ಆದರ್ಶಗಳು ಅವನಂತೆಯೇ ಪಾತಾಳ ಸೇರಿವೆ. ಒಟ್ಟೊಟ್ಟಾಗಿ ಬದುಕಿರುವ ಇವನ ಮುಗ್ಧ ಜೀವನ ಪ್ರೀತಿ ಮತ್ತು ಲಾಲಸೆಗಳು ನಮ್ಮೆಲ್ಲರಲ್ಲಿಯೂ ಇರುವ ವೈರುಧ್ಯಗಳ ಪ್ರತೀಕವೇ. ಸಿಟ್ಟಿನಲ್ಲಿ ಪ್ರಶ್ನೆಗಳನ್ನು ಕೇಳುತ್ತ ಸಿಡಿಯುವ ಇವನು ತನ್ನ ಮಾತುಗಳನ್ನು 'ಕೇಡಿನ ನೆನಪು' ಎನ್ನುತ್ತಾನೆ. ಅವನ ಈ ನಿಷ್ಠುರ ನಿವೇದನೆಯೇ ಮಾತಿಗೆ ಅರಿವನ್ನೂ ಒದಗಿಸುತ್ತದೆ. "ಈಗನ್ನಿಸುತ್ತೆ, ಇದನ್ನು ನಾನು ಬರೆಯಲೇಬಾರದಿತ್ತು ಎಂದು. ಬರೆಯುವಾಗೆಲ್ಲ ನಾನು ಅವಮಾನಿತನಾಗಿಯೇ ಇದ್ದೆ. ಹೀಗಾಗಿ ಇದು ಸಾಹಿತ್ಯವಲ್ಲ, ದಂಡನೆ. ನನ್ನ ಬದುಕನ್ನೆಲ್ಲಾ ನಾನು ಈ ನೆಲದಡಿಯ ಮೂಲೆಯಲ್ಲಿ ನೈತಿಕವಾಗಿ ಕೊಳೆಯುತ್ತಾ, ಆತ್ಮರತಿಯ ಮತ್ಸರದಲ್ಲಿ ಹಾಳು ಮಾಡಿಕೊಂಡೆ...ಕಾದಂಬರಿಗೆ ನಾಯಕನಿರಬೇಕು, ಆದರೆ ಇಲ್ಲಿ ಬೇಕುಬೇಕಂತಲೇ ಸಂಗ್ರಹಿಸಿದ, ಅನಾಯಕನ ಗುಣಸ್ವಭಾವಗಳ ಚಿತ್ರಣವಿದೆ.." ಎನ್ನುವ ಮಾತನ್ನು ತನ್ನ ನಿರೂಪಕನಿಂದ ಆಡಿಸುವ ಮೂಲಕ ದಾಸ್ತೋವ್‌ಸ್ಕಿಯು ಬರವಣಿಗೆಯ ಜೀವ ಮಿಡಿತವನ್ನು ಮುಟ್ಟುವ ಬಗೆ ಮತ್ತು ಕಾದಂಬರಿ ಪ್ರಕಾರವನ್ನು ಹಿಗ್ಗಿಸುವ ರೀತಿಯು ಅದ್ಭುತವಾಗಿದೆ.

ನಿರೂಪಕನ ಬದುಕಿನ ದುರಂತ, ಸಂಘರ್ಷ, ತಾಕಲಾಟಗಳು ತನ್ನನ್ನು ಅಭಿವ್ಯಕ್ತಿಗೊಳಿಸಿಕೊಳ್ಳಲು ಸೃಷ್ಟಿಸುವ ನೆಲಮಾಳಿಗೆಯೇ ನಮ್ಮೆಲ್ಲರ ಮನಸ್ಸಿನೊಳಗೆ ಅಡಗಿರುವ ಅಧೋಲೋಕವೂ ಆಗಿ ಕಾಣುವುದು ಕಾದಂಬರಿ ಮತ್ತು ಅನುವಾದದ ಶಕ್ತಿ. ಗೌತಮ್ ಅವರ ಅನುವಾದವು ಮೂಲ ಪಠ್ಯದ ಅನುಭವ ತೀವ್ರತೆಯನ್ನು ಸಮರ್ಥವಾಗಿ ಕನ್ನಡಕ್ಕೆ ತಂದಿದೆ. ಅನುವಾದದ ಓತಪ್ರೋತ ಸಂಸ್ಕೃತ ಪದಗಳ ಬಳಕೆಯನ್ನು ಅಚ್ಚಕನ್ನಡ ಪದಗಳು ತುಂಬಬಹುದಿತ್ತು. ಹೊಸಭಾಷೆಯ ಹದವನ್ನು ಕಂಡುಕೊಂಡಿರುವ ಗೌತಮ್ ಈ ಮೂಲಕ ಭರವಸೆಯ ಅನುವಾದಕರಾಗಿ ಕಾಣುತ್ತಾರೆ.

**–ಜ, ನಾ ತೇಜಶ್ರೀ**

ಪು; **ಮಹಾಕಥನದ ಮಾಸ್ತಿ** ಲೇ: **ಕೆ. ಸತ್ಯನಾರಾಯಣ** ಪ್ರ: **ವಸಂತ ಪ್ರಕಾಶನ,** ಬೆಂಗಳೂರು (೦೮೦–೨೨೪೪೩೯೯೬) ಪು: ೧೯೫ **ಬೆ : ರೂ. ೧೬೦/–**

## ಸಹೃದಯ ವಿಮರ್ಶೆ



ಸ್ವತಃ ಕನ್ನಡದ ಪ್ರಮುಖ ಕತೆಗಾರರಾಗಿರುವ ಕೆ. ಸತ್ಯನಾರಾಯಣ ಅವರ 'ಮಹಾಕಥನದ ಮಾಸ್ತಿ' ಮಾಸ್ತಿಯವರ ಕಥಾಪ್ರಪಂಚಕ್ಕೆ ಒಂದು ಸಹೃದಯೀ ಪರಿಚಯವೂ, ಮಾಸ್ತಿ ಅವರ ಕಥಾಪ್ರಪಂಚದ ಒಟ್ಟಾರೆ ?ವಿನ್ಯಾಸ? ವನ್ನು ಶೋಧಿಸುವ ಒಂದು ಪ್ರಯತ್ನವೂ ಆಗಿದೆ. ಈ ಸಂಕಲನದಲ್ಲಿ ಬೇರೇ ಬೇರೆ ಸಂದರ್ಭಗಳಿಗಾಗಿ ಬರೆದಿರುವ ಲೇಖನಗಳ ಜೊತೆಗೆ ಈ ಸಂಕಲನಕ್ಕಾಗೇ ಬರೆದಿರುವ ಲೇಖನಗಳೂ ಇವೆ. ಮಾಸ್ತಿ ಕತೆಗಳನ್ನು ಪರಿಚಯ ಮಾಡಿಕೊಳ್ಳುವ ಉದ್ದೇಶ ಹೊಂದಿರುವ ಓದುಗರನ್ನು ಕೈಹಿಡಿದು ನಡೆಸಿ, ಆ ಕಥಾಲೋಕದ ಹಾದಿಬೀದಿಗಳಲ್ಲಿ ಸುತ್ತಾಡಿಸುವ ಪ್ರಯತ್ನ ಸಫಲವಾಗಿದೆ. ಹಾಗೆಯೇ ಮಾಸ್ತಿ ಅವರ ಕತೆಗಳನ್ನು ಒಟ್ಟಾರೆಯಾಗಿ ಪರಿಗಣಿಸಿ, ಕತೆಗಳ ನಡುವಿನ ಅಂತರ್ಸಂಬಂಧಗಳ ?ವಿಶ್ಲೇಷಣೆ? ಮಾಡುವಾಗ ಕೆಲವು ಆಸಕ್ತಿದಾಯಕ ಒಳನೋಟಗಳಿವೆ.

ಮಾಸ್ತಿ ಕತೆಗಳ ಒಟ್ಟಾರೆ ವಿನ್ಯಾಸದ ಬಗ್ಗೆ ಮುಖ್ಯವಾಗಿ ಮೊದಲ ಮೂರು ಲೇಖನಗಳಲ್ಲಿ ಹಾಗೂ ಈ ಸಂಕಲನದ ಉಪಸಂಹಾರದ ರೀತಿಯಲ್ಲಿ ಬರೆದಿರುವ ಕೊನೆಯ ಲೇಖನದಲ್ಲಿ ಸತ್ಯನಾರಾಯಣ ಅವರು ಮಾತಾಡುತ್ತಾರೆ. ಕಾಣುವುದು–ಪ್ರಸ್ತುತಗೊಳಿಸಿವುದು, ಹೇಳುವುದು–ದಾಟಿಸುವುದು, ಜೀವನಾನುಭವ–ಜೀವನಜ್ಞಾನಾನುಭವ, ಈ ರೀತಿಯ ಕೆಲವು ಪರಿಕಲ್ಪನೆಗಳನ್ನು ಉಪಯೋಗಿಸಿ ಮಾಸ್ತಿ ಸಾಹಿತ್ಯದ ವೈಶಿಷ್ಟತೆಯನ್ನು ತೋರಿಸುವ ಪ್ರಯತ್ನ ಇದೆ. ವರ್ತಮಾನ–ಚರಿತ್ರೆಯ ಸಾತತ್ಯ, ಚರಿತ್ರೆಯನ್ನು ಕತೆಗಳಂತೆಯೂ, ಕತೆಗಳನ್ನು ಚರಿತ್ರೆಯಂತಲೂ ಭಾವಿಸುವುದು, ಮಾಸ್ತಿಯವರ ಎಲ್ಲಾ ಕತೆಗಳಿಗೂ ಅನ್ವಯವಾಗುವ ಸಮಾನ ಅಂಶ ಅನ್ನುವುದು, ಹಾಗೂ ಮಾಸ್ತಿ ಕತೆಗಳು ನಿರ್ಧಿಷ್ಟ ಕಾಲ–ದೇಶಗಳಲ್ಲಿ ರಚಿತವಾಗಿದ್ದರೂ ಅವನ್ನು ಇದುವರೆಗೆ ನೆಡೆದುಕೊಂಡು ಬಂದಿರುವ ಮನುಷ್ಯ ಸ್ವಭಾವದ ಬಗ್ಗೆ ವ್ಯಾಖ್ಯಾನ ಎಂದು ನೋಡಬೇಕು ಅನ್ನುವುದು ಸತ್ಯನಾರಾಯಣ ಅವರ ಅಭಿಪ್ರಾಯವಾಗಿದೆ, ಹಾಗೇ ?ಆಧುನಿಕ?ರು ನಿರೀಕ್ಷಿಸುವ ಆತಂಕ, ನ್ಯೂರೋಸಿಸ್, ಧಾವಂತ, ಉದ್ವಿಗ್ನತೆಗಳ ಬದಲು ಮಾಸ್ತಿ ಕತೆಗಳಲ್ಲಿ ಕಾಣುವುದು ಧಾರಣಾಶಕ್ತಿ ಹಾಗೂ ಸಂಯಮ ಅನ್ನುತ್ತಾರೆ. ಸತ್ಯನಾರಾಯಣರವರು ಹೇಳುವ ಇನ್ನೊಂದು ಮುಖ್ಯವಾದ ಅಂಶ ನಮ್ಮನ್ನು ನಮ್ಮ ಕಣ್ಣಿಂದಲೇ ನೋಡಿಕೊಳ್ಳಬೇಕು ಅನ್ನುವ ದೃಷ್ಟಿಕೋನ ಮಾಸ್ತಿಯವರ ಮೊದಲ ಕತೆಯಿಂದಲೇ ಇದೆ ಅನ್ನುವುದು. ಮಾಸ್ತಿಯವರ ಕತೆಗಳನ್ನು ಸಮಗ್ರವಾಗಿ ನೋಡುವಲ್ಲಿ ಮತ್ತು ಅರ್ಥ ಮಾಡಿಕೊಳ್ಳುವಲ್ಲಿ ಸಾದಂರ್ಭಿಕವಾಗಿ ಸತ್ಯನಾರಾಯಣ ಅವರು ಬರೆದಿರುವ ಲೇಖನಗಳು ಅವರು ಈ ಸಂಕಲನಕ್ಕಾಗೇ ಬರೆದಿರುವ ?ಮಹಾನ್ ಕಥನದ ಗುಟ್ಟುಗಳು? ಅನ್ನುವ ಲೇಖನಕ್ಕಿಂತ ಹೆಚ್ಚು ಯಶಸ್ವಿಯಾಗಿವೆ.

ಇನ್ನ ಮಾಸ್ತಿ ಕತೆಗಳನ್ನು ವಿಷಯಾಧಾರಿತವಾಗಿ ವಿಂಗಡಿಸಿಕೊಂಡು ಸತ್ಯನಾರಾಯಣರವರು ಕೆಲವು ಅಧ್ಯಾಯಗಳಲ್ಲಿ ಚರ್ಚಿಸುತ್ತಾರೆ. ಹಾಗೆ ಮಾಡುವಾಗ ಕೆಲವು ಆಸಕ್ತಿದಾಯಕವಾದ ವಿಷಯಗಳನ್ನು ಹೇಳುತ್ತಾರೆ. ಮಾಸ್ತಿಯವರ ಕತೆ "ಗೌತಮಿ ಹೇಳಿದ ಕತೆ"ಯಲ್ಲಿನ 'ಫೆಮಲೆ ಬೊಂಡ್ಡಿನ್ಗ್' ಬಗ್ಗೆ ಗಮನ ಸೆಳೆದಿರುವುದು ಸೂಕ್ತವಾಗಿದೆ. ಹಾಗೆಯೇ ಮಾಸ್ತಿಯವರ ಕತೆಗಳೆಲ್ಲಾ ನೆಡೆಯುವುದು ಸಾರ್ವಜನಿಕ ಸ್ಥಳಗಳಲ್ಲಿ ಅನ್ನುವುದು ಹಾಗೂ ಪ್ರಕೃತಿಯ ವಿವರಣೆ ಮಾಸ್ತಿ ಕತೆಗಳಲ್ಲಿ ಕೇವಲ ಪ್ರಾಸಂಗಿಕ ಹಾಗೂ 'ಫ್ಹುನ್ಕ್ಟಿಒನಲ್' ಅನ್ನುವುದು ಬಹಳ ಕುತೂಹಲಕಾರಿಯಾದ ಅಂಶವಾಗಿದೆ. ಸತ್ಯನಾರಾಯಣ ಅವರು

ಸೂಚಿಸಿರುವ ಈ ಅಂಶಗಳು ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಒಳಗಾಗಬೇಕಿವೆ. ಅವರು ಹೇಳಿರುವ ?ಒಳಾಂಗಣದ ಅನುಭವ, ಸಮಸ್ಯೆ, ಚಿಂತನೆಯನ್ನು ಹೀಗೆ ಹೊರಗಿನ ವಾತಾವರಣದಲ್ಲಿ ಕೇಳಿಸಿಕೊಂಡು ಓದುಗರಿಗೆ? ಒಪ್ಪಿಸುವುದು ಅನ್ನುವ ಮಾತು ಬಹಳ ಮುಖ್ಯವಾದ ಒಳನೋಟವಾಗಿದೆ. ಇದನ್ನು ಸತ್ಯನಾರಾಯಣ ಅವರು ಹೇಳಿರುವ ಹಾಗೆ ನವೋದಯ ಮಾರ್ಗದ ಇತರ ಲೇಖಕರ ಕತೆಗಳೊಂದಿಗಷ್ಟೇ ಅಲ್ಲದೇ ವೈದೇಹಿ ಹಾಗೂ ಇತರೆ ಪ್ರಮುಖ ಮಹಿಳಾ ಲೇಖಕಿಯರ ಕತೆಗಳ ಜೊತೆಗೂ ಇಟ್ಟು ನೋಡುವ ಅವಶ್ಯಕತೆಯಿದೆ. ಇನ್ನು ?ಪಂಡಿತರ ಮರಣ ಶಾಸನ? ಕತೆಯ ಬಗ್ಗೆ ಬರೆದಿರುವ ?ಇತಿಹಾಸದ ತಪ್ಪು-ಒಪ್ಪು: ಮಾಸ್ತಿ ನ್ಯಾಯ? ಅನ್ನುವ ಲೇಖನ ಮಾಸ್ತಿಯವರ ಈ ಕತೆಯನ್ನು ಈಗ ನಾವು ಮತ್ತೆ ಓದಲು ಪ್ರೇರಣೆ ನೀಡುತ್ತದೆ.

ಇನ್ನು ಸತ್ಯನಾರಾಯಣ ಅವರು ಮಾಸ್ತಿಯವರ ಕತೆಗಳನ್ನು ಗುಂಪುಗಳಾಗಿ ವಿಭಜಿಸಿ, ಪ್ರತಿ ಕತೆಯ ಸಾರಾಂಶವನ್ನು ಕೊಟ್ಟು ಆ ಕತೆಗಳ ವಿಶ್ಲೇಷಣೆಯನ್ನು ಮಾಡುತ್ತಾರೆ. ?ಬಿಳಿಗಿರಿ ರಂಗ? ಮತ್ತು ?ರಂಗನಹಳ್ಳಿಯ ರಾಮ? ಕತೆಗಳ ಬಗ್ಗೆ ಬರೆದಿರುವುದರಲ್ಲಿ ವಿವರಣೆ ಮತ್ತು ವಿಶ್ಲೇಷಣೆ ಹದ ತಪ್ಪದಂತೆ ಬೆರೆತುಕೊಂಡಿವೆ. ಈ ಮಾತನ್ನು ಎಲ್ಲಾ ಕತೆಗಳ ಬಗ್ಗೆಯೂ ಹೇಳಲಾಗುವುದಿಲ್ಲ. ಅನೇಕ ಕಡೆ ಕತೆಯ ದೀರ್ಘ ಸಾರಾಂಶದ ನಂತರ ಬರುವ ವಿಶ್ಲೇಷಣೆ ಸಪ್ಪೆಯೆನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ನನಗಂತೂ ಬಹಳ ಆಸಕ್ತಿದಾಯಕ ಅನಿಸುವ ?ಟಾಲ್ ಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳು? ಬಗೆಗಿನ ಲೇಖನವನ್ನು ನೋಡಬಹುದು. ಕತೆಯ ಸಾರಾಂಶವನ್ನು ನೀಡಿದ ಮೇಲೆ ಕತೆಯ ಬಗ್ಗೆ ಒಂದೇ ವಾಕ್ಯದಲ್ಲಿ ವಿಶ್ಲೇಷಣೆಯನ್ನು ನೀಡುತ್ತಾರೆ. ಕೆಲವೆಡೆ ಓದುಗನ ಕೈಹಿಡಿದು ನಡೆಸುವುದು ಸ್ವಲ್ಪ ಹೆಚ್ಚಾಗಿದೆಯೇನೋ ಅನ್ನಿಸುತ್ತದೆ. ಆದರೆ ಮಾಸ್ತಿಯವರ ಕತೆಗಳು ಮತ್ತೆ ಮತ್ತೆ ಚರ್ಚೆಯನ್ನು ಬಯಸುತ್ತವೆ ಅನ್ನುವುದನ್ನು ಸತ್ಯನಾರಾಯಣರವರು ಸಮರ್ಥವಾಗಿ ತೋರಿಸಿಕೊಟ್ಟಿದ್ದಾರೆ.

**-ಬಿ.ವಿ. ರಾಮಪ್ರಸಾದ್**

ಪು: **ಚಿತ್ರಸಲ್ಲಾಪ**(ಸಿನಿಮಾ ಸಂಸ್ಕೃತಿ ಕುರಿತ ಟಿಪ್ಪಣಿಗಳು) ಪ್ರ: **ಯಾಜಿ ಪ್ರಕಾಶನ**, ಹೊಸಪೇಟೆ(೯೪೪೮೧೦೪೨೪೦೦) ಪು: ೧೭೪ ಬೆ: ರೂ. ೧೮೦/-

## ಕನ್ನಡ ಚಿತ್ರರಂಗ ಕುರಿತ ಕೆಲ ಒಳನೋಟಗಳು



ಕನ್ನಡದ ಹಿರಿಯ ಪತ್ರಕರ್ತ, ನಟ, ನಿರ್ದೇಶಕ, 'ಕನ್ನಡದ ಜಾಣ ಜಾಣೆಯರ' ಪತ್ರಿಕೆಯ ಬರಹಗಾರ ಎಂಬ 'ಇಮೇಜ್'ನ ಎನ್.ಎಸ್.ಶಂಕರ್ ಅವರ ಸಿನಿಮಾ ಬರಹಗಳ ಸಂಕಲನವೇ 'ಚಿತ್ರ ಸಲ್ಲಾಪ'. ೧೯೯೩ರಿಂದ ೨೦೧೯ರ ವರೆಗಿನ ಅವಧಿಯಲ್ಲಿ ಪ್ರಕಟವಾದ ಮೂವತ್ತೆರಡು ಬರಹಗಳು ಇದರಲ್ಲಿವೆ.

' ಚಿತ್ರರಂಗಕ್ಕೆ ಸಂಬಂಧಿಸಿದ ವಿವಿಧ ಆಯ್ಕೆ ಸಮಿತಿಗಳ ಸದಸ್ಯರಾಗಿ, ಸಿನಿಮಾ ಮಾಧ್ಯಮದ ಪ್ರಾಧ್ಯಾಪಕರಾಗಿ ಮತ್ತು ಸ್ವತಃ 'ಸಿನಿಮಾಪ್ರೋತ'ರಾಗಿ ಗಳಿಸಿದ ಅಪಾರ ಅನುಭವ, ವಿಶಿಷ್ಟ ಒಳನೋಟ ಹಾಗೂ ಪ್ರಶ್ನಿಸುವ ಛಾತಿಯನ್ನು ಒಳಗೊಂಡ ಬರಹಗಳ 'ಚಿತ್ರ ಸಲ್ಲಾಪ' ಶೀರ್ಷಿಕೆ ಈ ಸಂಕಲನದ ಶಕ್ತಿ ಮತ್ತು ಮಿತಿ ಎರಡಕ್ಕೂ ನಿದರ್ಶನವೆಂಬಂತಿದೆ. ಸಿನಿಮಾಪ್ರೋತರು ಒಂದೆಡೆ ಸೇರಿದಾಗ ನೋಡಿದ, ಕೇಳಿದ ಚಿತ್ರಗಳ ಬಗ್ಗೆ ಸ್ವಾರಸ್ಯಕರವಾಗಿ ಹರಟುತ್ತಾರೆ. ಪ್ರಣಯಿಗಳ ಅಥವಾ ಗಂಡ ಹೆಂಡಿರ ನಡುವಿನ 'ಸಲ್ಲಾಪ'ದ ಆಪ್ತತೆಯಲ್ಲಿ ಮಾತನಾಡಿಕೊಳ್ಳುತ್ತಾರೆ. ಪ್ರೀತಿಯ ಜಗಳ ಆಡುತ್ತಾರೆ. ಶಂಕರ್ ಬರಹಗಳು ನಾವು ತಲೆದೂಗುವಂತೆ ಮಾಡುತ್ತವೆ, ವಿವರಗಳು ಮನಸ್ಸನ್ನು ತಟ್ಟುತ್ತವೆ, ಕುತೂಹಲ ಕೆರಳಿಸುತ್ತವೆ;ಪ್ರಶ್ನಿಸುತ್ತವೆ, ಸಿದ್ಧವಲ್ಲದ ಉತ್ತರಗಳನ್ನು ನೀಡುತ್ತವೆ.ಮಾಮೂಲಿ ಸಿನಿಮಾ ಬರಹಗಳಿಗಿಂತ ತೀರ ವಿಭಿನ್ನ ಜಾಡಿನಲ್ಲಿ ಓದುಗರನ್ನು ವಿಚಾರಕ್ಕೆ ಹಚ್ಚುತ್ತವೆ.ಇದು ಈ ಸಂಕಲನದ ಶಕ್ತಿ.'ಮಾಯಾಮೃಗದ ಬೆನ್ನಟ್ಟಿ', 'ಪುಟ್ಟಣ್ಣ: ಕೇವಲ ನೆನಪು ಸಾಕೇ?', 'ನನ್ನ ಜೀವನದ ಗಂಡಸರು', 'ಉಜ್ವಲ ಸಿನಿಮಾ ಧ್ಯಾನ' ಎಂಬ ಮುನ್ನುಡಿ ಲೇಖನ ಇವುಗಳನ್ನು ಹೊರತುಪಡಿಸಿ ನೋಡುವುದಾದರೆ ಈ ಸಂಕಲನದಲ್ಲಿ ಚಿತ್ರರಂಗದ ಆರ್ಥಿಕತೆ, ಮಾಫಿಯ, ಲೈಂಗಿಕ ಶೋಷಣೆ, ತೆರೆಯಮರೆಯ ಕಲಾವಿದರ ದುಸ್ಥಿತಿ, ಎಲ್ಲೆಗಳನ್ನು ಮೀರಿದ ಸೃಜನಶೀಲ ನಿರ್ದೇಶಕರ ಗೈರು ಹಾಜರಿ, ಪ್ರೇಕ್ಷಕರ ಒಲವುನಿಲುವುಗಳಲ್ಲಿ ಆಗಿರುವ ಸ್ಥಿತ್ಯಂತರದ ಹಿನ್ನೆಲೆ, ಸಿನಿಮಾ ರಸಗ್ರಹಣ ಆಂದೋಲನ ನೆಲಕಚ್ಚಿರುವುದು, ಸಬ್ಸಿಡಿ ಹಾಗೂ ಚಲನಚಿತ್ರ ಪ್ರಶಸ್ತಿ ರಾಜಕಾರಣ,ವಾಹಿನಿಗಳ ರಿಯಾಲಿಟಿ ಶೋಗಳು,ಧಾರಾವಾಹಿಗಳ ರುಚಿಹೀನತೆ ಇತ್ಯಾದಿಗಳ ಬಗ್ಗೆ ಗಂಭೀರವಾದ ಚರ್ಚೆ, ವಾಗ್ವಾದ ಹುಟ್ಟುಹಾಕಬಹುದಾದ ಬರಹಗಳಿಲ್ಲ ಎಂಬುದು ನಿರಾಸೆ ಮೂಡಿಸುತ್ತದೆ. ಬಹುವಿಧ ಕ್ಷೇತ್ರಗಳಲ್ಲಿ ದುಡಿದ ಶಂಕರ್ ಅವರಿಂದ ಈ ಬಗೆಯ ಚಿಂತನೆಗಳನ್ನು ಇಂಥ ಒಂದು ಸಂಕಲನದಲ್ಲಿ ನಿರೀಕ್ಷಿಸುವುದು ಅಸಹಜವಾಗಲಾರದು.

' ನನ್ನ ಜೀವನದ ಗಂಡಸರು': ಜಯಂತಿ ಬಗೆಗಿನ ಲೇಖನ ಬರೆದು ೨೫ ವರ್ಷಗಳಾದರೂ ಟಿಪ್ಪಣಿ ರೂಪದಲ್ಲಿ ಭಾರತೀಯ ಹಾಗೂ ಕನ್ನಡ ಚಿತ್ರರಂಗದಲ್ಲಿ ಎದ್ದ 'ಮೀ ಟೂ' ಬಿರುಗಾಳಿಯನ್ನು ಕುರಿತು ಶಂಕರ್ ಬರೆಯಬಹುದಿತ್ತು.ಈ ವಿವಾದದ ಸತ್ಯಾಸತ್ಯಗಳನ್ನು ಬಯಲಿಗೆಳೆಯಬಹುದಿತ್ತು.ಹೀಗಾಗಿ ಈ ಲೇಖನ ದಾಖಲೆಯಾಗಿ ಉಳಿಯುವುದೇ ಹೊರತು ಪ್ರಸಕ್ತ ವಿದ್ಯಮಾನಗಳಿಗೆ ಕನ್ನಡಿ ಹಿಡಿಯುವ ಮುಂದುವರಿಕೆಯಾಗುವುದಿಲ್ಲ. ' ಕಾಸರವಳ್ಳಿ ಕೀರ್ತನೆ' ಪುಸ್ತಕ ಸಮೀಕ್ಷಾ ಲೇಖನ (೨೦೧೯) ಮೆಚ್ಚುವಂಥದ್ದೆ. ಆದರೆ ಈಗ ಗಿರೀಶರು ಇನ್ನೂ "ಬೌದ್ಧಿಕ ಪ್ರಯಾಸದ ಹಾದಿ"ಯಲ್ಲೇ ಇದ್ದಾರಾ? ಎಂದು ತಿಳಿಯ ಬಯಸುವ ಓದುಗರ ಕುತೂಹಲಕ್ಕೆ ತಣ್ಣೀರೆರಚುತ್ತದೆ. ಏಕೆಂದರೆ ಗಿರೀಶರು ತಮ್ಮ ಮೊದಲಿನ ಚಿತ್ರಗಳಿಗಿಂತ ಭಿನ್ನವಾದ ಕೊಂಚ ಸುಲಭಗ್ರಾಹ್ಯವಾದ ಸಮಾಜಮುಖಿಯಾದ ಹಾದಿಯನ್ನು ತುಳಿದಿದ್ದಾರೆ ಎಂಬುದಕ್ಕೆ 'ಗುಲಾಬಿ ಟಾಕೀಸ್ ','ಕೂರ್ಮಾವತಾರ' ಚಿತ್ರಗಳು ಸಾಕ್ಷಿ. ರಮೇಶ್ ಅರವಿಂದ್ ಬಗೆಗಿನ ಲೇಖನ ಅವರ ವ್ಯಕ್ತಿತ್ವದ ' ಅತಿಮಾನುಷ ಅಚ್ಚುಕಟ್ಟಿಗೆ' ಅತೀತವಾದುದನ್ನು ಹುಡುಕುವ ವ್ಯರ್ಥ ಪ್ರಯತ್ನದಂತಿದೆ.'ಮುನ್ನಾಭಾಯಿಯ ಮಂತ್ರಿಕ ಅಪ್ಪುಗೆ' ಲೇಖನ "ಜನಪ್ರಿಯ ನುಡಿಕಟ್ಟಿನ" ಸಿನಿಮಾದ ಅನಗತ್ಯ ವೈಭವೀಕರಣ. 'ಚಿತ್ರ ಸಲ್ಲಾಪ'ವನ್ನು ನೆಪವಾಗಿಟ್ಟುಕೊಂಡು ಹೇಳುವುದಾದರೆ ಕನ್ನಡ ಚಿತ್ರರಂಗದ ರಾಜಬೀದಿಗಳ ಬಗ್ಗೆ, ಕೊಳೆಗೇರಿಗಳ ಬಗ್ಗೆ, ವೈಭವ ಹಾಗೂ ದಾರಿದ್ರ್ಯದ ಬಗ್ಗೆ, ತಾರೆಗಳೊಳಗಿನ ಹುಲುಮಾನವರ ಬಗ್ಗೆ, ತೆರೆಯ ಮರೆಯಲ್ಲೇ ಮುದುಡಿಹೋಗುವ ಅಸಾಮಾನ್ಯ ಕಲಾವಿದ-ಮನುಷ್ಯರ ಬಗ್ಗೆ ಶಂಕರ್ ಅವರಿಂದ ಇನ್ನಷ್ಟು ಬೇಕು ಎಂಬ ಬಯಕೆ.

**-ಮಹಾಬಲೇಶ್ವರ ರಾವ್**

**೨ನೇ ಪುಟದಿಂದ)**

ಬಗೆ ಹೇಗೆಂಬುದಕ್ಕೆ ವಿವರಗಳಿಲ್ಲ.

**-ಎನ್. ಎಮ್. ಕುಲಕರ್ಣಿ,**ಹೆಗ್ಗೋಡು.

ಡಿಸೆಂಬರ್ ಸಂಚಿಕೆ ಸಂಪಾದಕರ ಟಿಪ್ಪಣಿಯಿಂದ ಹಿಡಿದು ಪುಸ್ತಕಾವಲೋಕನದವರೆಗೂ ಬರಹಗಳು ಸೂಕ್ಷ್ಮವಾದ ಒಳನೋಟಗಳಿಂದ ಕೂಡಿ ಗಮನ ಸೆಳೆಯುತ್ತವೆ. ಇವತ್ತು ಗಾಂಧಿ ಮತ್ತು ಅಂಬೇಡ್ಕರರನ್ನು ಮುಖಾಮುಖಿಗೊಳಿಸಿ ಹಳೆಯ ವಾದಗಳನ್ನು ಮುಂದಿಟ್ಟುಕೊಂಡು (ಅದರ ಪೂರ್ಣ ಸತ್ಯಾಂಶವನ್ನು ಅರಿಯದೆ) ಗಾಂಧಿ ಅವಹೇಳನ ಮುಂದುವರೆಯುತ್ತಲೇ ಇದೆ. ಇದು ಆ ಇಬ್ಬರ ವ್ಯಕ್ತಿತ್ವಕ್ಕೆ ಮಸಿಬಳಿದಂತೆ. ಇವತ್ತು ಭಾರತಕ್ಕೆ ಗಾಂಧಿ, ಅಂಬೇಡ್ಕರ್ ಇಬ್ಬರೂ ಅಗತ್ಯ. ಅಂಬೇಡ್ಕರ್ ಆಶಯ ಗಾಂಧಿಯಲ್ಲಿಯೂ ಇತ್ತು, ಗಾಂಧಿ ಆಶಯ ಅಂಬೇಡ್ಕರ್‌ರಲ್ಲಿಯೂ ಇತ್ತು. ಆ ಆಶಯ ಸಂವಿಧಾನವಾಗಿ ಹೊರಮೂಡಿದ್ದು ನಿಜ ಎಂಬುದು ನಮ್ಮ ಒಳಗಣ್ಣಿಗೆ ಗೊತ್ತಾಗಬೇಕಿದೆ. ಈ ಬಗೆಗೆ ಚೆನ್ನಿ ಅವರ ಲೇಖನ ಕಣ್ಣು ತೆರೆಸುತ್ತದೆ. ಹಾಗೆ ನೀವು ಕಲಾಕಾರ ಕರಿಯಪ್ಪನವರ ಕಲೆಯನ್ನು ಗುರುತಿಸಿ ಬರೆದಿದ್ದು, ಸಮಾಜವಾದಿಗಳಿಗೆ ಮಾತ್ರ ಅಂತಹ ವ್ಯಕ್ತಿತ್ವವನ್ನು ಗುರುತಿಸಲು ಸಾಧ್ಯವೇನೋ ಅನಿಸಿತು. ಏಸು ಕುರಿತ ಧರ್ಮ ವಿಚಾರವೂ ಕೂಡ ಸೊಗಸಾಗಿತ್ತು.

**- ಸಂಜಯ್ ಕುಮಾರ್**, ಬೊಕ್ಕೆಪುರ

ವಿನಯಾರವರ ಕಥೆ "ಕಾರೆಂಬೋ ಕತ್ತಲಲಿ ...." ಹಿಡಿಸಿತು. ತೊರ್ಕೆ ನಾಡವರ ಕನ್ನಡದ ಕಂಪಿನೊಂದಿಗೆ ನಿರೂಪಿಸಿರುವ ಕಥನ ಓದುವವರಿಗೆ ಸರಿಯಾಗಿ ದಕ್ಕಲು ಎರಡು ಮೂರು ಸಾರೆಯಾದರೂ ಓದಬೇಕು. ಪ್ರತಿಬಾರಿ ಓದಿದಾಗಲೂ ಹೊಸ ಹೊಸ ಒಳನೋಟಗಳನ್ನು ಬಿಂಬಿಸುವ ಕಥೆಯಿದು. ಮೂಲ ಮನೆ ಹಾಗೂ ಸ್ವಂತ ಊರಿನ ಸೆಳೆತಗಳು, ಗಾಂಧೀಗಿರಿಯಿಂದ ಪೋಲಿಸಗಿರಿಗೆ ತಲೆಮಾರು ಹೊರಳಿ ಕಳೆದುಕೊಂಡಿದ್ದೇನನ್ನು? ಹೆಣ್ಣು ಜೀವಗಳು ತಮ್ಮ ಸ್ವಂತ ಮನೆ, ಸಮಾಜದಲ್ಲಿಯೆ ಹೇಗೆ ತಮ್ಮ ಮೈಮನಕ್ಕೆ ಆದ ಗಾಯಗಳನ್ನು ಮುಚ್ಚಿಕೊಂಡು ಬಲಿಪಶುಗಳಾಗುತ್ತಾರೆ ಹಾಗೂ ಕುಟುಂಬದ ಸದಸ್ಯರ ಹಿತಕ್ಕಾಗಿ ನೋವನ್ನು ನುಂಗುತ್ತಾರೆ ಎನ್ನುವ ಸಂಕೀರ್ಣ ವಿಷಯಗಳನ್ನು ಒಟ್ಟಂದವಾಗಿ ಕಟ್ಟಿಕೊಟ್ಟಿದೆ.

"ಯಾವುದೋ ಚಿತ್ರಸಂತೆಯ ನಟ್ಟನಡುವಿನಲ್ಲಿ ದಿಕ್ಕೆಟ್ಟು ನಿಂತವರಂತಿದ್ದೆವು" ಎಂಬಲ್ಲಿ ಕಥೆಯು ನಿರೂಪಣೆಯ ಶಿಖರಕ್ಕೇರಿ ಕಥೆಗಾರ್ತಿ ಹಾಗೂ ಅನ್ನಕ್ಕನ ಜೋಡಿಮನಗಳ ಬೇಗುದಿಗಳನ್ನು ಪರಿಣಾಮಕಾರಿಯಾಗಿ ಹೊರಹಾಕಿದೆ. ದಿಕ್ಕಿಲ್ಲದ ಹೆಣ್ಣುಜೀವಗಳ ಆರ್ತನಾದದ ಸದ್ದು ಕಲ್ಮನೆಯಿಂದ ಹೊರಹೊರಟು ಕಥಾನಾಯಕಿಯ ಎದೆಯಲ್ಲಿ ಅನುರಣಿಸುತ್ತದೆ. ಜಡ್ಡುಹಿಡಿದು ನಿತ್ರಾಣವಾಗಿ ಮಲಗಿದ ಪುರಂದರನನ್ನು ಮಾನವೀಯತೆಯಿಂದ ನೋಡಲು ಬಂದ ಅನ್ನಕ್ಕಳನ್ನು ಆತ ಮೀಸೆಹಾರಿಸಿ, ಕಣ್ಣು ಮಿಟುಕಿಸುತ್ತಾ ಅವಳ ಹಳೆಯ ಗಾಯಗಳನ್ನು ಮತ್ತೆ ಕೆದಕುತ್ತಾನೆ. ಪುರುಷ ಮನಸ್ಸಿನಲ್ಲಿರುವ ರಕ್ಕಸತನವನ್ನು ಬಟ್ಟಬಯಲು ಮಾಡಿದೆ ಕಥೆಯಿದು.

**-ಮಹಾಂತೇಶಟಿಶಿಮಠ,**

ಕೆ.[illegible]

**ಹಿರಿಯ ವಿಜ್ಞಾನಿ ರೊದ್ದಂ ನರಸಿಂಹ ಮತ್ತು ಹಿರಿಯ ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.-ಸಂ**

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಸಂಕ್ರಾಂತಿಯ ಶುಭಾಶಯಗಳು



**ಬಿ.ಕೆ. ಚಂದ್ರಶೇಖರ ಗೌಡ**

ಮತ್ತು ಕುಟುಂಬ

ಮೈಸೂರು

---

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಗಣರಾಜ್ಯೋತ್ಸವದ ಶುಭಾಶಯಗಳು



**ಆರ್. ಪಂಡಿತಾರಾಧ್ಯ**

**ಮತ್ತು ಕುಟುಂಬ**

ಮೈಸೂರು

**ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಹೊಸ ವರ್ಷದ ಶುಭಾಶಯಗಳು**




**ಡಾ. ಯು. ಅರುಣಾಚಲ**
**ಮತ್ತು ಕುಟುಂಬ**
**ತೀರ್ಥಹಳ್ಳಿ**

## ತಿಂಗಳ ಕೊನೆಯ ಸಾಲುಗಳು



'ಬ್ರಹ್ಮ ಸತ್ಯ ಜಗತ್ತು ಮಿಥ್ಯ' ಎಂಬ ಸೂತ್ರವನ್ನು ಅಲ್ಲಿಗೇ ಅಪೂರ್ಣಗೊಳಿಸದೆ ಜಗತ್ತನ್ನು ಬ್ರಹ್ಮವಾಗಿ ಕಂಡರೆ ಅದೂ ಸತ್ಯ ಎಂದು ಪೂರ್ಣಗೊಳಿಸಿದರೆ ಪೂರ್ಣ ಸತ್ಯ ಅರಿವಿಗೆ ಬರುವುದು.

–ರಮಣ ಮಹರ್ಷಿ

**ಶುಭಾಶಯಗಳೊಂದಿಗೆ,**
**ಆರ್. ಉಮೇಶ್** ಅಂಡ್ ಅಸೋಸಿಯೇಟ್ಸ್
ಲೆಕ್ಕಪರಿಶೋಧಕರು, ಮೈಸೂರು
ಸಂಪರ್ಕ: ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)